ಡಾ. ಚೆನ್ನವೀರ ಕಣವಿ

ಜೀವ ಜೀವಾಳ

(ಆಯ್ದ ಕವಿತೆಗಳು)

ಜೀವ
ಜೀವಾಳ
ಜೀವ
ಜೀವಾ

ಆಯ್ಕೆ, ಪ್ರಸ್ತಾವನೆ
...ಹಳ್ಳಿ ಬಾಲಸುಬ್ರಹ್ಮಣ್ಯ

ಸಪ್ನ

ರಾಜ್ಯೋತ್ಸವ
ಹೊತ್ತಗೆಗಳು

ಡಾ. ಚೆನ್ನವೀರ ಕಣವಿ

ಜೀವ ಜೀವಾಳ

ಆಯ್ದ ಕವಿತೆಗಳು

ಆಯ್ಕೆ, ಪ್ರಸ್ತಾವನೆ

ನರಹಳ್ಳಿ ಬಾಲಸುಬ್ರಹ್ಮಣ್ಯ

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

Jeeva Jeevala : Selected poems of KANAVI. Selection and Introduction : Narahalli Balasubramanya and published by **Sapna Book House (P) Ltd.**, R.O. #11, 3rd Main Road, Gandhinagar, Bangalore- 560 009 Ph: 080-40114455

ISBN : 978-81-280-1629-5 [KB - 1785]

ಪ್ರಥಮ ಮುದ್ರಣ : ನವೆಂಬರ್, 2011

ಪುಟಗಳು : **xiv + 143**	ಪ್ರತಿಗಳ ಸಂಖ್ಯೆ : **1000**
ಬೆಲೆ ರೂ. : **90/-**	**Paper Used : 18.6 Kg (70 gsm) N.S. Maplitho**
	Book Size : 1/8th Demi

ಹಂಚಿಕೆದಾರರು :

ಕರ್ನಾಟಕ ಬುಕ್ ಏಜೆನ್ಸಿ,

ಗಾಂಧಿನಗರ,

ಬೆಂಗಳೂರು - 3

ಮುಖಪುಟ ವಿನ್ಯಾಸ : ಶ್ರೀಪಾದ

ಅಕ್ಷರ ಜೋಡಣೆ :

DATA LINK, Bangalore - 20.

ಮುದ್ರಣ : ರವಿ ಗ್ರಾಫಿಕ್ಸ್, ಬೆಂಗಳೂರು.

ಪ್ರಸ್ತಾವನೆ

ಚೆನ್ನವೀರ ಕಣವಿಯವರು ಆಧುನಿಕ ಕನ್ನಡ ಕಾವ್ಯದ ಮಹತ್ವದ ಕವಿಗಳಲ್ಲೊಬ್ಬರು. ತಮ್ಮ ಬದುಕು - ಬರಹಗಳ ಮೂಲಕ ಸಾಮಾಜಿಕ ಬದುಕಿಗೆ ಒಂದು ಘನತೆಯನ್ನು ತಂದುಕೊಟ್ಟಿರುವ ಕಣವಿಯವರು ಕನ್ನಡ ಸಂಸ್ಕೃತಿಗೆ ಕೆಲವು ಗುಣಾತ್ಮಕ ಅಂಶಗಳನ್ನು ಸೇರಿಸುತ್ತ ಸಮಕಾಲೀನ ಭ್ರಷ್ಟ ಪರಿಸರದಲ್ಲಿ ಮನುಷ್ಯನ ಬಗೆಗಿನ ನಂಬಿಕೆಯನ್ನು ಕಾಪಾಡುತ್ತಿರುವಂಥವರು.

ಕಣವಿಯವರ ಮೊದಲ ಕವನ ಸಂಕಲನ 'ಕಾವ್ಯಾಕ್ಷಿ' ಪ್ರಕಟವಾದದ್ದು 1949ರಲ್ಲಿ. ಸುಮಾರು ಆರು ದಶಕಗಳ ಕಾಲ ನಿರಂತರವಾಗಿ ಕಾವ್ಯರಚಿಸುತ್ತ ಬಂದಿರುವ ಕಣವಿಯವರ ಕಾವ್ಯನಿಷ್ಠೆ ಗಮನಿಸಬೇಕಾದಂಥದು. ಕೆ.ಎಸ್. ನರಸಿಂಹಸ್ವಾಮಿಯವರಂತೆ ಕಣವಿಯವರದೂ ಕಾವ್ಯದ ಬಗೆಗೆ ಏಕನಿಷ್ಠೆ. ಇದುವರೆಗೆ ಕಣವಿಯವರ ಹದಿನಾರು ಕವನಸಂಕಲನಗಳು ಪ್ರಕಟವಾಗಿವೆ. ಇತ್ತೀಚೆಗೆ ಅವರ ಸಮಗ್ರಕಾವ್ಯ 'ಕಣವಿ ಕಾವ್ಯ ಭಂಡಾರ' ಎರಡು ಸಂಪುಟಗಳಲ್ಲಿ ದೊರಕುತ್ತಿದೆ.

ಈಗ ಸಪ್ನ ಬುಕ್ ಹೌಸ್ ಕಣವಿಯವರ ಆಯ್ದ ಕವಿತೆಗಳ ಸಂಕಲನ 'ಜೀವ ಜೀವಾಳ'ವನ್ನು ಪ್ರಕಟಿಸುತ್ತಿದೆ. ಈ ಸಂಕಲನಕ್ಕೆ ಕವಿತೆಗಳನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಕಣವಿಯವರು ನನಗೆ ವಹಿಸುವುದರ ಮೂಲಕ ನನ್ನ ಬಗೆಗೆ ಸದ್ಭಾವ ಪ್ರಕಟಿಸಿದ್ದಾರೆ. ಅವರ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ನಮ್ಮ ಕಾಲದ ಶ್ರೇಷ್ಠ ಕವಿಯೊಬ್ಬರ ಸಮಗ್ರ ಕವಿತೆಗಳನ್ನು ಗಮನಿಸಿ ಕೆಲವನ್ನು ಆಯ್ಕೆ ಮಾಡುವ ಈ ಜವಾಬ್ದಾರಿ ಒಂದು ಗೌರವವೆಂದು ನಾನು ಭಾವಿಸಿದ್ದೇನೆ. ಈ ಆಯ್ಕೆ ಕಣವಿಯವರ ಸಮಗ್ರಕಾವ್ಯದ ಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಮಾತ್ರವಲ್ಲದೆ ಅವರ ಕಾವ್ಯದ ಬೆಳವಣಿಗೆಯನ್ನೂ ಸೂಚಿಸುವಂತೆ ರೂಪುಗೊಂಡಿದೆ. ಅವರು ಸಮಕಾಲೀನ ಪರಿಸರದೊಂದಿಗೆ ನಡೆಸಿದ ಸಂವಾದವನ್ನೂ ಇಲ್ಲಿಯ ಕವಿತೆಗಳು ಪ್ರತಿನಿಧಿಸುತ್ತವೆ.

* * *

ಕಣವಿಯವರ ಮೊದಲ ಸಂಕಲನ 'ಕಾವ್ಯಾಕ್ಷಿ'ಗೆ ಮುನ್ನುಡಿ ಬರೆದಿರುವ ದ.ರಾ. ಬೇಂದ್ರೆಯವರು ಹೇಳುತ್ತಾರೆ : "ಕಣವಿಯವರ ಕವಿತೆಗಳಲ್ಲಿ ಜೀವಂತ ಗತಿಯಿದೆ, ಮಾತಿಗೆ ಅಚ್ಚುಕಟ್ಟು ಇದೆ. ಅಲ್ಪ ಸಂತುಷ್ಟಿ ಇಲ್ಲ, ಮಹತ್ತಿನ ಕಡೆಗೆ ಸೆಳೆತವಿದೆ. ಅವರ ಬೆಳೆವ ಮನಸ್ಸೂ, ಅಂತಃಕರಣವೂ ವಿಕೃತ ಕ್ಷೋಭದಿಂದ ಮುದುಡಿಕೊಂಡಿಲ್ಲ; ವಿಪರೀತ ವಿಚಾರಗಳಿಂದ ಹರಿತವಾಗಿಲ್ಲ". ಕಣವಿಯವರ ಸಮಗ್ರ ಕಾವ್ಯದ ಸ್ವರೂಪವನ್ನು ಬೇಂದ್ರೆಯವರು ಆರಂಭದಲ್ಲಿಯೇ ಗುರ್ತಿಸಿದಂತೆ ತೋರುತ್ತದೆ. ಅವರ ಮಾತುಗಳು ಇಂದಿಗೂ ಪ್ರಸ್ತುತ.

ರೂಢಿಯಾಗಿದೆ ಒಬ್ಬೊಬ್ಬನಿಗೂ ಒಂದೊಂದು ಬಗೆಯ ನಡಿಗೆ
ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ
(ಕಾಲ ನಿಲ್ಲುವುದಿಲ್ಲ)

ಇದು ಕಣವಿಯವರು ತಮ್ಮ ಕಾವ್ಯಪಥದುದ್ದಕ್ಕೂ ಪ್ರತಿಪಾದಿಸಿಕೊಂಡು ಬಂದ ನಿಲವು. ಅವರು ತಮ್ಮ ಕಾವ್ಯಜೀವನದಲ್ಲಿ ಕನ್ನಡ ಕಾವ್ಯದ ಅನೇಕ ಪರಿವರ್ತನಶೀಲ ಘಟ್ಟಗಳನ್ನು ಹಾದು ಬಂದಿದ್ದಾರೆ. ಎಲ್ಲ ಬಗೆಯ ಚಳುವಳಿಗಳಿಗೂ ಸೂಕ್ಷ್ಮವಾಗಿ ಸ್ಪಂದಿಸಿದ್ದಾರೆ. ಆದರೆ ಯಾವ ಸಿದ್ಧಾಂತಕ್ಕೂ ಗಂಟುಬೀಳದೆ ಜೀವನಾನುಭವವನ್ನೇ ಮೂಲದ್ರವ್ಯವನ್ನಾಗಿ ಮಾಡಿಕೊಂಡು ಜೀವನಪ್ರೀತಿ ಹಾಗೂ ಮಾನವೀಯತೆಯನ್ನು ಉದ್ದಕ್ಕೂ ಜತನವಾಗಿ ರಕ್ಷಿಸಿಕೊಂಡು ಬಂದಿದ್ದಾರೆ. ಎಲ್ಲ ಬಗೆಯ ಆಕ್ರಮಣಗಳ ನಡುವೆಯೂ ತನ್ನೊಳಗಿನ ಬೆಳಕನ್ನು ನಂದಲು ಬಿಡದೆ, ವಿಕ್ಷಿಪ್ತ ಪರಿಸರದಲ್ಲೂ ಸಮಚಿತ್ತದ ಹದವನ್ನು ಉಳಿಸಿಕೊಂಡು, ಎಲ್ಲ ಬಗೆಯ ಅನುಭವ ವಲಯಗಳಿಗೂ ಮುಕ್ತವಾಗಿ ತೆರೆದುಕೊಂಡು ಕಾವ್ಯ ರಚಿಸುತ್ತ ಬಂದದ್ದು ಕಣವಿಯವರ ಪ್ರತಿಭೆಯ ವಿಶಿಷ್ಟತೆ. ಕನ್ನಡ ಕಾವ್ಯ ಈಗ ಹೊಸ ಚಲನೆಯ ದಿಕ್ಕಿನಲ್ಲಿದೆ. ಈ ಚಲನೆಯ ಗತಿ ಒಂದು ಚಳುವಳಿಯ ರೂಪದಲ್ಲಿರದೆ ಅನೇಕ ವೈಯಕ್ತಿಕ ಭಿನ್ನ ದನಿಗಳ ಮೂಲಕ ಪ್ರಕಟಗೊಳ್ಳುತ್ತಿದೆ. ಹಿನ್ನೆಲೆಗೆ ಸರಿದಿದ್ದ ಅನೇಕ ಅನುಭವ ವಲಯಗಳು ಈಗ ಮತ್ತೆ ಕಾಣಿಸಿಕೊಳ್ಳುತ್ತಿವೆ. ಇಂಥ ಹೊತ್ತಿನಲ್ಲಿ ಕಣವಿಯವರ ಕಾವ್ಯದ ಅಧ್ಯಯನ ನಮ್ಮ ಸೃಜನಶೀಲ ಮನಸ್ಸುಗಳಿಗೆ ಅನೇಕ ಒಳನೋಟಗಳನ್ನು, ಹೊಸ ಸಾಧ್ಯತೆಗಳನ್ನು ನೀಡುವ ಶಕ್ತಿ ಪಡೆದಿದೆ. ಈ ದೃಷ್ಟಿಯಿಂದ ಕಣವಿಯವರ ಈ ಆಯ್ದ ಕವಿತೆಗಳ ಸಂಕಲನ 'ಜೀವ ಜೀವಾಳ' ಅತ್ಯಂತ ಪ್ರಸ್ತುತವೆಂದು ನನ್ನ ತಿಳಿವಳಿಕೆ.

* * *

ಕಣವಿಯವರ ಇತ್ತೀಚಿನ ಕವನಸಂಕಲನದ ಹೆಸರು 'ನೀವೇ ಪ್ರಮಾಣು'. ಇದನ್ನು ಅವರು ವಚನ ಸಾಹಿತ್ಯದಿಂದ ಆರಿಸಿಕೊಂಡಿದ್ದಾರೆ. ಅಲ್ಲಮ, ಬಸವಣ್ಣ ಇಬ್ಬರಲ್ಲೂ ಈ ಪ್ರಯೋಗವಿದೆ. ಅಲ್ಲಮ 'ಗುಹೇಶ್ವರನೆಂಬುದು ಅಪ್ರಮಾಣು' ಎನ್ನುತ್ತಾನೆ. ಅಲ್ಲಮ ಅನುಭಾವ ಜಗತ್ತಿನ ಉನ್ನತ ಪ್ರತಿನಿಧಿ. ಈ ಲೋಕದ ಹಂಗಿಲ್ಲದವನು. ಈ ಲೋಕದಲ್ಲಿ ಇದ್ದೂ ಇಲ್ಲದಂತಿರುವ ನಿರ್ಲಿಪ್ತ. ಗುಹೇಶ್ವರ ಎಲ್ಲ ಮಾನದಂಡಗಳನ್ನೂ ಮೀರಿದ ಆತ್ಯಂತಿಕ ಸತ್ಯವೆನ್ನುವ ಅನುಭಾವದ ನಿಲವು ಅಲ್ಲಮನದು. ಆದರೆ ಬಸವಣ್ಣ 'ಕೂಡಲ ಸಂಗಮದೇವ, ನೀವೇ ಪ್ರಮಾಣು' ಎನ್ನುತ್ತಾನೆ. ಬಸವಣ್ಣನೂ ಅನುಭಾವದಲ್ಲಿ ಆಸಕ್ತ, ಮಹಾಭಕ್ತ. ಆದರೆ ಆತನ ಭಕ್ತಿಗೆ ಸಾಮಾಜಿಕ ಆಯಾಮವಿದೆ. ತನ್ನ ವಿಚಾರಗಳಿಂದ ಜನಸಮುದಾಯವನ್ನು ಪ್ರಭಾವಿಸುವ ಇರಾದೆಯಿದೆ; ಜನತೆಯನ್ನು ತನ್ನೊಂದಿಗೆ ಕರೆದೊಯ್ಯುವ ಹಂಬಲವಿದೆ. ಈತನಿಗೆ ಮೋಕ್ಷವೆಂದರೆ ಅದು - ಇಲ್ಲಿಯೇ, ಈ ಲೋಕದಲ್ಲೇ ಇದ್ದು ಸಾಧಿಸಬೇಕಾದದ್ದು. ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರು.

ಇದು ಎರಡು ಮಾದರಿಗಳನ್ನು ಸೂಚಿಸುತ್ತದೆ. ಕಣವಿಯವರಿಗೆ ನಿಸ್ಸಂದೇಹವಾಗಿ ಬಸವಣ್ಣ ಮಾದರಿ. ತಮ್ಮ ಕಾವ್ಯ ಈ ಲೋಕದೊಂದಿಗೆ ಎಷ್ಟರ ಮಟ್ಟಿಗೆ ಸಂಬಂಧ ಸೃಷ್ಟಿಸಿಕೊಳ್ಳುತ್ತದೆಯೋ ಅಷ್ಟರ ಮಟ್ಟಿಗೆ ಅದು ಸಾರ್ಥಕ ಎಂದು ಭಾವಿಸಿದವರು. ಬಸವಣ್ಣನ ಭಕ್ತಿಗೆ ಸಾಮಾಜಿಕ ಆಯಾಮವಿದ್ದಂತೆ ಕಣವಿಯವರ ಕಾವ್ಯರಚನೆಯ ಹಿನ್ನೆಲೆಯಲ್ಲಿಯೂ ಸಾಮಾಜಿಕ ಪ್ರಜ್ಞೆಯ ತುಡಿತವಿದೆ.

ಶ್ರಾವಣದ ಮೋಡದ ರೀತಿ : ಅವಸರದ ಪ್ರೀತಿ.
ಕಾರ್ತಿಕದಲ್ಲಿ ಪೂರ್ತಿ ಬೇರೆ ತರಹ. ಬೆಟ್ಟದ
ಹಾಗೆ ಗಟ್ಟಿಯಾಗಿ ಒಂದೆಡೆ ನಿಂತು, ಮೆಲ್ಲಗೆ
ಅರಳಿ, ಹಲವು ಬಗೆ ಶಿಲ್ಪದಲಿ ಕಡೆದ ಪ್ರತಿಮೆ
ಗೆಲ್ಲುಪಮೆ? ಸಂಜೆ ಸೂರ್ಯನ ಬಣ್ಣದೋಕುಳಿಗೆ
ಅಪೂರ್ವ ಜೀವಕಳೆ, ನಿಮಿಷ ನಿಮಿಷಕ್ಕೊಂದು
ಭಂಗಿ, ಕೆಳಗೆ ಕಪ್ಪಗೆ ನೆಲಕೆ ಕಾಲೂರುವುದು
ಮಳೆ. ಕತ್ತಲಾದಂತೆ ಮಿಂಚು ಕೋರೈಸಿ
ಗುಡುಗುವುದು : ದೂರದ ಗುಡಿಯ ನಗಾರಿಯಂತೆ.

ಕಣ್ಣು ತಣಿಸುತ ಮಣ್ಣಿಗುಣಬಡಿಸುವುದು ಮೋಡ
ಕಲೆಗಾಗಿ ಕಲೆಯುಂಟೆ? ಜನ ಬದುಕುವುದು ಬೇಡ?

(ಕಾರ್ತಿಕದ ಮೋಡ)

ಆಗಸದಲ್ಲಿ ಚೆಲುವಿನ ಚಿತ್ತಾರಗಳನ್ನು ಸೃಷ್ಟಿಸುವ ಮೋಡ ನಮ್ಮ ಕಣ್ಣು ತಣಿಸುತ್ತಲೇ ಕಡೆಗೆ ಮಳೆಯ ಮೂಲಕ ಮಣ್ಣಿಗೆ ಉಣಬಡಿಸುತ್ತದೆನ್ನುವ ಚಿತ್ರ ಕಣವಿಯವರ ಕಾವ್ಯೋದ್ಯೋಗದ ನಿಲವನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. 'ಮೋಡ' ಕಣವಿಯವರಲ್ಲಿ ಒಂದು ಪ್ರಧಾನ ರೂಪಕವಾಗಿ ಅವರ ಕಾವ್ಯದುದ್ದಕ್ಕೂ ಕಾಣಿಸುತ್ತದೆ. 'ನಿನ್ನ ರೂಪ ಲಾವಣ್ಯಕೆ ಬೀಗಬೇಡ ಎಂದಿಗೂ' ಎಂದು ಅವರು ಕವಿತೆಯನ್ನು ಮತ್ತೆ ಮತ್ತೆ ಎಚ್ಚರಿಸುತ್ತಾರೆ. 'ಒಡೆದುಹೋದ ಮನಸುಗಳಲಿ ಹಗೆಯ ಕಿಡಿಯ ನಂದಿಸು । ಸಿಡಿದು ನಿಂತ ಹೃದಯಗಳನು ಪ್ರೀತಿಯಲ್ಲಿ ಬಂಧಿಸು' ಎಂದು ಕವಿತೆಯನ್ನು ಕಣವಿ ಪ್ರಾರ್ಥಿಸುತ್ತಾರೆ. ಚೆಲುವಿನ ಆರಾಧನೆ, ಆರೋಗ್ಯಕರ ಸಮಾಜವನ್ನು ಕಟ್ಟುವ ಹಂಬಲ - ಇವೆರಡನ್ನೂ ಒಂದು ಬಿಂದುವಿನಲ್ಲಿ ಹಿಡಿಯುವ ರೀತಿಯಲ್ಲಿ ಕಣವಿಯವರ ಕವಿತೆಗಳ ವಿನ್ಯಾಸವಿದೆ. ಸು.ರಂ. ಎಕ್ಕುಂಡಿಯವರಲ್ಲಿಯೂ ಇದೇ ವಿನ್ಯಾಸವನ್ನು ನಾವು ಕಾಣಬಹುದು. ಚೆಲುವು ಸಾಮಾಜಿಕ ಎಚ್ಚರವಾಗಿ ರೂಪಾಂತರವಾಗುವ ಕ್ರಮವನ್ನು, ಇದರಿಂದಾಗಿಯೇ ಸಂವಹನಶೀಲತೆಯಿಂದ ದೂರವಾಗದ ಕಾವ್ಯಲಯವನ್ನು ಕಣವಿಯುವರಂತಹ ಕವಿಗಳು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಂಡಂತೆ ತೋರುತ್ತದೆ.

* * *

ಕಣವಿಯವರ ಆರಂಭದ ಕವಿತೆಗಳು ನವೋದಯದ ದಟ್ಟಪ್ರಭಾವದಿಂದ ರೂಪುಗೊಂಡ ರಚನೆಗಳು. ನಿಸರ್ಗಪ್ರೀತಿ, ಮಹತ್ತಾದುದರ ಬಗೆಗೆ ತುಡಿತ, ಬದುಕಿನಲ್ಲಿ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕೆಂಬ ಹಂಬಲ - ಇವೆಲ್ಲ ಇಲ್ಲಿ ಗಟ್ಟಿದನಿಯಲ್ಲಿಯೇ ಪ್ರಕಟವಾಗುತ್ತವೆ. ಮಧುರಚೆನ್ನ ಆ ಕಾಲಕ್ಕೆ ಕಣವಿಯವರಿಗೆ ಪ್ರಿಯವಾಗಿದ್ದ ಕವಿ.

ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯವಾಸೆ,
ಬಾನದೇಗುಲದಿ ನಮ್ರವಾಗಿ ಮೈದುಂಬಿ ನಿಲ್ಲುವಾಸೆ,
ಮಳೆಯಬಿಲ್ಲ ಮೈದೊಡವ ಧರಿಸಿ ಮಣಿಹನಿಗಳಾಗುವಾಸೆ,
ಚಂದ್ರನೆದೆಯ ತಿಳಿಯೊಲವನುಂಡು ಶ್ರೀ ಕಾಂತಿ ಪಡೆಯುವಾಸೆ.

(ಮೇಘೋಪಾಸನೆ)

ಭಾವಪ್ರಧಾನವಾದ ಇಂಥ ರಚನೆಗಳು ಆರಂಭದಲ್ಲಿ ಹೇರಳವಾಗಿ ಕಂಡರೂ ಇಂಥಲ್ಲಿಯೂ ಕಣವಿಯವರ ಕಾವ್ಯ ಮುಂದೆ ಹಿಡಿವ ಹಾದಿಯ ಬಗ್ಗೆ ಕೆಲವು ಸೂಚನೆಗಳು ಸಿಗುತ್ತವೆ. 1953 ರಲ್ಲಿ ಪ್ರಕಟವಾದ 'ಆಕಾಶಬುಟ್ಟಿ' ಕಣವಿಯವರ ಕಾವ್ಯ ಜೀವನದಲ್ಲಿ ಒಂದು ಮುಖ್ಯಘಟ್ಟ. ಇದರಲ್ಲಿ ಅವರು ಪ್ರಭಾವಗಳಿಂದ ತಪ್ಪಿಸಿಕೊಂಡು ತಮ್ಮನ್ನು ತಾವು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಮುಂದೆ ನಾವು 'ಕಣವಿತನದ ಕವಿತೆಗಳು' ಎಂದು ಹೇಳಬಹುದಾದ ರೀತಿಯ ಕವಿತೆಗಳ ಹೊಳಹುಗಳು ಸ್ಪಷ್ಟವಾಗಿ ಇಲ್ಲಿ ಕಾಣಿಸುತ್ತವೆ.

ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ಧಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು।
ನೋಡಿದೆಯ ಕವಿಯೆ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ?
ಆತ್ಮಬಲದೆದುರು ಮೇಣುಳಿದ ಬಲವೆ?
ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳ ದ್ವೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು!

(ಆಕಾಶಬುಟ್ಟಿ)

ಏಕಾಂಗಿಯಾದರೂ ಅಡ್ಡಿಯಿಲ್ಲ, ಆತ್ಮಬಲ ಬೆಳೆಸಿಕೊಂಡು ತನ್ನದೇ ಹಾದಿಯಲ್ಲಿ ಮುನ್ನುಗ್ಗಬೇಕೆಂಬ ಅಭೀಪ್ಸೆ ಕಣವಿಯವರ ಕಾವ್ಯಪಥವನ್ನು ರೂಪಿಸಿದೆ. ಮಾತ್ರವಲ್ಲ, ಇದನ್ನು ಮನದುಂಬಿ ಹಾಡಬೇಕೆನ್ನುವ ಜೀವನೋತ್ಸಾಹದ ಲಯವೂ ಅವರ ಕಾವ್ಯ-ನಡಿಗೆಯಲ್ಲಿ ಸಹಜವೆಂಬಂತೆ ಸೇರಿಕೊಂಡಿದೆ. ಕಣವಿಯವರು ಮೂಲತಃ ಭಾವಗೀತಾತ್ಮಕ ಪ್ರತಿಭೆಯ ಕವಿ.

ಅದೇ ಕಾಲದಲ್ಲಿ ಬರೆಯುತ್ತಿದ್ದ ಪ್ರಖರ ಪ್ರತಿಭೆಯ ಅಡಿಗರೂ ಸಹ ಬಗೆಯೊಳಗನೇ ತೆರೆದು ತನ್ನ ನುಡಿಯೊಳೇ ಬರೆಯುವ ತವಕದಲ್ಲಿ 'ವ್ಯಕ್ತಿತ್ವ ವಿಕಾಸ'ವನ್ನೇ ಮೂಲವಸ್ತುವಾಗಿಟ್ಟುಕೊಂಡು ಕಾವ್ಯ ರಚಿಸುತ್ತಿದ್ದರು. ಕಣವಿಯವರಲ್ಲೂ 'ವ್ಯಕ್ತಿಶಕ್ತಿಯ ವಿಕಾಸ'ದ ಆಶಯ ಕಾಣಿಸುತ್ತದೆ. ಅಡಿಗರಲ್ಲಿ ಈ ಆಶಯ ಕವಿತೆಯಿಂದ ಕವಿತೆಗೆ ಬೆಳೆಯುತ್ತ ಸಮಾಜದ ತುಳಿತಕ್ಕೆ ಸಿಕ್ಕಿ ಚಹರೆ ಕಳೆದುಕೊಳ್ಳುತ್ತಿರುವ ವ್ಯಕ್ತಿತ್ವವನ್ನು ತನ್ನಿಷ್ಟದಂತೆ ರೂಪಿಸಿಕೊಳ್ಳುವ ಇಷ್ಟದೇವತಾ ವಿಗ್ರಹದ ಅಸಲು ಕಸುಬಾಗಿ ಮಹತ್ವಾಕಾಂಕ್ಷೆಯ ಹೋರಾಟದ ಕಾವ್ಯವಾದರೆ, ಕಣವಿಯವರಲ್ಲಿ ಇದು ಅವರ ಬಹುಮುಖೀ ಆಸಕ್ತಿಗಳಲ್ಲೊಂದಾಗಿ ಅನುಭವದ ಇತರ ವಲಯಗಳನ್ನೂ ಒಳಗೊಳ್ಳುತ್ತ ವಿಸ್ತಾರವನ್ನೂ, ವೈವಿಧ್ಯವನ್ನೂ ಪಡೆಯಿತು. ಅಡಿಗರಲ್ಲಿ ಸಂಘರ್ಷ ಮುಖ್ಯವಾದರೆ ಕಣವಿಯವರ ಪ್ರತಿಭೆ ಸಂವಾದದ ಮಾದರಿ ಹಿಡಿಯಿತು.

ಆಧುನಿಕ ಕನ್ನಡ ಸಂವೇದನೆ ಸಂಘರ್ಷವನ್ನು, ಪ್ರತಿಭಟನೆಯನ್ನು ಸಾಹಿತ್ಯದ ಪ್ರಧಾನ ಲಕ್ಷಣವೆಂದು ಗುರ್ತಿಸಿಕೊಂಡಿದೆ. ಸಂಘರ್ಷವಿಲ್ಲದ ಕಾವ್ಯ ನೀರಸವೆಂಬುದು ಇವರ ನಿಲವು. ಇಂಥ ಸಂದರ್ಭದಲ್ಲಿ ಕಣವಿಯಂಥವರ ಕಾವ್ಯ ಹೊಸ ಬಗೆಯ ಕಾವ್ಯ ಮೀಮಾಂಸೆಯನ್ನು ಬಯಸುತ್ತದೆ ; ನಮ್ಮ ಕಾವ್ಯ ಸಂವೇದನೆಗೆ ಸವಾಲು ಒಡ್ಡುತ್ತದೆ. ಹೀಗಾಗಿಯೇ ಈ ಮಾದರಿಯ ಕವಿಗಳು ಶ್ರೇಷ್ಠ ಕಾವ್ಯಶಿಲ್ಪಿಗಳಾಗಿರುತ್ತಾರೆ. ಕವಿತೆಯನ್ನು ತಮ್ಮ ಕುಸುರಿ ಕೆಲಸದ ಮೂಲಕ ಚೆಲುವಾಗಿಸಿ ಗಮನಸೆಳೆಯುತ್ತಾರೆ. ಕಣವಿಯವರು ಅದ್ಭುತ ಕುಶಲಕರ್ಮಿ. ಅವರ ಭಾಷೆಯ ಬಳಕೆ ಹಾಗೂ ಕಲೆಗಾರಿಕೆಯ ಬಗ್ಗೆ ಕನ್ನಡ ವಿಮರ್ಶೆ ಈಗಾಗಲೇ ಸಾಕಷ್ಟು ಚರ್ಚಿಸಿದೆ. 'ಸಾನೆಟ್' ಬಳಕೆಯಲ್ಲಂತೂ ಕಣವಿಯವರದು ಅನನ್ಯಸಾಧನೆ. ಮಾಸ್ತಿ, ಬೇಂದ್ರೆ, ಕುವೆಂಪು, ಪುತಿನ ಮೊದಾದವರು ಬಳಸಿದ ಸಾನೆಟ್‌ಗೆ ಕಣವಿ ಹೊಸ ರೂಪ ನೀಡಿದರು. ವ್ಯಕ್ತಿಚಿತ್ರಗಳ ಅವರ ಸಾನೆಟ್‌ಗಳಂತೂ ವಿಶೇಷವಾಗಿ ಗಮನ ಸೆಳೆಯುತ್ತವೆ. ಅವೆಲ್ಲವನ್ನೂ ಒಟ್ಟಿಗಿಟ್ಟರೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಎಳೆಯನ್ನು ನಾವಲ್ಲಿ ಕಾಣಬಹುದಾಗಿದೆ. ತಮ್ಮ ವಿಚಾರಗಳ ಪ್ರತಿಪಾದನೆಗೂ ಕಣವಿಯವರು ಸಾನೆಟ್‌ನ್ನು ಪರಿಣಾಮಕಾರಿಯಾಗಿ ಬಳಸಿದ್ದಾರೆ. ಶಾಂತಿನಾಥ ದೇಸಾಯಿಯವರು ಹೇಳುವಂತೆ - ಕಣವಿಯವರ ಸಾನೆಟ್‌ಗಳು 'Intellectual Lyrics' (ವೈಚಾರಿಕ ಭಾವಗೀತೆಗಳು).

* * *

ಈ ಸುನೀತ ನವನೀತವ ಕಾಸಿ ತುಪ್ಪ ತೆಗೆ
ತಳಕಿಲಿಯಲಿ ಗಷ್ಟು ಮೇಲೆ ತಿಳಿಯಾಗಲಿ ಬಗೆ

ಎಂತಹ ನೋವಿನ ಸಂದರ್ಭದಲ್ಲಿಯೂ ಜೀವಚೈತನ್ಯದ ಸೆಲೆಯನ್ನುಳಿಸಿಕೊಳ್ಳಬೇಕು; ಬದುಕಿನ ಬಗೆಗಿನ ಪ್ರೀತಿಯನ್ನು, ಚೆಲುವನ್ನು ಆಸ್ವಾದಿಸುವ ಮನೋಭಾವವನ್ನು ಕಳೆದುಕೊಳ್ಳಬಾರದು; ಉದ್ವಿಗ್ನಗೊಳ್ಳದೆ ಸಮಾಧಾನವಾಗಿ ಈ ಬದುಕನ್ನು ಅನುಭವಿಸಬೇಕೆನ್ನುವುದು ಕಣವಿಯವರ ಅಭೀಪ್ಸೆ. ಈ ಸಮಚಿತ್ತದ ಹದದಿಂದಾಗಿ, ನಿರುದ್ವಿಗ್ನ ಸ್ಥಿತಿಯಿಂದಾಗಿ ಕಣವಿಯವರ ಕಾವ್ಯ ಮೆಲುದನಿಯ ಕಾವ್ಯವಾಗಿದೆ. ಮೆಲುದನಿಯಿಂದಾಗಿ ಹದಗೆಡದೆ ಮಾತನಾಡುವುದು, ಶಕ್ತಿಯನ್ನು ದೀರ್ಘಕಾಲ ಕಾಪಾಡಿಕೊಳ್ಳುವುದು ಅವರಿಗೆ ಸಾಧ್ಯವಾಗಿದೆ. ಆರು ದಶಕಗಳ ನಂತರವೂ ಕಣವಿಯವರ

ಕಾವ್ಯೋತ್ಸಾಹ ಈಗಲೂ ಮೊದಲಿನ ಕಸುವನ್ನೇ ಉಳಿಸಿಕೊಂಡಿದೆ. 'ಹೋಗಬೇಡ ಕವಿತೆ ನೀನು, ಬಾಗಬೇಡ ಯಾರಿಗೂ । ತೂಗಿ ನೋಡಿ ಬೆಲೆಯ ಕಟ್ಟು ಹೂವಿನಂತೆ ನಾರಿಗೂ' ಎಂಬ ವಿವೇಕವನ್ನು ಕಾಪಾಡಿಕೊಂಡಿದೆ. ಆದರೆ ಸಮಕಾಲೀನ ವಾಸ್ತವದ ಕಟು ಅನುಭವಕ್ಕೆ, ನಯವಂಚಕತನಕ್ಕೆ, ಕೊಳಕಿಗೆ ಕಣವಿಯವರ ಕವಿಚೇತನ ನಡುಗಿದೆ, ಸಿಡಿಲೆರಗಿದ ಅನುಭವವಾಗಿದೆ. ಈ ಹಂತದ ಕವಿತೆಗಳಲ್ಲಿ ಆಧುನಿಕ ಬದುಕಿನ ಕಡೋರ ದರ್ಶನ ಅತ್ಯಂತ ಪರಿಣಾಮಕಾರಿಯಾಗಿ ಅವರಲ್ಲಿ ಕಾಣಿಸಿಕೊಳ್ಳುತ್ತದೆ.

> ಮೊನ್ನೆ ಮೊನೆಯೇ ಆಯಿತೆನಗೆ ತಾನಾಗಿಯೇ
> ಇವನೊಡಲ ಬ್ರಹ್ಮಾಂಡದ ಮಹಾದ್ಭುತ ವಿಶ್ವರೂಪದ ದರ್ಶನ;
> ಸಿಡಿಲೆರಗಿದಂತಾಯ್ತು ನಡುಗಿಹೋಯಿತು ನನ್ನ ಅತ್ಯಲ್ಪ ಚೇತನ.
>
> (ಅಪರಾವತಾರ)

ನಾಗರಿಕ ಬದುಕಿನ ವಿಕೃತಿಗೆ ಕಣವಿಯವರ ಪ್ರಜ್ಞೆ ತೀವ್ರವಾಗಿ ಸ್ಪಂದಿಸಿದೆ. ಸಾಮಾಜಿಕ ಮೌಲ್ಯಗಳು ಅವನತಿ ಹೊಂದುತ್ತಿರುವ ಬಗ್ಗೆ ಗಾಢ ವಿಷಾದ ವಿಡಂಬನೆ ಬೆರೆತ ಧಾಟಿಯಲ್ಲಿ ವ್ಯಕ್ತವಾಗುತ್ತದೆ. ಸುತ್ತಮುತ್ತ ಆವರಿಸಿದ ನಿರಾಶಾವಾದದ ನೆರಳು ಅವರ ಮೇಲೂ ಬಿದ್ದಿದೆ. ಯಾಂತ್ರಿಕ ಬದುಕಿನ ನೀರಸತೆಯ ಬೇಸರವೂ ಅವರ ಕಾವ್ಯಲಯದ ಮೇಲೆ ಪರಿಣಾಮ ಬೀರಿದೆ. ಆದರೆ ಈ ಎಲ್ಲವೂ ಅವರನ್ನು ಸಿನಿಕರನ್ನಾಗಿಸದೆ, ತಮ್ಮ ಮೂಲನಂಬಿಕೆಯನ್ನು ಪಕ್ವಗೊಳಿಸಿಕೊಳ್ಳಲು ನೆರವಾಯಿತು. ಜಿ.ಎಸ್. ಆಮೂರ ಅವರು ಗುರ್ತಿಸುವಂತೆ 'ನವ್ಯ ಕಾವ್ಯದ ಅಗ್ನಿದಿವ್ಯದಲ್ಲಿ ಕಣವಿಯವರ ಕಾವ್ಯ ತನ್ನ ಆಶಯ-ಆಕಾರಗಳ ಮುಗ್ಧತೆಯನ್ನು ಕಳೆದುಕೊಂಡು ಪ್ರಬುದ್ಧತೆಯನ್ನು ದೊರಕಿಸಿಕೊಂಡಿತು. ಸೌಂದರ್ಯಪಕ್ಷಪಾತದ ಜೋಲಿಯಿಂದ ಸುಧಾರಿಸಿಕೊಂಡು ಅಸುಂದರವಾದುದರ, ಅಸಹ್ಯವಾದುದರ ಅರ್ಥವಂತಿಕೆಯನ್ನೂ ಗ್ರಹಿಸಿ ಜೀವನವನ್ನು ಸಮಗ್ರವಾಗಿ ನೋಡುವ ಸಂಕೀರ್ಣ ದೃಷ್ಟಿಯನ್ನು ಪಡೆದುಕೊಂಡಿತು. ಆದರೆ ತನ್ನ ಮೂಲದ್ರವ್ಯವಾದ ಜೀವಸತ್ವದಲ್ಲಿಯ ಶ್ರದ್ಧೆಯನ್ನಾಗಲೀ, ಸೃಜನಶೀಲತೆಯ ಲವಲವಿಕೆಯನ್ನಾಗಲೀ ಕಳೆದುಕೊಳ್ಳಲಿಲ್ಲ.'

ಸಮಕಾಲೀನ ಬದುಕಿನಲ್ಲಿ ಮನುಷ್ಯ ಸ್ವಾರ್ಥಕೇಂದ್ರಿತನಾಗಿ ಸನ್ನಿವೇಶಕ್ಕೆ ತಕ್ಕಂತೆ ವರ್ತಿಸುತ್ತ, ವೇಷ, ದನಿ ಬದಲಾಯಿಸಿ ತನ್ನ ಬೇಳೆ ಬೇಯಿಸಿಕೊಳ್ಳುವ ಆತನ ನಟನಾಕೌಶಲವನ್ನು ಕಣವಿಯವರು ಪರಿಣಾಮಕಾರಿಯಾಗಿ ವಿಡಂಬಿಸುವಂತೆಯೇ ಮನುಷ್ಯ-ಪ್ರಕೃತಿ, ಮನುಷ್ಯ-ಕಾಲ, ಮನುಷ್ಯ-ದೈವ, ಚರಿತ್ರೆ ಮತ್ತು ಮನುಷ್ಯ ಹೀಗೆ ಹಲವು ನೆಲೆಗಳಲ್ಲಿ ಮನುಷ್ಯನನ್ನು ಇಟ್ಟು ನೋಡುವ ಗಂಭೀರ ಚಿಂತನೆಗೂ ತೊಡಗುತ್ತಾರೆ. ಋತುಸಂಸಾರ, ಕಾಲಾತೀತ, ಮಣ್ಣಿನ ಮೆರವಣಿಗೆ, ಕೊನೆಯ ನಿಲ್ದಾಣ, ಯುಗಯುಗದ ಹಾಡು, ಕಾಲ ನಿಲ್ಲುವುದಿಲ್ಲ, ನೆಲಮುಗಿಲು ಮೊದಲಾದವು ಈ ದೃಷ್ಟಿಯಿಂದ ಕಣವಿಯವರ ಮಹತ್ವದ ರಚನೆಗಳು ಮಾತ್ರವಲ್ಲ, ಕನ್ನಡ ಕಾವ್ಯ ಚರಿತ್ರೆಯಲ್ಲಿಯೂ ಗುರ್ತಿಸಿ ಚರ್ಚಿಸಬೇಕಾದ ಕವಿತೆಗಳು.

'ಒಂದು ಪರಡಿಯಲಿ ಬದುಕು, ಇನ್ನೊಂದರಲಿ ಭಗ/ವಂತ ತೂಗಿ ನೋಡಲು ಯಾವುದು ಮೇಲೆ ಕೆಳಗೆ' ಎಂದು ಪ್ರಶ್ನಿಸುತ್ತ ಎಂಭತ್ತರ ನಂತರವೂ ಪುಟಗೊಳಲಿ ಪಂಚೇಂದ್ರಿಯದ ಪರುಟವಣೆ ಎಂದು ಈ ಬದುಕನ್ನೇ ಒಪ್ಪಿಕೊಳ್ಳುವ ಕಣವಿಯವರಿಗೆ -

ಹಂಗರಹಳ್ಳಿ । ಹ್ಯಾಂಗ ತಡಕೊಂಡೆ ಕರುಳಿನಲಿ
ಉರಿಸಿದ ಕೊಳ್ಳಿ? ಕಲ್ಲೆದೆಗಳೇ ಜಲ್ಲಿ ತುಂಬಿ
ಉರುಳಿಸಿದ ಕುರುಡು ಚಕ್ರದ ಲಾರಿ ಮೈದುಂಬಿ
ಹಸಿರು ಬೆಟ್ಟದ ನಡುವೆ ಕೋರೆಹಲ್ಲಿನ ಕ್ವಾರಿ.

(ಹಂಗರಹಳ್ಳಿ)

ಎಂಬ ಪ್ರಶ್ನೆ ನಿರಂತರ ಕಾಡುತ್ತದೆ. ಜನಸಂಖ್ಯೆ ನೂರುಕೋಟಿ ದಾಟಿದ್ದರೂ ಅವರ ಮನಸ್ಸಿನಲ್ಲಿ 'ಮನುಷ್ಯರೆಲ್ಲಿದ್ದಾರೆನುವಶಂಕೆ' ಹಾಗೆಯೇ ಉಳಿದಿದೆ. ಮಗಮಗಿಸುವ ಹೂವಿನ ಸುತ್ತ ಉರಿ ಧಗಧಗಿಸುತ್ತಿದೆ. ಶುಭನುಡಿಯುವ ಹಕ್ಕಿಗಳಿಗೆ ಬಂದೂಕು ಗುರಿ ಮಾಡಿ ನಿಂತಿವೆ. ಬಾಂಬಿಗಿಂತ ಬಲವತ್ತರವಾಗಿ ದ್ವೇಷದ ಕಿಡಿ ಎಲ್ಲ ಕಡೆ ಹಬ್ಬಿದೆ. ಒಳಗೊಳಗೇ ಬಾಳಕುಡಿ ಕಮರುತ್ತಿದೆ. ಎಷ್ಟು ಆಳಕ್ಕೆ ಕೊರೆದರೂ ನೀರ ಸೆಲೆ ಸಿಗಲಾರದ ಹಾಗೆ ಬತ್ತಿಹೋಗಿದೆ ಈ ಬದುಕು. ಈ ಎಲ್ಲದರ ಅರಿವು ಕಣವಿಯವರಿಗೆ ಈಗಲೂ ಇದೆ. ಆದರೆ ಇದೆಲ್ಲದರ ನಡುವೆಯೂ -

ಬತ್ತದಿಹುದು ಚೆಲುವಿನೂಟೆ ನೆಲದ ಒಡಲೊಳೆಂದಿಗೂ
ದುಡಿವ ಕೈಗೆ ಶಕ್ತಿ ಬರಲಿ; ಮಳೆಯ ಸುರಿಸು ಧರಣಿಗೆ
ಹಳೆಯ ಕೊಳೆಯ ಕೊಚ್ಚಿ ತೊಳೆಯೆ ಹಚ್ಚಹಸಿರು ಹಾಡಿಗೆ.

(ಕವಿತೆಗೆ)

ಎಂದು ಹಾಡುವ ಶಕ್ತಿಯನ್ನೂ ಅವರ ಕವಿತೆ ಉಳಿಸಿಕೊಂಡಿದೆ. ಬದುಕಿನ ಜೀವಕಳೆಯನ್ನು, ಸಹಬಾಳ್ವೆಯ ಶುಚಿತ್ವವನ್ನು, ಹತ್ತು ಹಲವು ರುಚಿಗಳನ್ನು ಆಸ್ವಾದಿಸಿ ಗೌರವಿಸುವ ಬಹುಮುಖೀ ಪ್ರಜ್ಞೆಯನ್ನು ಕಣವಿಯವರ ಕಾವ್ಯ ಇಂದಿಗೂ ಅಂತರಂಗದ ದನಿಯಾಗಿ ಹಾಡುತ್ತಿದೆ.

ನೆಲದಡಿಯ ಮಣ್ಣೆಗಂಟಿಕೊಳ್ಳಲಿ
ಬದುಕು. ಆ ತೃಪ್ತಿ ಹುಲ್ಲು ಮೊಳಯಿಸುವ ತತ್ವ.

(ನೀವೇ ಪ್ರಮಾಣು)

ಕವಿತೆಗಳನ್ನು ಆಯ್ಕೆ ಮಾಡಿ, ಆ ನೆಪದಲ್ಲಿ ಕಣವಿಯವರ ಕಾವ್ಯ ಜಗತ್ತಿನ ಜೊತೆ ಅನುಸಂಧಾನ ಮಾಡುವ ಅವಕಾಶ ಒದಗಿಸಿದ ಸಪ್ನ ಬುಕ್ ಹೌಸ್‌ನ ನಿತಿನ್ ಷಾ ಅವರಿಗೂ, ಪ್ರಿಯ ಮಿತ್ರ ದೊಡ್ಡೇಗೌಡರಿಗೂ, ಸೊಗಸಾಗಿ ಮುದ್ರಿಸಿದ ರವಿ ಗ್ರಾಫಿಕ್ಸ್ ಮುದ್ರಣಾಲಯದ ಗೆಳೆಯರಿಗೂ ನಾನು ಕೃತಜ್ಞ.

ನರಹಳ್ಳಿ ಬಾಲಸುಬ್ರಹ್ಮಣ್ಯ

ಪರಿವಿಡಿ

ಒಳದನಿ

ನನ್ನೆದೆಯ ಗೂಡಿನೊಳಗಾವುದೋ ಹಕ್ಕಿಯುಲಿ
ಚಿಲಿಪಿಲಿಸುತಿಹುದಾವ ನಿಮಿಷದಲ್ಲು;
ಜಗದ ಮೊರೆ-ಕರೆಗಳಿಗೆ ಚೆಲುವು ಚಿನ್ನಾಟಕ್ಕೆ
ದನಿಗೂಡಿ ಹಾಡುತಿದೆ ಕನಸಿನಲ್ಲು!

ಹಾಡ ಸವಿಸೊಲ್ಲಿನಲೆ ತೋಡುತಿದೆ ಮತ್ತೊಂದು
ನೋವು ನರಳಾಟಗಳ ವಿಷಮ ಬಿಂದು;
ಮಣ್ಣ ಕಣಕಣದಲ್ಲಿ ಮರದ ಹನಿಹನಿಯಲ್ಲಿ
ಹುಡುಕುತಿಹುದಾವುದನೊ ಮರೆಗೆ ನಿಂದು.

ಎದೆಗುದಿಯೊ, ಹದಗೆಟ್ಟ ಮುದಗೆಟ್ಟ ದನಿಯೊ
ಒಲವಿನಲೆಯಲೆಯಿಂದ ತೂರ್ವ ಸೀರ್ಪನಿಯೊ
ಹಲವಾರು ಕೊರತೆ-ಕೊರಕಲಿನ ಸೀಳ್ದನಿಯೊ
ಒಳದನಿಯೆ ಇವಕೆಲ್ಲ ಉಸಿರಾದುದೇನೊ.

•

ಕಾವ್ಯಾಕ್ಷಿ

ಆ ಗಿಡಾ, ಈ ಗಿಡಾ
ಒಂದೊಂದೂ ಜೇಂಗೊಡಾ;
ಬಾಂದೇವಿಗೆ
ನೆಲದಾಯಿಯ
ಹೂಗೊಂಡೆಯ ಹೊಂಗೊಡಾ

ಯಾವ ಹಸಿರೊ, ಯಾವ ಹೆಸರೊ
ತರುಲತೆಗಳ ತೋರಣಾ;
ಬಂದುದೆಲ್ಲಿ?
ಬೆಳೆಯಿತಲ್ಲಿ?
ನಿಷ್ಕಾರಣ ಕಾರಣಾ

ನೀಲಾಂಗಣ, ತಿರೆ-ಕಂಕಣ
ಕೆಂದಳಿರಿನ ಕಾವಣಾ;
ಅಲ್ಲಿ ಇಲ್ಲಿ
ಎಲ್ಲೆಲ್ಲಿಯು
ಸವಿಹಾಡಿನ ರಿಂಗಣಾ

ಹೂ ಹೂವಿಗೆ ದುಂದುಂಬಿಯ
ಮೈಕೈಗಳ ಸ್ಪರ್ಶನಾ;
ಅಪರಂಜಿಯ
ಅನುರಾಗದ
ಮಾಧುರ್ಯದ ಬಂಧನಾ

ಮಾಂದಳಿರಿನ ಮೇಲ್ಮಾಳಿಗೆ
ಮಧುಕೋಗಿಲೆಗಾಸರಾ;
ಎದೆಯುಬ್ಬಿಸಿ
ಕುಕಿಲಿಡುತಿರೆ
ಎಲೆ ಎಲೆಗಳ ಮರ್ಮರಾ

ಅಳಲುಸಿರಿಗೆ ಸುಸಿಲುಸಿರಿನ
ತಂಪಿನ ತಳಿ ಚಿಮುಕಲಾ;
ಹಾಲುಗಳ್ಳಿ
ಜೋಲು ಬಳ್ಳಿ
ತೂಗುಮಂಚ ಚಂಚಲಾ

ಜುಳು ಜುಳು ನದಿ, ಕಲಕಲ ರುತಿ
ಜೋಗುಳದುಲಿ ಕೇಳಲಾ;
ವಿಶ್ವದೊಡಲ
ತಣಿಸಲೆಂದು
ಹಾಲ್ಜೇನಿನ ಮಳೆಯಲಾ

ತಿರೆಯ ನವಿರು ಹುಲ್ಲು ಹಸಿರು
ಮಕಮಲ್ಲಿನ ಮುಸುಗಲಾ
ಮುಗುದೆ ತನ್ನ
ಮನೆಗೆಲಸದಿ
ಗುಣುಗುಣಿಸುವ ಹಾಡಲಾ

ಹಕ್ಕಿ ಜೋಡಿ ಒಂದುಗೂಡಿ
ಉಲಿಯುತಿರುವ ಹುಮ್ಮಸ್ಸಾ;
ಬನದೈಸಿರಿ
ಕುಶಲ ಕುಂಚ
ಚಿತ್ರದಂತೆ ಹೊಸ ಹೊಸಾ

ತನಗೆ ತಾನೆ ತಿಳಿಯದಂತೆ

ತುಳುಕಿತಹಹ ಭಾವನಾ

ಕಮ್ಮಲರಿಗೆ

ಕವಿ-ಗಾಳಿಗೆ

ಕಾವ್ಯಾಕ್ಷಿಗೆ ವಂದನಾ

●

ಮೇಘೋಪಾಸನೆ

ಎಂದಿನಿಂದಲೋ ಬಾಸಬಟ್ಟೆಯಲಿ ಮೋಡ ಓಡುತಿಹವು!
ನೋಡ ನೋಡುತಿರೆ ಕಾಡು ಮೇಡುಗಳ ದಾಟಿ ಸಾಗುತಿಹವು;
ಗಾಳಿ-ಗೆಳೆಯನೊಡನಾಟವಾಡಿ ಬೇಸರವ ನೀಗುತಿಹವು,
ಹಸುಳರಂತೆ ನಸುನಕ್ಕು ಅಂಬೆಗಾಲಿಕ್ಕಿ ನಡೆಯುತಿಹವು.

ಹಂಸ ಕುರಿಯಮರಿ ಆನೆ ಒಂಟೆ ಹಸು ಪ್ರಾಣಿರೂಪ ತಳೆದು
ತಾಗಿ ತುರುಗಿ ದಿಗ್ವಿಜಯಕೆಯ್ದುವಾ ಸೈನ್ಯದಂತೆ ನಡೆದು;
ಉಣ್ಣೆಯಾಗಿ ಮಿದುಬೆಣ್ಣೆಯಾಗಿ ಹಿಂಜಿರುವ ಅರಳೆಯಾಗಿ
ತೊಟ್ಟಿಲಾಗಿ ತೂಗುವವು ಮೋಡಪಡೆ ನಡೆವ ಬೆಟ್ಟವಾಗಿ -

ಕ್ಷಿತಿಜದಂಚಿನಲಿ ಸಂಚುವೆತ್ತು ಮುಂಜಾವು ಮೌನವಾಂತು
ತಲೆಯ ಬಾಗಿ ನಿಂತಿರಲು ಬಾಲರವಿ ಕಿರಣಕೈಗಳೋತು,
ಉಬ್ಬಿ ಉಬ್ಬಿ ಚಿಂಬಳಕನುಣಿಸಿ ಹೊಂದೊಡವ ತೊಡಿಸಿ ಮುಡಿಸಿ
ರಮಿಸಲಾಗಿ ನಿಬ್ಬಣದ ಬೀಗರೆನೆ ಹರುಷ ಗರುವವೆರಸಿ-

ನೀಲಗಗನದಲಿ ತೇಲಿಬಹವು ಸಿಂಗಾರಗೊಂಡು ಮುದದಿ
ಅಂತರಿಕ್ಷದಲಿ ಯಕ್ಷ ಕನ್ನೆಯರ ಬಿನದ ಲೀಲೆ ತೆರದಿ;
ವ್ಯೋಮರಂಗದಲಿ ಗಾಳಿಸಂಗದಲಿ ನಲಿದು ನೃತ್ಯವಾಡಿ
ಮುಗಿಲಯುಗಲಗಳು ಮುಂದೆ ಸಾಗುವವು ಬಂದ ದಾರಿ ನೋಡಿ.

ಹೊತ್ತು ಮೀರಿ ನಡುನೆತ್ತಿಗೇರಿ ಬರೆ ಬಿಸಿಲ ಹಣ್ಣನುಂಡು
ಮಲ್ಲ ಮೆಲ್ಲನೇ ಕಲ್ಲು ಬಂಡೆಯೊಲು ನಿಲ್ಲುವುದನು ಕಂಡು,
ಮೂರು ದಾರಿ ಕೂಡಿರುವ ಧೂಳಿಯೊಡನೆದ್ದು ಗಾಳಿ ಬೀಸೆ
ಎತ್ತಲೆತ್ತಲೋ ಕತ್ತನೆತ್ತಿ ಸಾಗುವುದು ಜೀವ ರೋಸೆ.

ಯಾವ ಹರಕೆಯನು ಹೊತ್ತು ಹಡೆದಳೋ ಕಡಲರಾಣಿ ಇವನು!
ನಿಮಿಷ ನಿಮಿಷಕೂ ಭ್ರಮಿಸುತಿರುವ ಕ್ರಮವರಿತ ತ್ರಿಪುರ ಹವಣು.
"ನಿಂತ ಬಾಳು ಬಾಳಲ್ಲ, ಮಲೆತು ನಿಂತಿರುವ ನೀರು ನೋಡ"
ಎಂದು ಜಗದ ಜಂಗುಳಿಗೆ ಅರುಹಲಿಕೆ ಬಂದವೇನೋ ಮೋಡ!

ಕಾದು ಸೀದು ನೆಲ ಮೋದಗೆಟ್ಟು ಬಾಯ್ಬಿಟ್ಟು ಹಲುಬುತಿರಲು
ತಾರವಾದ ತಿರೆ ಪ್ರಾಣತಂತುವೊಲು ತಂಪು ಗಾಳಿ ಹುಗಲು
ಕರುಣೆ ಕರಗಿ ನೀರಾಗಿ ಸುರಿವ ತೆರ ಮೋಡದೊಡಲಿನಿಂದ
ಮಳೆಯು ಬೀಳೆ ಹೊಸ ಕಳೆಯು ಹೊಮ್ಮುವದು ಇಳೆಯ ಬಸಿರಿನಿಂದ.

ತಂಪು ಸೊಂಪು ಏನಿಳೆಯ ಕಂಪು! ಸುರಿಮಳೆಯ ತಳಿಯ ಸೆಳಕು
ಮೋಡ ಸರಿಸಿ ಕಣ್ಣಾಡಿಸಿರಲು ರವಿ, ಹೊನ್ನ ಬಿಸಿಲ ಥಳಕು.
ನರಿಯ ಮದುವೆ ನಡೆದಿರಲು ಮುತ್ತು ಹನಿ ಚೆಲ್ಲುವರಿದ ಸೊಗವು,
ತಡೆದರಿಲ್ಲ ಚಣ ಮಾಯವಾಗುವುದು ಮುಗಿಲಕಾಂತಿ ಹರವು.

ಆಹ! ನೋಡ ಮಳೆಬಿಲ್ಲ ಮೋಡ ಹನಿಯಂಬನೆಸೆಯುತಿಹುದು
ಏಳು ಬಣ್ಣಗಳ ಮೇಳದಲ್ಲಿ ಕಾರಂಜಿ ಪುಟಿಯುತಿಹುದು.
ಬಾನು ಬುವಿಯ ಅಂತರವನಳೆದು ಮಳೆಬಿಲ್ಲ ಸೇತು ನಿಲಿಸಿ
ಮೆರೆಯುತಿಹುದು ಸಿರಿ ಸಗ್ಗದಪ್ಸರೆಯ ಸೆರಗ ಬೆರಗೊ ಎನಿಸಿ.

ಅಸ್ತಗಿರಿಗೆ ರವಿ ತೆರಳುತಿರಲು ಓ, ಬಾನ ತುಂಬ ಹಬ್ಬ!
ಬಣ್ಣದೋಕುಳಿಯ ಮಿಂದ ಮೇಘಪುರ ಬಾನಿನೆದೆಯ ಕಬ್ಬ.
ಸಂಜೆಯಾಗಸದಿ ಕಪ್ಪು ಮೋಡವೂ ಹೂವಿನಂತೆ ಅರಳಿ
ಬಾಳು ಒಳ್ಳಿತೆನೆ ಕಣ್ಣು ಸೆಳೆಯುವುದು ಬಿಟ್ಟು ಬಿಡದೆ ಮರಳಿ.

ಇರುಳಿನಾಳದಲಿ ತೆಪ್ಪಗಾಗಿ ತಿರೆ ನಿದ್ರೆಗೈಯುತಿರಲು
ಕಾರಮುಗಿಲು ತೇರೈಸಿ ಬರಲು ಜಗ ಕಪ್ಪು ತಿಮಿರ ಕಡಲು;
ಮಿಂಚು ಗೊಂಚಲಲಿ ಬೆಳಕ ಚಿಮ್ಮುತಲಿ ಹೊಸತು ಮಾಯೆ ಎನಿಸಿ
ಹೊಂಚು ಹಾಕಿ ಧಡ ಧಡಿಸಿ ಗುಡುಗೆ ಘನಘೋರ ಮಳೆಯ ಸುರಿಸಿ.

ಚಿಕ್ಕ ಚಂದ್ರಮಾ ಏನು ಸಂಭ್ರಮಾ ಮನದ ಭ್ರಮೆಯ ಹರಿಸಿ
ಮನುಜಲೋಕ ಮಂದಾರನಾಕವಾಗಿರುವುದೇನೋ ಸ್ಮರಿಸಿ;
ತಿರುಕರಂತೆ ಸೋಮಾರಿಯಂತೆ ತುರುಮೋಡ ತಿರುಗುತಿರಲು
ಚಂದ್ರನೆದೆಯ ಚೆಲ್ವೆಳಕ ನೀಡುವನು ಸ್ನೇಹಕಾಗಿ ಬರಲು.

ಚಂದ್ರಕಾಂತಶಿಲೆಯಂತೆ ಮೋಡ ಬೆಳುದಿಂಗಳನ್ನು ಕುಡಿದು
ಬಾನದೇಗುಲದಿ ಬೆಳ್ಳಿ ತೇರಿನೊಲು ಮಂದವಾಗಿ ನಡೆದು-
ಸಾಲುಗೊಂಡು ಕೆಲ ಮೋಡದಂಡು ಗಿರಿಶಿಖರದಲ್ಲಿ ತಳುವಿ
ಬೆಳ್ಳಿ ಬಟ್ಟಲದ ಸುಧೆಯ ಕಾಯುವವು ಆಗದವರ ತರುಬಿ.

ಏಸು ರಾಜ್ಯದಲಿ ಅಲೆದರೂನು ನೆಲೆಯಿಲ್ಲದಾಯಿತಿವಕೆ
ಏಸೊ ಜನದ ಮತ್ತೇಸೊ ಬನದ ಸಿರಿಕಾಂಬ ಕಣ್ಣೊ ಇವಕೆ!
ಸುತ್ತುತಿರುವ ಧರೆ ಸುತ್ತು ತಿರುಗುತಿರೆ ತಲುಪಲಿಲ್ಲ ಕೆಲಕೆ;
ಸುರಿಯಬೇಕು ಸರಿ, ನೀಗಬೇಕು ಉರಿ- ಎಂಬ ಬಯಕೆ ಇವಕೆ.

ಮುಗಿತವಿಲ್ಲದಿಹ ಗಗನದಲ್ಲಿ ಹಗಲಿರುಳಿನಲ್ಲು ಪಯಣ
ಬೆಂದ ನೆಲಕೆ ಕಣ್ಣೀರ ಕರೆಯೆ ಅದೆ ಸಾರ್ಥಮಾಯ್ತು ಹರಣ.
ದಿಗ್ದಿಗಂತಗಳ ಹಂತವೇರಿ ಅಗ್ಗಲಿಸುತಿಹವು ಕಣ್ಣ
ಬಾನದಿಬ್ಬಣದ ಬಣ್ಣ ತಿಣ್ಣದಲಿ ನುಣ್ಣಗಾದುವಣ್ಣ.

ಬಾಲ್ಯದಿಂದಲೂ ಮುಗಿಲ ಕಂಡು ಮೈ ಮರೆತ ದಿನಗಳೆನಿತು!
ಅವುಗಳಾಟದಲಿ ಮೈಯಮಾಟದಲಿ ಜೀವ ತುಂಬಿ ಬಂತು.
ಗಾಸಿಗೊಂಡ ಎದೆಯಾಸೆ ಕನಸುಗಳನಲ್ಲಿ ನೇಯುತಿಹೆನು
ಹಕ್ಕಿ ಮೋಡದೆಡೆ ಹಾರಿ ಹಾಡುವೊಲು ಕರೆಯ ಕೇಳುತಿಹೆನು.

ಮೇಘಮಂಡಲವು ಜಗದ ಜನದ ಮನದಾಸೆ ಗೋಪುರಹುದು
ಗತಿಸಿ ಹೋದ ಹಿರಿ ಜೀವರುಗಳ ಹಿರಿ ತತ್ವ ಸಾರುತಿಹುದು;
ಧೀರ ಪೌರುಷದಿ ಬಾಳ ಬಿತ್ತರಿಸಿ ಮಿಂಚಿರೆಂಬ ಉಲುಹು
ಇಷ್ಟವಿರದ ಕಡುಕಷ್ಟವಡಸಿದರು ಮೊಳಗಿರೆಂಬ ಬಲುಹು.

ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯುವಾಸೆ,
ಬಾನದೇಗುಲದಿ ನಮ್ರವಾಗಿ ಮೈದುಂಬಿ ನಿಲ್ಲುವಾಸೆ,
ಮಳೆಯಬಿಲ್ಲ ಮೈದೊಡವ ಧರಿಸಿ ಮಣಿಹನಿಗಳಾಗುವಾಸೆ,
ಚಂದ್ರನೆದೆಯ ತಿಳಿಯೊಲವನುಂಡು ಶ್ರೀಕಾಂತಿಪಡೆಯುವಾಸೆ.

ನೋಡೆ ನೋಡೆ ಎನಿತೆನಿತೊ ಆಸೆ ಅದಕಾದಿ ಅಂತ್ಯವಿಲ್ಲ;
ಹಿಂದು ಹಿಂಡಿನಲಿ ತೋರಿ ಮರೆಯುತಿವೆ ಏಕೊ ಯಾವ ಬಲ್ಲ;
ಹಿರಿದು ಮನಸು ಹಿರಿದಾದ ಭಾವ ಮುಗಿಲಗಲವಾಗಬೇಕು
ಮೋಡನೋಡಿ ದಿಙ್ಮೂಢನಾಗಿ ಮೈ ಮರೆವೆನಲ್ಲ ಸಾಕು.

ಆಕಾಶಬುಟ್ಟಿ

೧

ಹೊಗೆ ತುಂಬಿ
ನಗೆ ತುಂಬಿ
ಬಣ್ಣ ಬಣ್ಣದ ನವಿರು ಕಾಗದದ ಬುಟ್ಟಿಯಲಿ
ಜೀವ ತುಂಬಿ,
ದೂರ ಹಾರುವುದೆಂಬ ಭರವಸೆಯ ನಂಬಿ,
ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು
ಉತ್ಸಾಹ ಸಾಹಸಕೆ ರೂಪುಗೊಟ್ಟು
ಮೇಲುನಾಡಿಗೆ ತೇಲಬಿಟ್ಟೆವಿದೊ ಚೈತನ್ಯದಾಕಾಶಬುಟ್ಟಿ!
ಏರುವುದೊ
ಇಳಿಯುವುದೊ
ಗಾಳಿಯಾಘಾತದಲಿ ಜೋಲಿ ಹೊಡೆದುರುಳುವುದೊ?
ಮೈ ಸುಟ್ಟುಕೊಳ್ಳುವುದೊ,
ಕಾಣಲಾರದ ಕೊಳ್ಳದಾಳದಲಿ ಬೀಳುವುದೊ-
ಆರು ಕಂಡಿಹರಿದನು?
ತಿಳಿಯಲಾರದ ಹದನು!
ಆದರೂ ಆದರೂ ಹಾರಿಸಿದೆವಿದನು!
ಹುಡುಗುತನದುತ್ಸಾಹ ಕೊನೆಬಲ್ಲುದೇನು?

೨

ಆಕಾಶದ ಪ್ರಕಾಶದಲಿ ಎದೆಯ ತೆರೆದು
ಇಳೆಯ ಬಾಳಿನ ಹಂಗು ನೂಲು ಹರಿದು
ಮೇಲೆ ತೇಲಾಡುವುದ ಕಣ್ಣಾರೆ ಕಂಡು
ನನ್ನ ಬಗೆಯಾಶೆಗಳು ರೆಕ್ಕೆಗೊಂಡು

ಅಂಧಂ ತಮಸ್ಸಿನಲು ಬೆಳಕನುಂಡು
ಮುಗಿಲಲ್ಲಿ ಬಿತ್ತಿರುವ ಮುತ್ತುಗಳ ಬೆಳೆಯ
ಹಾಲುಗಾಳನು ಬಯಸಿ ಹಾರುತಿವೆ ಗೆಳೆಯ!
ಅದೊ! ನೋಡು ನೋಡು
ಚಿಕ್ಕೆಗುರಿ ಬೆಂಬತ್ತಿ ಸಾಗಿರುವ ಕಿರುದೀಪಕಾವ ಕೇಡು?
ಇಳೆಯ ಬಾಳರಳಿ ಬಂಗಾರ ಭರಣಿಯು ತೇಲಿ
ಬೆಳ್ಳಿ ಚಿಕ್ಕೆಗೆ ತೆಕ್ಕೆ ಹಾಕಿಹುದು ನೋಡು!
ಬೆಳಕು ಬೆಳಕಿಗೆ ಮುತ್ತು ಕೊಟ್ಟಿಹುದು
ಆ ಪ್ರೀತಿ ಸೌರಭವೆ ತೋಳಬಂದಿ!
ಸೌಂದರ್ಯದಾನಂದವಿಲ್ಲಿ ಬಂಧಿ.

೩

ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ಧಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು!
ನೋಡಿದೆಯ ಕವಿಯೆ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ?
ಆತ್ಮಬಲದೆದುರು ಮೇಣುಳಿದ ಬಲವೆ?
ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳದೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು!

ಪ್ರಜಾಪ್ರಭುತ್ವ

ಮುಳುಗುತಿಹ ನೇಸರನು ಮುದಿಸಿಂಹನಂತಾಗಿ
ಪಶ್ಚಿಮಾದ್ರಿಯ ಗವಿಯ ಸೇರುತಿಹನು;
ತನ್ನ ಸರ್ವಾಧಿಕಾರತ್ವ ಕೊನೆಗೊಳ್ಳುತಿರೆ
ಲೋಗರೆಡೆ ಕೆಕ್ಕರಿಸಿ ನೋಡುತಿಹನು!

ಸಂಜೆ ಕಕ್ಕರಮಬ್ಬು ಗಗನ ಸಿಂಹಾಸನದಿ
ಕಪ್ಪು ಬಾವುಟವೆತ್ತಿ ತೋರಿಸಿಹುದು -
ಪಕ್ಷಿ ಸಂಕುಲ ಕೆಲೆದು ಬಿಡುಗಡೆಯ ಹಿಗ್ಗಿನಲಿ
ಹಾಡಿ ಜಯಜಯಕಾರ ಗೈಯುತಿಹುದು.

ಹಗಲ ಉರಿವಿಸಿಲ ಸಾಮ್ರಾಜ್ಯಶಾಹಿಯು ಉರುಳಿ
ಪಡುವ ಕಡಲಿನ ಹಡಗವೇರುತಿರಲು
ಸಂಧ್ಯಾ ಸಮೀರನದೊ ಸ್ವಾತಂತ್ರ್ಯ ಸಂದೇಶ
ಹೊತ್ತು ನಾಲ್ದೆಸೆಗಳಲಿ ಹರಡುತಿಹನು.

ಬಿತ್ತರದ ಬಾನಿನಲಿ ಮತ್ತೆ ಜನತಾ ರಾಜ್ಯ
ಮೆರೆಯುತಿದೆ ಚಿಕ್ಕೆಯ ಪ್ರಜಾಪ್ರಭುತ್ವ-
ವ್ಯಕ್ತಿ-ಶಕ್ತಿಯ ಗುಣವಿಕಾಸ ಪ್ರಕಾಶದಲಿ
ಜಗವ ಬೆಳಗುವದದರ ಮೂಲತತ್ತ್ವ.

ಆಕಾಶಗಂಗೆ ಶಾಸನ ಸಭೆಯನೇರ್ಪಡಿಸಿ
ಮಂತ್ರಿಮಂಡಲವನ್ನು ನಿರ್ಮಿಸಿಹುದು;
ಬುಧ ಬೃಹಸ್ಪತಿ ಶುಕ್ರ ಶನಿ ಮಂಗಳಾದ್ಯರನು
ವಿವಿಧ ಮಂತ್ರಿಗಳಾಗಿ ನೇಮಿಸಿಹುದು.

ಕೃತ್ತಿಕೆಯು ಮೃಗಶಿರವು ಸಪ್ತರ್ಷಿ ಮಂಡಲವು
ರಾಜಕೀಯದ ಪಕ್ಷ ಪಂಗಡವೆನೆ
ದಕ್ಷಿಣೋತ್ತರ ಧ್ರುವದ ರಾಯಭಾರಿತ್ವದಲಿ
ಮುಖ್ಯಮಂತ್ರಿಯು ಚಂದ್ರನಾಗಿರುವನೆ?

ಬಿಡುಗಡೆಯ ಸೌಭಾಗ್ಯ ಪಡೆದ ಬಾನಿನೊಳಿಂತು
ಶಾಂತಿ ಸಮದರ್ಶಿತ್ವ ತಂಪಿನಿರುಳು-
ಬಡವ ಬಲ್ಲಿದರೆನದೆ ಸಮತೆಯಲಿ ತಣಿಸಿಹುದು
ಸರ್ವರಿಗು ಸಮಪಾಲು ಬೆಳದಿಂಗಳು.

ಮಾತು

ಮುಂಜಾವದಲಿ ಹಸಿರು ಹುಲ್ಲ ಮಕಮಲ್ಲಿನಲಿ
ಪಾರಿಜಾತವು ಹೂವ ಸುರಿಸಿದಂತೆ,
ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ
ಸೃಷ್ಟಿ ಸಂಪೂರ್ಣತೆಯ ಬಿಂಬಿಪಂತೆ,

ಮೆಲ್ಲೆದೆಯ ಸವಿಯೊಲುಮೆ ಕರಗಿ ಕಂಬನಿಯಾಗಿ
ಹೆಣ್ಣ ಕಣ್ಣಂಚಿನಲಿ ತುಳುಕುವಂತೆ,
ಸುಳಿಗಾಳಿಯೊಂದಿನಿತು ಸೂಸಿ ಬಂದರು ಸಾಕು
ಮರವನಪ್ಪಿದ ಬಳ್ಳಿ ಬಳುಕುವಂತೆ,-

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ;
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ.

ಒಂದು ಮುಂಜಾವು

ಒಂದು ಮುಂಜಾವಿನಲಿ ತುಂತುರಿನ ಸೋನೆಮಳೆ
'ಸೋ' ಎಂದು ಶ್ರುತಿ ಹಿಡಿದು ಸುರಿಯುತಿತ್ತು;
ಅದಕೆ ಹಿಮ್ಮೇಳವೆನೆ ಸೋಸಿಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು.

ಇಳೆವೆಣ್ಣು ಮೈದೊಳೆದು ಮಕರಂದದರಿಶಿನದಿ
ಹೂ ಮುಡಿದು ಮದುಮಗಳ ಹೋಲುತಿತ್ತು;
ಮೂಡಣದಿ ನೇಸರನ ನಗೆಮೊಗದ ಶ್ರೀಕಾಂತಿ
ಬಿಳಿಯ ಮೋಡದ ಹಿಂದೆ ಹೊಳೆಯುತಿತ್ತು.

ಹುಲ್ಲೆಸಳು, ಹೂ ಪಕಳೆ, ಮುತ್ತು-ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು;
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು' - ಎನ್ನುತಿತ್ತು.

ತಳಿರ ತೋರಣದಲ್ಲಿ ಬಳ್ಳಿ ಮಾಡಗಳಲ್ಲಿ
ದುಂಬಿಗಳ ಓಂಕಾರ ಹೊಮ್ಮುತಿತ್ತು;
ಹಚ್ಚ ಹಸುರಿನ ಪಚ್ಚೆ ನೆಲಗಟ್ಟಿನಂಗಳದಿ
ಚಿಟ್ಟೆ ರಿಂಗಣಗುಣಿತ ಹಾಕುತಿತ್ತು.

ಉಷೆಯ ನುಣ್ಗದಪಿನಲಿ ಹರ್ಷ ಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತಿತ್ತು;
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತಿತ್ತು.

•

ನಿಯಮೋಲ್ಲಂಘನ

೧

'ಸುಯ್' ಎಂದು ನಿಡುಸುಯ್ದು ಹುಯ್ಯಲಿಡುತಿದೆ ಗಾಳಿ
ಜಗದ ಆರ್ದ್ರತೆಯನ್ನೆ ಹೀರಿ ಹೀರಿ!
ಮೂಡಗಾಳಿಗೆ ಬಾನ ಮೊಗ ಒಡೆದು ಬಿಳಿ ಬೂದಿ
ಬಳಿದಂತೆ ತೋರುತಿದೆ ಮೇರೆ ಮೀರಿ.

೨

ತರು ಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ -
ಅಸ್ಥಿ ಪಂಜರವಾಗಿ ನವೆಯುತಿಹವು;
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಸೆಗಳಲ್ಲಿ ಸೇರುತಿಹವು.

೩

ಏನು ಬಾನೋ ಎನಿತು ದೂರವಿದ್ದಂತಿಹುದು
ನಮಗು ಅದಕೂ ಮಾತು-ಕತೆಯೆ ಇಲ್ಲ;
ಒಂದು ಮೋಡವೆ? ಮಿಂಚೆ? ಮಳೆಯೆ? ಕಾಮನ ಬಿಲ್ಲೆ?
ಚಳಿಗಾಲಕೋ ಕೊಂಚ ಬುದ್ಧಿಯಿಲ್ಲ

೪

ಕ್ಷಾಮ ಡಾಮರ ಬಡಿದ ನಿರ್ವಾಸಿತರ ತೆರದಿ
ಒಣಗಿದೆಲೆಗಳ ರಾಶಿ ಭಣಗುಟ್ಟಿವೆ;
ಮೈಕೊರೆವ ಚಳಿಗಾಳಿ ನಿಷ್ಕರುಣದಲಿ ಧಾಳಿ-
ಗೈಯೆ ತರಗೆಲೆ ಮತ್ತೆ ಮೊರೆಯುತ್ತಿವೆ!

೫

ಹೇಮಂತಋತುವಿಂಗೆ ಸಾಮಂತ ರಾಜರೊಲು
ಸೂರ್ಯ ಚಂದ್ರರು ನಡುಗಿ ಉಡುಗುತಿಹರೊ!
ಧೀಮಂತ ವರ್ಷಋತು ಗುಡುಗು ಹಾಕುವವರೆಗೆ
ಬರಿಯ ನಾಮಾಂಕಿತರೆ ಮೆರೆಯಲಿಹರು!

೬

ಮೂರು ತಿಂಗಳ ಹಿಂದೆ ಮಳೆರಾಯ ಹಗಲಿರುಳು
ಧಾರಿಣಿಗೆ ತನಿಮುದ್ದುಗರೆಯುತಿದ್ದ;
ಹರುಷದಾವೇಶದಲಿ ಹೊನಲು ಧುಮ್ಮಿಕ್ಕಿರಲು
ಪ್ರೇಮಗೀತಗಳೆನಿತೊ ಹಾಡುತಿದ್ದ!

೭

ಮಳೆಗಾಲವೈತರಲು ನನ್ನ ಕವಿತೆಯ ನವಿಲು
ನೂರು ಕಣ್ಣನು ತೆರೆದು ನರ್ತಿಸುವುದು!
ಭಾವ ಚಾತಕ ಹೊಚ್ಚ ಹೊಸ ಮಳೆಯ ತಂಬನಿಯ
ಜೇಂಬನಿಯ ಗುಟುಕರಿಸಿ ವರ್ತಿಸುವುದು!

೮

ಎಂದು ಬರುವದೊ ಕಾಲ ನನ್ನಿನಿಯ ಮಳೆಗಾಲ
ವಿರಹ ವೈಶಾಖವನು ದಾಟಬೇಕೆ?
ಏನು ಋತುರಿಂಗಣವೊ ವಿಧಿನಿಯಮದಾಳಿಕೆಯೊ
ಒಮ್ಮೆಯಾದರು ತಪ್ಪಿ ನಡೆಯದೇಕೆ?

●

ಚಿರಂತನ ದಾಹ

೧

ದಿನದಿನವು ಮೂಡಣದ ಬಾನ ಕರೆಯಂಚಿನಲಿ
ಚಿಂಬೆಳಕು ಉಬ್ಬರಂಬರಿಯುತಿಹುದು;
ನೂರು ಕಾರಂಜಿಗಳು ತೆಕ್ಕನೆಯೆ ಪುಟಿದಂತೆ
ಲೋಕಲೋಕಂಗಳನು ತೊಳೆಯುತಿಹುದು.

೨

ಬೊಗಸೆಗಂಗಳ ತೆರೆದು ಮೊಗೆಮೊಗೆದು ಕುಡಿದರೂ
ಈ ಪುರಾತನ ದಾಹ ತೀರದಲ್ಲಾ!
ಏನೊ ಅಸಮಾಧಾನ ಹೃದಯಾಂತರಾಳದಲಿ
ಬಾಯ್ದೆರೆದು ಹೀರುತಿರೆ ತೃಪ್ತಿಯಿಲ್ಲ.

೩

ಬಣ್ಣ ಬಣ್ಣದ ಬೆಳಕ ಕಡಲಿನೊಡಲೊಳಗಲ್ಲಿ
ಕಲ್ಲುಸಕ್ಕರೆಯಂತೆ ಕರಗಿ ಬಿಡಲೆ?
ಇಲ್ಲದಿರೆ ಎಲ್ಲವನು ಒಂದೆ ಬೊಗಸೆಯೊಳಾಂತು
ಆ ಅಗಸ್ತ್ಯನ ತೆರದಿ ಕುಡಿದು ಬಿಡಲೆ?

೪

ಹೊಗೆನಟ್ಟು ಹೋಗಿರುವ ಮನದ ಮನೆ ಗೋಡೆಗಳು
ಸುಣ್ಣ ಬಣ್ಣವನೆಂದು ಕಾಣಬಹುದು?
ಇಲ್ಲಣವು ಜೋತಿರುವ ಜೇಡಬಲೆ ನೂತಿರುವ
ಬೆಳಕಿಂಡಿಯಲಿ ಬೆಳಕದೆಂತು ಬಹುದು?

೫

ಪಂಚ ಭೂತಗಳೆಲ್ಲ ಮಾನವನ ದೇಹದಲಿ
ಹೊಂಚು ಹಾಕುತ ದಾರಿ ಕಾಯುತಿಹವು;
ಕಿಂಚಿತಾದರು ಕರುಣೆ ಕೊನರೊಡೆದು ಬಾರದಿರೆ
ಈ ಪ್ರಪಂಚವೆ ಚಿತೆಯನೇರಲಿಹುದು!

೬

ಕಿಟಕಿಗಳನರೆತೆರೆದು ಕಟಕಿಯಾಡುವ ಗಾಳಿ
ಮಾಡು ನಿನ್ನಯ ಧಾಳಿ ಇಂದು ಇಂದೇ!
ಜಗದೆಲ್ಲ ಪುಷ್ಪಗಳ ಪೈರುಗಳ ಪರಿಮಳದ
ಪನ್ನೀರುಗಳನೆರೆದು ಮೀಯಿಸಿಂದೇ!

೭

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ!
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ!

●

ಚರಮಗೀತೆ

೧

ಇರುಳು ಹೊರಳಿತು ಜೀವ ನರಳಿತು ಕತ್ತಲೆಯೆ ಚೀರಿಟ್ಟಿತು
ಏನ ಬಯಸಿದರೇನಿದಾಯಿತು - ಆಗಬಾರದುದಾಯಿತು;
ವಿಷಮ ಬಾಳಿಗೆ ವಿಷಮಜ್ವರವೇ ಹೊಂಚು ಹಾಕಿತು ಹಿಂಡಿತು
ಮಾನವನ ಇಷ್ಟಾರ್ಥ ಶಕ್ತಿಗು ಯುಕ್ತಿಗೂ ಕೈ ಮೀರಿತು.

ನಡುವರಯದಲ್ಲಿಂತು ಝಂಝಾವಾತವೇತಕೆ ಬೀಸಿತೊ
ಬಾಳಗಿಡ ಬುಡಮುಟ್ಟವಲುಗಿತು ಬೇರ್ವೆರಸಿ ಅಡಗೆಡೆಯಿತು
ಚಿಗುರು ಹೂ ಮಿಡಿ ಸಿಡಿದು ಚೆಲ್ಲಾಪಿಲ್ಲಿಯಾಯಿತು ಗೊಂಚಲು
ಎಂಥ ಗಂಡೆದೆಯಾದರೂ ತಲೆದಂಡ ವಿಧಿಗೆತ್ತೆತ್ತಲು!

ಜೀವ ಜೀವಕೆ ಬೆಸೆದುಕೊಂಡಿದ್ದವಗೆ ಕರುಣಾಮೂರ್ತಿಗೆ
'ಮೂಜಗಕೆ ಮಾದರಿಯು ನಮ್ಮೀ ಒಲುಮೆ' ಎನ್ನುವ ಜೀವಿಗೆ
ಇಂತು ಕೊನೆಯೇ ಶಿವಶಿವಾ! ಇನ್ನೆಂತು ಬದುಕುವ ರೀತಿಯು?
ಇದ್ದಕಿದ್ದೊಲೆ ಇಲ್ಲವೆನಿಪುದೆ ವಿಧಿಯ ನಿಷ್ಠುರ ನೀತಿಯು!

'ನನ್ನವರು ನನ್ನವರು ಎಲ್ಲರು' ಎಂಬುದೊಂದೇ ಚಿಂತನೆ
ಪರಹಿತದಿ ಪರಮಾತ್ಮನನ್ನೇ ಕಂಡು ಕೊಂಡಾಡಿದನೆನೆ
ತನ್ನ ಅಳಲಿಕೆ ತನ್ನ ಬಳಲಿಕೆ ಒಂದನಾದರು ನೆನೆಯದೆ
ಒಳಗೆ ಒಳಗೇ ನುಂಗಿ ನಗುತಿರಲಯ್ಯೊ ಮಿಂಚಿದೆ ಮೀರಿದೆ!

ಹೊರಗೆ ಹೋದರೆ, ಒಳಗೆ ಬಂದರೆ ನೀನೇ ನೀನೇ ಬಳಿಯಿರೆ
ಯಾವ ಪುಣ್ಯದ ಫಲವೊ ಸ್ನೇಹವು ನಮ್ಮ ಚಿರಬದುಕಾಗಿರೆ
ಎಂಥ ನೋವಿಗು ನರಳಿಕೆಗು ಗೆಳೆತನವೆ ತೈಲವನೆರೆಯಿತು
ಬಾಳಿನುದ್ದಕು ಅಮೃತವಾಹಿನಿ ಎದೆಗೆದೆಯ ಸಂಗಮಿಸಿತು.

ನಿನ್ನ ಹೃದಯದ ದೊಡ್ಡಿತೆಗೆ ನಮ್ರತೆಗೆ ಘನ ಔದಾರ್ಯಕೆ
ಕವಡು ಹೊದ್ದದ, ಕೃತಕವರಿಯದ ಮುಗ್ಧ ಮನ ಮಾಧುರ್ಯಕೆ
ಏನು ಕೊಟ್ಟರು ತೀರದಯ್ಯೊ ಏನು ಕೊಟ್ಟರು ಬಾರದು!
ಪರಮ ಪ್ರೀತಿಗೆ ಪ್ರೀತಿಯೇ ಪ್ರತಿಫಲವು ಉಳಿದುದು ಸಲ್ಲದು.

ಒಂದೆ, ಎರಡೇ? ಗಣನೆಗರಿಯದು ನೀನು ಮಾಡಿದ ಉಪಕೃತಿ
ಹಾಡಿಕೊಂಡರು ತೋಡಿಕೊಂಡರು ಮರೆಯಲಾಗದ ಸಂಸ್ಕೃತಿ.
ಅಳಿಯಲಾರದು ಜೀವಜೀವಾಳದಲಿ ಜಿನುಗುವ ಝೇಂಕೃತಿ
ನೆನಹು ಗಂಧದ ಕರಡಿಗೆಯು ಮತ್ತದುವೆ ಚಿನುಮಯ ಮೂರುತಿ.

'ಈಗ ಇಲ್ಲಿಯೆ ಹೋಗಿ ಬರುವೆನು' ಎಂದು ಹೊರಘಂಟಂತೆಯೆ
ದೂರ ದೂರದ ದಾರಿಯನು ನೀ ಹಿಡಿದು ಸಾಗಿದೆ ಅಂತೆಯೆ;
ಮರಳಿ ಬಾರದ ಭಾಗ್ಯವೇ ಇಂತಾಡಿಸಿತು ಏಡಿಸಿತಲಾ!
ಬಾಳು ಬಿತ್ತರಗೊಂಡ ನೀಲಾಂಬುಧಿಯ ತೆರೆಗೈ ಚೆಂಡಲಾ!

ಆಗ ಇದ್ದವನೀಗ ಇಲ್ಲೆನೆ ಬಾಯಿ ಬರದಂತಾಗಿದೆ
ಬಪ್ಪುದೆಲ್ಲವು ತಪ್ಪದೆಂದರು ಮನಕೆ ಒಪ್ಪದೆ ಹೋಗಿದೆ.
ನೆನೆಯಲೊಡನೆಯೆ ಧುಮುಧುಮಿಸಿ ದುಡುಕುವವು ಧಮನಿಯು ಧಮನಿಯು
ಜೀವರತ್ನವ ಕಳೆದುಕೊಂಡವರಂತೆ ಹುಡುಕುವೆ ಮೌನಿಯು.

ಸಂಜೆ ಮುಂಜಾವಿನಲಿ ಕೂಡಿಯೆ ಬೆಟ್ಟ ಬನಗಳನಲೆದೆವು
ಸೃಷ್ಟಿಹೃದಯದ ರೂಪರಸಗಂಧದಲಿ ನಮ್ಮನೆ ಮರೆದೆವು;
ಒಂದು ಚಿಕ್ಕೆಯೆ ಚಂದಿರನೆ ಕಿರುಮೋಡ ಬಣ್ಣದ ಹಕ್ಕಿಯೆ-
ಎಲ್ಲವೆಲ್ಲವು ಶೋಕಗೀತೆಯೊಳೇಕವಾಗಿಹವಿಲ್ಲಿಯೆ.

ನಾನು ಎಲ್ಲೋ ತೊದಲು ನುಡಿದರೆ ಅದನೆ ಕವಿತೆಯ ಮಾಡಿದೆ
ನಿನ್ನ ಮಹದನುಭೂತಿಯಲ್ಲಿಯೆ ನನ್ನ ಕಲ್ಪನೆ ಆಡಿದೆ.
ಎಲೆಯನುದುರಿಸಿ ಕೊಂಬೆಯಲಿ ಹಿಡಿ ಹೂವು ತಳೆದಿಹ ಕಣಗಿಲೆ
ಅಂತೆ ನಿನ್ನಯ ಬದುಕು; ಸ್ವಾರ್ಥದ ಸೊಗಡು ಹೊದ್ದದ ಚಿತ್ಕಳೆ.

ಸಾಕು ಸೂರ್ಯೋದಯವು ಚಂದ್ರೋದಯವು ನಿನ್ನಯ ನೆನಪಿಗೆ
ನಾಕದಲ್ಲಿಹ ಆತ್ಮಗಳ ಚೆಲ್ವೆಳಕು ಬೀರುವವಿಂದಿಗೆ-
ಅವರಿವ ನಡೆನುಡಿಗಳಲ್ಲಿಯೆ ನಿನ್ನ ಭಂಗಿಯ ಕಾಣುತ
ನೀನೆ ಮೈವೆತ್ತಂತೆ ಭ್ರಾಂತಿಯೊಳಿರುವೆ ಮಮ್ಮಲ ಮರುಗುತ.

ಕಣ್ಣೆನರೆಬೆಳಕನ್ನು ಮುನ್ನವೆ ಕದ್ದ ಕಾಲಗೆ ಮತ್ಸರ
ಜಗಕೆ ಅರೆಗುರುಡಾಗಿ ಬಾಳುವೆನೆಂಬ ಚಿಂತೆಯ ಬೆಂತರ
ಇರವಿನಾಸೆಯ ಹಿಂಗಿಸಿತೆ, ನುಂಗಿಸಿತೆ ಜಗದಾನಂದವ?
ಒಂದು ಕೊಟ್ಟೊಂದನ್ನು ಕಸಿವುದು ಅವನ ನಿತ್ಯದ ಕೈತವ.

ತ್ಯಾಗಮಯ ಜೀವನಕೆ ಇದ್ದುದರಲ್ಲೆ ಒಂದಿನಿತಾದರೂ
ಶಾಂತಿ ದೊರೆವುದೆ? ದೊರೆವುದೆನ್ನಲು ಎಲ್ಲೊ ಅವರಿವರೊಬ್ಬರು-
ಅವರ ಬಾಳೇ ಕೃತಿಯು; ಪ್ರತಿಕೃತಿ ಕವಿಯ ಪ್ರತಿಮಾ ಸೃಷ್ಟಿಯು
ತನ್ನ ಪಾಲಿನ ಭಾಗ್ಯವನು ಹಲವರಿಗೆ ಹಂಚುವ ದೃಷ್ಟಿಯು.

ಹೆತ್ತ ಹೊಟ್ಟೆಯು ಕಕ್ಕುಳಂಗುದಿಕುದಿಯೆ ಬಿಸಿಗಂಬನಿಯಲಿ
ಆರು ಸಂತಯಿಸುವರು ಗೆಳೆಯಾ ತಾಯ ಕರುಳೇ ಬೆಂಬಳಿ,
ಅಕ್ಕರೆಯ ಸಕ್ಕರೆಯ ಸವಿಯೂಡಿಸುವ ಅಂತಃಕರಣವು
ಕರಗಿ ಕಂಬನಿಯಾಗಿ ಹರಿದರು ತಾಪಕಿಲ್ಲವೊ ಶಮನವು!

ಚಿಕ್ಕ ಮಕ್ಕಳ ಮಾತಿನಿಂದಾ ದುಃಖ ಮರುಕಳಿಸುತ್ತಿರೆ
ಕರುಳು ಕಿತ್ತೆಸೆದಂತೆ, ಜೀವಕೆ ಅರೆಮರುಳು ಬಡಿದಂತಿರೆ
ಅಂತು ಇಂತೂ ಅಳಲಬುತ್ತಿಯೆ ಜೀವನದ ಸೌಭಾಗ್ಯವೆ?
ಬಡಿದುಕೊಂಡರು ಬುದ್ಬುದವೆ ನಮ್ಮಾಯುಸಿನ ಸಾಫಲ್ಯವೆ?

ಜಾನಪದ ಜೀವನವನರಗಿಸಿಕೊಂಡು ಕೊನೆದಿಹ ಸತ್ಕವಿ
ಲೋಕಗೀತಕೆ ಮಾರುವೋಗಿರೆ ಮನಕೆ ಬಂದಿತೆ ಜೇನ್-ಸವಿ?
ಹಾಡು ಕೂಡಿಸಲೆಂದು ಓಡಿದೆ ಬೇಡಿ ಜನತಾ ಹೃದಯವ
ಯಾವ ತೃಪ್ತಿಯೊ ನಿನಗೆ ಹನಿ ಹನಿ ಹೀರಿಕೊಂಡಿರೆ ಸಾರವ!

ನಾಡ ತಿರುಗಿದನಂದು ಗುಡುಗಾಡಿದನು ಕವಿ ಸರ್ವಜ್ಞನು
ಕರದಿ ಕಪ್ಪರವಿಡಿದು ಕಂಬಳಿ ಹೊದೆದು ಜೀವವ ತೆಯ್ದನು.
'ಭವತಿ ಭಿಕ್ಷಾಂದೇಹಿ' ಕವಿಗಳ ಮಂತ್ರವೆಂದನು ಮುದ್ದಣ
ಅಶ್ವಮೇಧವೆ, ವಿಶ್ವಮೇಧವೆ - ಕವಿಗೆ ಕಂಬನಿ ಕಂಕಣ!

ಅರಿವು ಪಾರಾಯಣವ ನಡಸಿದೆ ಸಾವು ಮೀರಿದ ಸತ್ಯದ
ಇರವು ಬಂದುದ ಮೆಟ್ಟಿ ನಿಂದಿದೆ ತುತ್ತತುದಿಯಲಿ ಕರ್ಮದ!
ಜೀವ ಕೋಟಾಕೋಟಿ ಕೋಟಲೆಗೊಂಡರಿಲ್ಲವೊ ಬೆಂಬಲ
ನರನ ದುಃಖವು ನರಗೆ, ಹರನಿಗೆ ಮೂರು ಕಣ್ಣೂ ನಿಷ್ಫಲ!

ಕಣ್ಮರೆಯು ಮಣ್ಮರೆಯು ದೇಹವು ಎಂದು ತತ್ವವು ಸಾರಲಿ
ಇಂದೊ ನಾಳೆಯೊ ನಮ್ಮ ಪಾಲೂ ಸಲ್ಲುವುದು ಎಂದೆನ್ನಲಿ,
ಆದರಾ ಚೈತನ್ಯಜೀವನದರ್ಶವಿಲ್ಲಿಯೆ ಉಳಿವುದು
ಒಳಿತಿನೊಡಲಲಿ ಮೊಳೆತು ಬೆಳ್ಳಸವಾಂತು ಬಳೆವುದು ಹೊಳೆವುದು.

ಶಿವಶಿವೇಶ್ವರ ನಿನ್ನ ರೂಪವೆ ನನ್ನ ಕಣ್ಣಲಿ ತುಂಬಿದೆ
ನಿನ್ನ ನೆನಹಿನ ಜೇನಿಗೆನ್ನಯ ಮನದ ಮೊನೆಯಲಿ ಇಂಬಿದೆ.
ಅಳಿದನೆಂದವರಾರು ಚೀಃ ನಮ್ಮಚ್ಚುಮೆಚ್ಚಿನ ಮೂರುತಿ
ಎದೆಯ ಹೊಂಬಟ್ಟಲಲಿ ಇದಿಗೋ ಬಾಷ್ಪಬಿಂದುವಿನಾರತಿ!

ನಿನ್ನ ಪ್ರೀತಿಯ ಹೂವು ಮಲ್ಲಿಗೆ ಚೆಲು ಗುಲಾಬಿಗಳಿಲ್ಲಿವೆ
ಸ್ನೇಹ ಸೌಗಂಧವನು ಹರಡಿವೆ ತೀಡುವೆಲರಿಗೆ ನೀಡಿವೆ.
ನಡುಗುತಿಹ ಪಕಳೆಯಲಿ ಮೌನದಿ ಬಾಷ್ಪದಂಜಲಿ ಪಿಡಿದಿವೆ
ಶಾಂತಿಪೊಂದಲಿ ಆತ್ಮ ಓಂ ಶಿವ ಭಾವಚಿಂತಾರತ್ನವೆ!

●

ಈ ಮಲ್ಲಿಗೆ ಈ ಗುಲಾಬಿ . . . !

ಈ ಮಲ್ಲಿಗೆ ಈ ಗುಲಾಬಿ
ಚೆಲುವಿನೆರಡು ಕಣ್ಣ-ಗೊಂಬಿ!
ರಾಗದಾ ಪರಾಗ ತುಂಬಿ
ಬದುಕು ಬಣ್ಣ ಪಡೆಯಿತೆಂಬಿ-
ನಸುಕು ತುಟಿಯ ತೆರೆದಿದೆ
ಜೀವರಸವನೆರೆದಿದೆ!

ಸ್ವರ್ಣಕಿರಣದರುಣ ಕಂದ
ಈ ಸುಗಂಧದಲ್ಲಿ ಮಿಂದ;
ಗಾಳಿ ತೀಡೆ ಮಂದ ಮಂದ
ಆನಂದವೊ ಅನಿರ್ಬಂಧ
ಹೂವಿನಂತೆ ನುಣ್ಣಗೆ
ಕಂಡ ಕಣ್ಣು ತಣ್ಣಗೆ.

ಮಡಿಯನುಟ್ಟ ಮೆಲ್ಲಿತೆಲರು
ನೆಲದ ಗಲ್ಲ ಮುಟ್ಟೆ ಹಸುರು
ನಿಮಿರಿ ನಿಂತ ಕಲಾಕುಸುರು!
ಇಳೆಗಿಳಿದರೆ ಬಾನಿನವರು
ಮಂಜು ಹನಿಯ ರೂಪದಿ?
ಅಪ್ಸರೆಯರು ಶಾಪದಿ!

ಕಣ್ಣ ಬೆಳಕ ಕಣ್ಣು ಕುಡಿದು
ಹೃದಯದಂತರಾಳಕಿಳಿದು
ಒಲವಿನಗ್ನಿಕುಂಡದಲ್ಲಿ
ಕರಗಿ ಮಿರುಗಿ ಹೊಮ್ಮಿತಿಲ್ಲಿ

ಉಷಃಕಾಲದಾರತಿ
ಚೈತನ್ಯದ ಪ್ರದ್ಯುತಿ!

ಈ ಪ್ರಶಾಂತ ಕಾಲದಲ್ಲಿ
ಮೌನವೀಣೆ ಮಿಡಿವುದಿಲ್ಲಿ.
ಈ ಮಹಾಂತ ಧಾಮದಲ್ಲಿ
ಸ್ವರ್ಗ ಭಿಕ್ಷೆ ಬೇಡಿತಿಲ್ಲಿ
ಇಲ್ಲಿ ಎಲ್ಲ ಪ್ರೀತವು.
ಮಾತು ಕೂಡ ಗೀತವು!

ಬಂತು ತುಂಬಿ ಗಾನ ತುಳುಕಿ,
ಬಂತು ಚಿಟ್ಟೆ ಬಣ್ಣ ಸೋಕಿ;
ಒಂದು ಜೇನು ಹನಿಯ ಹುಡುಕಿ
ಒಂದು ಬಣ್ಣಕಾಗಿ ಬೆದಕಿ-
ಭೃಂಗ ಗುಂಗು ಹಿಡಿಸಿತೋ!
ಚಿಟ್ಟೆ ನೃತ್ಯವಾಡಿತು.

ಎಲೆ ಮಲ್ಲಿಗೆ, ಚೆಲು ಗುಲಾಬಿ
ಬಾರ ಚಿಟ್ಟೆ, ಬಾರ ತುಂಬಿ
ಮನದ ತುಂಗ ಶೃಂಗದಲ್ಲಿ
ಎನ್ನ ಹೃದಯ ರಂಗದಲ್ಲಿ
ದ್ವೈತವಿರದ ಕೂಟದಲ್ಲಿ
ಆತ್ಮನಮರ ತೋಟದಲ್ಲಿ
ಸದಾನಂದದೂಟೆಯಲ್ಲಿ
ಹಾಡಿ ನೃತ್ಯವಾಡಿರೇ
ಚಿರಂಜೀವಿಯಾಗಿರಿ.

•

ಗಿರಿಗಿರಿ ಗಿಂಡಿ

೧

ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
ಸಂಜೆಯ ಗಾಳಿ
ತಂಪೊಳು ತೇಲಿ
ಗರಿಗರಿ ಮೋಡ
ಬಾನಿನ ಕೂಡ
ಮೈಮರೆತೋಟ
ಚಕ್ಕಂದಾಟ;
ಬಣ್ಣದ ಹಕ್ಕಿ
ಕೊರಳಲ್ಲುಕ್ಕಿ
ಸುವ್ವೀ ಚವ್ವಿ
ಹಾಡಿದೆ 'ಟುವ್ವಿ',
ಬನ ಬನದಲ್ಲಿ
ಮನಮನದಲ್ಲಿ
ಸಂತಸ ಬೀರಿ
ಹಾಡಿನ ಲಹರಿ
ಮೆಲ್ಲಗೆ ನಿಂತಿ
ಬಾರೇ ಗೆಳತಿ.
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೨

ಬಗಾಟ ಬಗರಿ
ತಿರುಗುವ ತಿಗರಿ
ತೆಂಗಿನ ಚವರಿ
ಗಾಳಿ ಸವಾರಿ
ಹಿತ್ತಲಲ್ಲಿ
ಕುಂಬಳ ಬಳ್ಳಿ
ಅಂಗಳದಲ್ಲಿ
ಹೂ ಗಿಡಬಳ್ಳಿ
ಮುಂಗಡೆಯಲ್ಲಿ
ಬೇಲಿಯ ಕಳ್ಳಿ
ಬಳಿಯಲಿ ಸುಳಿದು
ಬೇಸರ ಕಳೆದು
ಪಾತರಗಿತ್ತಿ
ಪಕ್ಕಾಹತ್ತಿ
ಮೈಕೈ ತುಂಬ
ಹೂ ಮಕರಂದ
ಮಂಜಿನ ಹನಿಯ
ಮುತ್ತಿನ ತೆನಿಯ
ಹುಲ್ಲಿನ ವಸತಿ
ಕುಸುಮ ಕಸೂತಿ
ಕಾಮನ ಬಿಲ್ಲ
ಮೂಡಿಹುದಲ್ಲ!
ರೇಶಿಮೆ ಅಂಚ
ಮಿರಿ ಮಿರಿ ಮಿಂಚ
ಬಣ್ಣದ ಕುಂಚ
ಯಾರದು ಹೊಂಚ?
ಬಲಗೈ ತಾರ

ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೩

ಕಂಬಕಂಬಾಟ
ನಿಂಬಿಯ ತೋಟ
ನವಿಲಿನ ಓಟ
ತಕಥೈ ಥಾಟ
ಗೆಳತಿಯರೆಲ್ಲ
ಬಂದಾರೇನ
ಮಲ್ಲಿಗೆ ಹೂವ
ಮುಡಿದಾರೇನ
ಗುಲಾಬಿ ಲಂಗ
ಉಟ್ಟಾರೇನ
ನೀಲಿ ಪೋಲಕ
ತೊಟ್ಟಾರೇನ
ನತ್ತು ಬುಗುಡಿ
ಇಟ್ಟಾರೇನ
ಚಿನ್ನದ ಬಳಿಗೆ
ಅತ್ತಾರೇನ?
ಬಾರೇ ಗೆಳತಿ
ನನ ಬಂಗಾರಿ
ವಸಂತ ಕಾಲದ
ಸಿರಿ ಸಿಂಗಾರಿ
ಮಾವಿನ ತಳಿರು
ಹುಣಿಸೆಯ ಚಿಗುರು
ಗಾಳಿಯ ಸುಳಿಗೆ
ಕುಣಿತದ ಕರೆಗೆ

ತಲೆಯನು ತೂಗಿ
ಮನಕಿಂಬಾಗಿ
ರವದೆಯ ಪೀಪಿ
ಊದುವದೇನ
ಹರುಷದ ಕೇಕಿ
ಹಾಕುವದೇನ?
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೪

ನಗೆ ಮೊಗದಲ್ಲಿ
ಹರುಷದ ಬಳ್ಳಿ
ಕೋಮಲವೆನಿಸಿ
ರಾಗವ ರಚಿಸಿ
ತುಟಿಯಲಿ ಚಿಗುರಿ
ಗಲ್ಲದಲರಳಿ
ಕುರುಳಲಿ ಹೊರಳಿ
ಜಡೆಯಲಿ ತೂಗಿ
ಬಿಂಕದಿ ಬೀಗಿ
ನಿರಿ ಚೆಲ್ಲಾಟ
ಕೋಗಿಲೆ ಕುಕಿಲು
ತೆರೆ ಚಿನ್ನಾಟ;
ದಿನದಿನಕೊಂದು
ಹೊಸತನ ಬಂದು
ಸೆರಗನು ಹೊಚ್ಚಿ
ಕಣ್ಣೆವೆ ಮುಚ್ಚಿ
ತೆರೆ ತೆರೆವಂತೆ
ಚೆಲುವಿನ ಸಂತೆ!

ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತತ್ತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

ಜೀವ ಜೀವಾಳದಲಿ ಕೂಡಿದವಳು

೧

ಸಣ್ಣ ಮನೆಯನು ತುಂಬಿ
ನುಣ್ಣಗಿನ ದನಿಯಲ್ಲಿ
ಬಣ್ಣವೇರಿದ ಹೆಣ್ಣು ಹಾಡುತಿಹಳು.
ಕೈತುಂಬ ಹಸಿರು ಬಳೆ
ಹಣೆಗೆ ಕುಂಕುಮ ಚಂದ್ರ
ಜಡೆತುಂಬ ಮಲ್ಲಿಗೆಯ ಮುಡಿದಿರುವಳು.

೨

ಹೆಜ್ಜೆ ಹೆಜ್ಜೆಗಳಲ್ಲಿ
ನವಿಲನಾಡಿಸುತಿಹಳು
ಮಾತು ಮಾತಿಗೆ ಮುತ್ತು ಸುರಿಸುವವಳು
ಚೆಂಗುಲಾಬಿಯ ಚೆಲುವೆ
ಚೆಂದುಟಿಯನರೆತೆರೆದು
ಉಸಿರುಸಿರಿಗೂ ಕಂಪ ಸೂಸುತಿಹಳು.

೩

ಹಾಲುಗಲ್ಲಿನ ಮೇಲೆ
ಬೆಳುದಿಂಗಳಿಳಿದಂತೆ
ನಗೆಯ ಹೊಂಗೇದಗೆಯ ಮುಗುದೆಯಿವಳು;
ಮುಂಜಾವು ಉಷೆಯಂತೆ
ಸಂಜೆ ಅಪ್ಸರೆಯಂತೆ
ಕಣ್ಣು ಕಣ್ಣಿಗೆ ದೀಪ ಮಿನುಗಿಸುವಳು!

೪

ನಲುಮೆದೋಳುಗಳಲ್ಲಿ
ಒಲವು ಮಾತುಗಳಾಡಿ
ಮುದ್ದಿಟ್ಟು ಮೂಲೋಕ ಮರೆಸಿದವಳು;
ನಿದ್ದೆ ಬಂದವರಂತೆ
ಎದೆಯಲ್ಲಿ ಹುದುಗಿರಲು
ಕದ್ದು ನೋಡುವ ಆಶೆ ಹಚ್ಚಿದವಳು.

೫

ಅಳಲ ಕಂಬನಿಯೊರಸಿ
ಸೊಗದ ಹೂಮಳೆ ಸುರಿಸಿ
ಮೌನವಾಗಿಯೆ ಮನವ ಮಿಡಿಯುವವಳು;
ನೆನೆಸಿದೊಡನೆಯೆ ಕನಸಿ-
ನಲ್ಲಿ ಕೋರಯಿಸುವಳು
ಜೀವ ಜೀವಾಳದಲಿ ಕೂಡಿದವಳು.

●

ಆನಿ ಬಂತವ್ವಾಽಽನಿ

ಆನಿ ಬಂತವ್ವ ಆ್ಯಽನಿ
ಇದು ಎಲ್ಲಿತ್ತವ್ವ ಮರಿಯಾನಿ॥
ಕಳ್ಳಿಸಾಲಾಗ ಮುಳ್ಳ ಬೇಲ್ಯಾಗ
ಓಡಿಯಾಡತಿತ್ತಾನಿ
ಕಾಲ ಮ್ಯಾಲ ಅಂಗಾತ ಮಲಗಿ
ತೂರನ್ನತೈತಿ ಈ ಆ್ಯಽನಿ!
ಎಂಥ ಚಿಟ್ಟಾನಿ
ನನ್ನ ಕಟ್ಟಾಣಿ
ಇದಕ ಯಾರಿಲ್ಲ ಹವ್ಯಽಣಿ
ಆನಿ ಬಂತವ್ವ ಆ್ಯಽನಿ.
ಅಡವಿ ಕಡೆಯಿಂದ ಹಿಂಡಿನೊಳಗಿಂದ
ದುಂಡಗುರುಳಿ ಬಂತಽ
ದಾರಿ ಮಂದೆಲ್ಲ ಮೀರಿ ತುಡುಕಿದ
ಕೊಸರಿಕೊಂಡು ಬಂತುಽ
ನನ್ನ ಬಂಗಾರ
ಮುದ್ದು ಸಿಂಗಾರ
ಬಾರ ನನ್ನ ಕುವರಾ
ಒರಸತೇನಿ ಬೆವರಾ;
ನಿನ್ನ ನೋಡಿ ಮುದ್ದಾಡಿ ಹಾಡಿ
ಅಪ್ಪಿದರ ದುಃಖ ಹಗುರಾ
ಅಪ್ಪಿದರ ದುಃಖ ಹಗುರಾ;
ಮರದ ಕೊಂಬಿಯನು ಮುರಿದು ಚೆಲ್ಲುವಾ
ಸೊಂಡಿ ಇಲ್ಲ ಇದಕಽ
ತಳಿರ ಕೈಯಿಂದ ಕೊರಳನಪ್ಪಿದರ
ಸುಗ್ಗಿ ಹಾಂಗ ಬದುಕಽ

ನನ್ನ ಕಂದ
ದಿನಕೊಂದು ಚಂದ
ಭವ ಬಂಧ ಬಿಡಿಸ ಬಂದs
ಮನಿ ತುಂಬ ಇದರ ಗಂಧs
ತೊದಲು ತುಟಿಗೆ ತಪ್ಪೆಜ್ಜಿ ಹಾಕಿ
ಬರತೈತಿ ಓಡಿ ಓಟ,
ಬಂದು ಸೆರಗ ಮರೆಯಲ್ಲಿ ಅವಿತು
ಹುಡುಹುಡುಕುವಾಟ ಮಾಟ.

ಆನಿ ಬಂತು ಅರಸಾನಿ ಬಂತು
ದೊರೆಸಾನಿ ಬಳಿಗೆ ಬಂತು;
ನನ್ನ ಅರಸರಾ ಪಟ್ಟದಾನಿ ಇದು
ಬಾಳ ಗುಟ್ಟ ತಂತು.
ನನ್ನೊಡಲ ಜೀವ ಜೀವಾಳದಾಗ
ಚಂದ್ರಾಮನಾಗಿ ನಿಂತು,
ಹುಣ್ಣೀವಿ ದಿನದ ಬೆಳದಿಂಗಳ್ಹಾಲ
ಕುಡಿಲಾಕ ಬಂತ ಬಂತು.
ಆಕಾಶದಾಗ ಚಿಕ್ಕೀಯ ಚಟ್ಟು
ಕಟ್ಟೇತಿ ನಿನಗ ಬಾಳಾ
ಜಗವು ತೊಟ್ಟಿಲಾ, ಚಂದ್ರ ಬಟ್ಟಲಾ
ತುಂಬ ಹಾಲ ಕೊಡುವಾ
ದೇವರಲ್ಲ ಬಡವಾ.
ಜಾಜೀಯ ಬಳ್ಳಿ ಕುಡಿಗೈಯ ಚಾಚಿ
ನೀಡೇತಿ ನಿನಗ ಹೂವಾ
ನಿನ ಮ್ಯಾಲ ಅದರ ಜೀವಾ.
ಬಡಕೊಂಡ ಜೀವ ಉಳಕೊಂಡು ಹೇಗೊ
ನಿಂತೈತಿ ಕುಡಿದು ವಿರಸಾ.

ನೀನೇನ ಪಡೆದು ಬಂದೀಯೊ ಏನೊ
ನೀ ನನ್ನ ಕನಸ ಮನಸಾ.
ಯಾರಾರ ದೃಷ್ಟಿ ಬಡಿದೀತು ಬಾರೊ
ಚಂದ್ರಾಮ ಚೆಲುವ ನೀನು.
ಹಾಲುಗಲ್ಲದಾ ಹಸುಳೆ ತಾಯಿ,
ಸುರಿದೀತು ಜೊಲ್ಲು-ಜೇನು.
ಬಾ ಬಾರೊ ಕಂದ
ಏನಂದ ಚೆಂದ!
ಬಾ ಇಂದ್ರ ಪಟ್ಟದಾನಿ
ದುಡು ದುಡೂ ಬಂದು
ಕಾಲಾಗ ನಿಂದು
ತೂರ್‍ಯಾಡು ಆನಿಯಾಡು.

•

ಬೇಲಿಯ ಮೇಲಿನ ನೀಲಿಯ ಹೂಗಳು

ಸಾಲಾಗಿ ನವಿಲು ಗರಿಗೆದರಿ ನರ್ತಿಸಿದಂತೆ
ಮುಂಜಾವದಲಿ ಬೇಲಿತುಂಬ ನೀಲಿಯ ಹೂವು
ಜೀವನೋತ್ಸಾಹದಲಿ ಎದೆದುಂಬಿಸುವ ರೂಹು!
ಭೂಮಿಯಾಳದ ಭಾವ ಮೇಳೈಸಿ ಪುಟಿದಂತೆ
ಎಲ್ಲೆಂದರಲ್ಲೆ ಮನಸೇಚ್ಛೆ ಬೆಳೆದಿಹ ಬಳ್ಳಿ
ತೆರೆದಿಹುದು ನೂರು ಸಾವಿರ ನೀಲ ಬಗೆಗಣ್ಣು!
(ನೇಸರನಿಗೂ ಜಗಕು ಇನ್ನೂ ನಿದ್ದೆಗಣ್ಣು)
ಎಲ್ಲ ಒಂದೇ ಅದಕೆ - ತೋಟ ಬೇಲಿಯ ಕಳ್ಳಿ-
ಬಿಸಿಲು ಬಲಿಯುವ ಮುನ್ನ ಬಗೆಗೊಂಡ ಸೌಜನ್ಯ
ಮುಖವ ಸಣ್ಣದು ಮಾಡಿ ಮುದುಡಿಕೊಂಡಿರೆ ಜೀವ
ಬರಿಯ ನೆನಪಿಗೆ ಉಳಿದ ದೇಟಿಗಂಟಿದ ಹೂವ
ಬದಿಬದಿಗೆ ನಾಳೆಯರಳುವ ಮೊಗ್ಗೆ ಮೂರ್ಧನ್ಯ!
ವಿಮಲ ಕೋಮಲ ಕಾಂತಿಯಾಗುಮಿಗುವ ಚೈತ್ಯಾಕ್ಷಿ
ಅದೊ ಅಲ್ಲಿ, ಇದೊ ಇಲ್ಲಿ ಪ್ರತ್ಯಕ್ಷ ಸುಮ ಸಾಕ್ಷಿ!

ಋತುಸಂಸಾರ

೧

ಮೂರು ತಿಂಗಳು
ಬೇಸರವ ನೀಗಿಕೊಳ್ಳಲು ಬಂದು ತಂಗಿದಳು
ಮಗಳ ಮನೆಯೊಳು ಮುದುಕಿ ಮೋಜುಗಾರ್ತಿ.
ಮೊದಲೆರಡು ದಿನ ಕ್ಷೇಮಸಮಾಚಾರದ ಸುದ್ದಿ,
ಬೇಡವೆಂದರು ಕೂಡ ಕೆಲಸಕ್ಕೆ ಹಾತೊರೆವ ಕೈ
ಹಾಗೆಯೇ ನಾಲ್ಕು ದಿನ ಸೈ;
ಸುರುವಾಯ್ತು ರಗಳೆ
ಅಷ್ಟಿಷ್ಟು ಮಾತಿಗೇ ವಟವಟಾ ಪಿಟಿಪಿಟೀ.....
ಲಟಿಕೆ ಮುರಿದು ಚಿಟುಕು ಮುಳ್ಳಾಡಿಸುವ
ಸುಮ್ಮ ಸುಮ್ಮನೆ ಹಿಡಿದು ಅಲ್ಲಾಡಿಸಿತು ಅವಳ
ನಿಟ್ಟುಸಿರು ಶಾಪ!
ಅಣಕಿಸುತ ಗಾಳಿಯಲಿ ಹಾರಿಹೋದವು
ಬತ್ತಿದೆಲೆಯ ಬಳಗ.
ಗದಗುಟ್ಟಿ ನಡುಗಿ ಕಟಕಟ ಹಲ್ಲು ಕಡಿದರು ಮಂದಿ;
ಮಾತು ಮಾತಿಗೆ ಅವಳು ಮಾತ್ರ, "ಏನಂದೀ?"
ಸುಕ್ಕುಗಟ್ಟಿದ ಮುಖಕೆ ಸೆರೆಗೆಳೆದು ಕೋಲೂರಿ
ಹೊರಟುಬಿಟ್ಟಳು, ಒಮ್ಮೆಲೇ ಗಂಟು ತಲೆಗಿಟ್ಟು
ಏನವಳ ಸೆಡವು ಸಿಟ್ಟು!

೨

ಮಾವು ಹೂವಿನ ಕೊಡೆ ವಿಮಾನದಿಂದಿಳಿತಂದು
ಬಂದ ಪ್ರೀತಿಯ ಕಂದ;
"ಕುವೂ, ಜಗ್ ಜಗ್, ಪುವ್ವೀ ಟುವಿಟ್ಟವೂ"
ಕಾಲೇಜು ಕಟ್ಟೆಯ ಹತ್ತಿ ಮೊದಲ ಸಲ ಊರಿನೆಡೆ
ಕನಸಿನಲ್ಲಿಯೆ ನಡೆದು ಬಂದಿಹನು ಹುಡುಗ;
ಎತ್ತರೆತ್ತರದಲ್ಲಿ ಹಾರುತಿದೆ ಗಿಡುಗ!
ದಿನದಿನಕು ಕನಸುಗಳು ಚಿಗುರಿ ತೋರಣ ಕಟ್ಟಿ
ಬರೆದಿಹವು 'ಸುಸ್ವಾಗತ'.
ಕಾವ್ಯ ಕಾದಂಬರಿಯ ನಾಯಕರ ಜೊತೆಯಲ್ಲಿ ನಿತ್ಯ ಸ್ವಗತ.

ಕೋಗಿಲೆಯ ಧ್ವನಿಗೆದೆಯ ಬಾಗಿಲವೆ ತೆರೆದಿಹುದು
ಮನದ ಮೇಲಿನ ಮಹಡಿಯಲ್ಲಿ ನಡೆದಿದೆ ಸರಸ ಸಂಗೀತಗೋಷ್ಠಿ!
ನುಗ್ಗೆ ಹೂವಿಗೆ ಲಗ್ಗೆಯಿಟ್ಟು ಮೊರೆದಿವೆ ದುಂಬಿ
ಕಣ್ಣೆದುರು ಕುಣಿಯುತಿವೆ ಕರ್ಪೂರಗೊಂಬಿ:
ಹೋಳಿಹುಣ್ಣಿವೆ ಬಂತು ತಾಳಿ ಎನುತಿದೆ ಗಾಳಿ
ತಾಳಲಾರದು ಬಿಸಿದು ರಕ್ತನಾಡಿ!

೩

ಗಾಳಿ ಗಿರಿಗಿರಿ ಬುಗುರಿಯಾಡಿ ಹಕ್ಕಲುಹೊಲದ
ಹೊಟ್ಟು ರವುದೆಯ ತೊಟ್ಟು ಆಕಾಶಕೇರಿ
ಮೋಡಮೋಡಕು ಹಾಯ್ದು ಝಾಡಿಸಿದೆ, ನೆರೆದಿರುವ
ಸಂತೆಯಲಿ ಬಿಡಬಹುದೆ ಇಂಥ ಹೋರಿ?
ಹೊತ್ತೇರಿದಂತೆ ನೆತ್ತಿಗೆ ಚುರುಕು ಬಡಿದಿತ್ತು
ತಳಿರು ನಾಲಗೆ ಚಾಚಿ ತೇಕುತಿತ್ತು:
ಮರದ ಕೆಳಗಡೆ ನೆಳಲು ಮೈಚಾಚಿ ಮಲಗಿತ್ತು
ಬಿಸಿಲುಗುದುರೆಯು ವ್ಯರ್ಥ ಓಡುತಿತ್ತು.

೪

ಬಂತು ಮಳೆ ಹನಿಯಾಗಿ
ಜೀವವಾಹಿನಿಯಾಗಿ
ಬಾನ ಕೊಡುಗೈದೊರೆಗೆ ಇಳೆಯು ಋಣಿಯಾಗಿ.
ಹಳ್ಳ ಹೊಳೆ ಹಾಡಿದವು ಜಲಪಾತವಾಗಿ.
ಗಿಡಗಿಡದ ನೆತ್ತಿಯನು ಅಡರಿ ಕುಳಿತಿಹ ಜಗದ
ಧೂಳು ತೊಡೆದು
ಧಾರೆ ಎರೆಯುತ ಬಂದ ನವನೀರದ!
ಪುಲಕಗೊಂಡಳು ಪ್ರಕೃತಿ
ಹಸಿರುಟ್ಟು ಹೂವಿನಾರತಿಯೆತ್ತಿ ನಿಂತಿಹಳು
ಬಾನುದ್ದ ಬೆಳೆದಂತೆ ಜಗದ ಪ್ರೀತಿ!
ಒಸಗೆಯಾಯಿತು; ನರನ ಒಂದೊಂದು ಕೃತಿ-ವಿಕೃತಿ
ಋತುಋತುವಿನೊಡನಿಂತು ಬೆಸುಗೆಯಾಗಿ.

●

ನೆರಳು

ನಿಟ್ಟುಸಿರನೆಳೆದು
ದಾಟಿತು ಕೊನೆಯ ರೈಲು:
(ತಕ್ಕೊ ಕೈಮರದ ಕರಡೀಸಲಾಮು!)
ಕೈಯ ಚಾಚಿದ ನೆರಳು ಚಲಿಸುತ್ತಿದೆ!...
ಮೆಲ್ಲಮೆಲ್ಲನೆ ಸಂಜೆ ಹಿಂಬಾಲಿಸುತ ಬಂತು!
ಅಸ್ಥಿಪಂಜರದೊಡಲ ತುಂಬುತ್ತಿದೆ.
ಕೈಯಕೋಲನು ಮೀಟಿ
ಸೇತುವೆಯ ದಾಟಿ
ಕೈಯ ಚಾಚಿದ ನೆರಳು ತೆರಳುತ್ತಿದೆ
ನೆರಳು ನರಳುತ್ತಿದೆ.
ತೊಗಲಬಾವಲಿಯಂತೆ ಜೋತಿರುವ ಜೋಪಡಿಯ ನೆರಳು
ಅಕರಾಳ ವಿಕರಾಳ ಬೆರಳು!
ಅದರ ಮಡಿಲಲ್ಲಿ ಅದೋ . . . . . ಎರಡು ಕಣ್ ಕಪ್ಪಡಿ!
ನಂದಿದಾಶೆಯ ಮನದ ತುಕುಡಿ ತುಕುಡಿ.

ಹೊರಗೆ . . . . . .
ಕೈಬೀಸಿ ಕರೆವ ಈಚಲಗರಿಯ ನೆರಳು
ಮರುಳು?
ನಟ್ಟಿರುಳು ಕೊರಳ ಹಿಸುಕಿದ ತೆರದಿ ನರಿಯ ಕೂಗು!
ಕೊಳ್ಳಿದೆವ್ವದ ಸೋಗು.
ಗೂಬೆ ಜೋಗುಳ ಕೇಳಿ
ಜೋಪಡಿಯೊಳಿರುಳು ಜೋಂಪಿಸಿತು.

ಅಸ್ಥಿ ಪಂಜರ ಕುಳಿತು
ಬೀದಿಯಲಿ ಆಯ್ದ ಕೊರೆ ಬೀಡಿ ಕಿಡಿಗೆ
ಕತ್ತಲೆದೆ ತಿದಿಯಿಂದು ಹೊಗೆಯೆಳೆದು ನೂಕಿ-
ನೆರಳಿನನಿಮಿತ್ತ ಶೋಕಿ!

* * *

ಬೆಳಕು ಹರಿಯಿತು . . . . .
ಯುಗಯುಗದ ಹೊಳವು ಹೊಡಮರಳಿತು.
ಒಡಲ ಹಸಿವೆಗೆ ಸೋತು
ಕೈಕೋಲನಾತು
ನೆರಳು ನಾಲಿಗೆ ಚಾಚಿ ಚಲಿಸುತ್ತಿದೆ.
ಅದೋ! . . . . .
ಕೂಗಳತೆಯಲ್ಲಿಹುದು ರೈಲು ನಿಲ್ದಾಣ:
ನೆರಳು . . . . .
ನೆರಳಿನದೊಂದು ಪರಿವಾರವೇ ನಿಂದು
ಕೈ ಚಾಚುತಿದೆ ನರಗೆ: "ನಾರಾಯಣ!"
ಪುರಿಬಾಜಿ, ಬ್ರೆಡ್ಡು, ಬಿಸ್ಕೀಟು, ಬಿಸಿಬಿಸಿ ಚಹ
ಕಪ್ಪು ಬಸಿ ಗಾನ ಸನ್ಮಾನ. . . . .
ಮುಸುರೆಯರಸುವ ನಾಯಮೊಲೆಗೆ ಜೋತಾಡುತಿವೆ
ಬೀತಕುನ್ನಿ.
"ಕಾಗೆ ಒಂದಗುಳ ಕಂಡರೆ ಕರೆಯದೇ ತನ್ನ ಬಳಗವನು?!"
ಕೈಯಚಾಚಿದ ನೆರಳು ಜೊತೆಗೂಡಿತೆನ್ನಿ!
ಹೊಸನಾತ. . . . . ಹೊಸನಾತ!
ಬಂದು ನಿಂತಿತು ರೈಲು ಮತ್ತೊಂದು:
ನೂಕು ನುಗ್ಗಲಿನಲ್ಲಿ
ತೆವಳಿಕೊಂಡೇ ಬಂದು
ನೆರಳು ಕೈಚಾಚಿತದೊ ಬಾಗಿ ನಿಂದು!

* * *

ಹೊಗೆಯುಗುಳಿ
ದಾಟಿತು ಕೊನೆಯ ರೈಲು-
ಕೈಯ ಚಾಚಿದ ನೆರಳು ತೆವಳುತ್ತಿದೆ
ನೆರಳು ನರಳುತ್ತಿದೆ.

•

ಕಾಲಾತೀತ

‘ಬಿಡುವಿಲ್ಲ, ಅರ್ಜಂಟು!’ ಟಾರುಬೀದಿಯ ತುಡಿತ.
ಕಾರು ಮೋಟಾರು ಸೈಕಲ್ಲು ಟಾಂಗಾ ಟ್ರಕ್ಕು
ಉಸಿರು ಕಟ್ಟುವ ತೆರದಿ ಬಟ್ಟೆಯಲಿ ಹಾಸು-ಹೊಕ್ಕು.
ಗಡಿಯಾರದೆಡೆಬಿಡದ ಟಿಕ್ಕುಟಿಕ್ಕಿನ ಬಡಿತ!
ಆಫೀಸು ಶಾಲೆ ಕಾಲೇಜು ಅಂಗಡಿ ಬ್ಯಾಂಕು
ಎಳೆಯುತಿಹವಯಸ್ಕಾಂತದೊಲು ಜೀವಾಣುಗಳ
ಮೂಗುದಾರವ ಜಗ್ಗಿ: ನೂರುಗಾಲಿಯ ಕೀಲ
ಸವೆದು ಕಿರುಗುಟ್ಟುತಿವೆ; ನರನಿಗೆ ಜಯಪರಾಕು!
ಬೀದಿಯಂಚಿನ ಕಾಲುದಾರಿಯಲಿ ದನಗಾಹಿ
ಮಹಿಷವಾಹನನಾಗಿ ಕೊಳಲೂದಿ ಸಾಗಿಹನು,
ನೋಡಿದಿರ? ನೋಡದಿದ್ದರು ಸರಿಯೆ; ಅವನೇನು
ಮಂತ್ರಿಯೆ? ಯಾವುದಾದರು ಸಭೆಯ ಮನಮೋಹಿ
ಗಾರುಡಿಯೆ? ಅವನಲ್ಲ ಬಿಡಿ; ಆದರೆನ್ನಾಣೆ
ಅಂಥ ಮನಸಿನ ಶಾಂತಿ ಯಾರಿಗಿಹುದೋ ಕಾಣೆ.

●

ದೀಪಧಾರಿ

೧

ಒಂದು . . . ಎರಡು . . . ಮೂರು
ಒಂದೊಂದು ಹೂ ಹಗುರು
ಮಗುವಿಡುವ ಮೊಟ್ಟಮೊದಲಿನ ಪುಟ್ಟ ಹೆಜ್ಜೆಗಳನೆಣಿಸಿದನು
ಸೃಷ್ಟಿಕರ್ತ!
ದಟ್ಟಡಿಯನಿಡುತಲಿವ ನಡೆಗಲಿತುದೇ ಒಂದು
ಶುಭ ಮಹೂರ್ತ.
ಭೂಮಂಡಲವ ನೆತ್ತಿಯಲಿ ಹೊತ್ತು ಮೇಲೆತ್ತುವೊಲು
ಏಳುವವನನಾಮತ್ತು;
ಜೋಲಿ ಹೊಡೆಯುತ ತಂತಿ ಮೇಲೆ ಓಡುವ, ನಡೆವ
ವಿವಿಧ ಕಸರತ್ತು;
ಅದರ ಗತ್ತುಗಳೆಲ್ಲ ಇವನಿಗೂ ಗೊತ್ತು!
ಬಂದು ನೋಡಿರಿ ಒಮ್ಮೆ ಗರ್ದಿಗಮ್ಮತ್ತು.

೨

ಪದವಿಟ್ಟುದೇ ಭಂಗಿ
ನಡೆದದ್ದೆ ದಾರಿ,
ಕಣ್ಣುತಪ್ಪಿದವರಿವನು ವಿಶ್ವಸಂಚಾರಿ!
ಹಿಡಿದದ್ದೆ ಹಟ
ಇವನು ನುಡಿದದ್ದೆ ವೇದ,
ತಳಕಿತ್ತು ಓಡುವವು ಎಲ್ಲ ವಾಗ್ವಾದ
ಎದ್ದನೊ,-
ತೊತ್ತಳಂದುಳಿವ ಯಜ್ಞದ ಕುದುರೆ!
ಬಿದ್ದನೋ-

ಇವಗಿಲ್ಲ ಆದರ ಪರಿವೆ.
ಎದ್ದೆದ್ದು ಬಿದ್ದು ಮುನ್ನುಗ್ಗಿ ನಡೆಯುವ ಹಿಗ್ಗು
ಸಾಹಸದ ದಂಡಯಾತ್ರೆ-
ನಡೆಯುತಿದೆ ಈಗಿನಿಂದಲೆ ಮುಂದಿನಾವ ಹೋರಾಟಕ್ಕೊ ಈ ಸಿದ್ಧತೆ!

೩

ಇವನ ಅಧ್ಯಕ್ಷತೆಯ ಕೆಳಗೆ ಜರುಗಲು ಬೇಕು
ಈ ಮನೆಯ ಪ್ರತಿಯೊಂದು ಕೆಲಸ ಕಾರ್ಯ.
ತಪ್ಪಿತೋ,-
ಹಿಂದುಮುಂದೂ ನೋಡದಿವನು ಊದಿಯೆ ಬಿಡುವ
ಸಮರ ತೂರ್‍ಯ!
ನಮಗಿಲ್ಲ ಇವನೆದುರು ನಿಂತು ನುಡಿಯುವ ಧೈರ್‍ಯ;
ಬೆಳಗಿನಿಂದಲು ಸಂಜೆವರೆಗು ಒಂದೇ ಸವನೆ ಉರಿವ ಸೂರ್‍ಯ!
ಆಡಿದರೆ ಆಡಿಯೇ ಆಡುವನು-ಮನಸುಖರಾಯ
(ನಮೋ ವಿಘ್ನೇಶ್ವರಾಯ)
ಕಲ್ಲೊ ಮುಳ್ಳೊ - ಇವನು ಒಂದನೂ ಲೆಕ್ಕಿಸನು
ವಜ್ರಕಾಯ!
(ಇತ್ತೀಚೆ ಬೇರೆ ಕಲಿತಿಹನು
ಕಣ್ಣಿನಲಿ ನೀರಿಲ್ಲದೆಯೆ ಅಳುವ ಹೊಸ ಉಪಾಯ)
ಮರುಗಳಿಗೆ-ಶುಭಗಳಿಗೆ-ಏನು ಹೊಳೆವುದೊ ಏನೊ
ಏನಿಳಿವುದೋ ಚಂದ್ರಲೋಕದಿಂದ,
ಇಷ್ಟಗಲ ಅರಳುವದು ದುಂಡು ಮಲ್ಲಿಗೆ ನಗೆಯು
ಹೊಮ್ಮಿದೊಲು ಈ ಬಾಳಿನೆಲ್ಲ ಚೆಂದ.

೪

ಎತ್ತಲೋ ಹತ್ತು ದಿಕ್ಕಿಗು ಕೈಯನೆತ್ತುವನು
ಕಾಣದುದ ಕೈಮಾಡಿ ಕರೆಯುತಿಹನು;
ಇವನ ಕಪ್ಪನೆ ಕಣ್ಣೆಗಿದಿರು ಕುಣಿಯುವ ನವಿಲು
ಯಾವುದೊ? ಬೆರಳೆತ್ತಿ ತೋರಿಸುವನು.

ಬಾನ ಮರೆಗಿರುವ ಚಂದ್ರನ ಹುಡುಕಿ ತೆಗೆಯುವನು
ಒಂದೆ ನೋಟಕೆ ಚಿಕ್ಕೆ ಜಾಲಾಡಿಸುವನು;
ಹೂವ ಕಂಡರೆ ಹಿಗ್ಗಿ ಮೂಸುವನು ಈ ರಸಿಕ-
ಬಾನುಲಿಗೆ ತಾನೆ ಹೊಸ ಹಾಡು ಕಲಿಸುವನು.

ಬಿಸಿಲ ಕೋಲನು ಹಿಡಿದು ಮೇಲೇರ ಬಯಸುವನು
ಮಣ್ಣಿನಲಿ ಹೊನ್ನಕಣವಾರಿಸುವನು.
ಮೇಲೆ ಹಾರುವ ಹಕ್ಕಿ ಪುಚ್ಚಗಳನೆಣಿಸುವನು
ಮೌನಗಾಳಿಯ ಜಡಿದು ಮಾತಾಡಿಸುವನು!

ಹಗಲು ಸತತೋದ್ಯೋಗಿ, ಇರುಳು ಕಿಂದರಿಜೋಗಿ
ನಿದ್ದೆ ಎಲ್ಲೊ ಯಕ್ಷಲೋಕ ಸಂಚಾರಿ,
ಇವನೆಳೆಯ ಕಂಗಳಲಿ ಹೊಳೆವ ತಿಂಗಳ ಬೆಳಕು
ದಿನದ ದಾರಿಯೊಳೆಮಗೆ ದೀಪಧಾರಿ.

* * *

ಮಣ್ಣಿನ ಮೆರವಣಿಗೆ

೧

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ;
ಆರಿದೆಯೆಂದವರಾರೊ, ಇನ್ನೂ ನಿಗಿ ನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ!
ಹರಿಯುತ್ತಿವೆ ಬೆಂಕಿಯ ಹೊಳೆ
ತಣ್ಣನೆ ಕಡಲೊಳಗೆ;
ಹೊಗೆಯಾಡುತ್ತಿದೆ ಸುಮ್ಮನೆ ನುಣ್ಣನೆ ಬಾನೊಳಗೆ.
ಬಿದ್ದಿವೆ
ಒಡಮುರಿದೆದ್ದಿವೆ ಗಿರಿ ಗಹ್ವರ-
ಯುಗ ಯುಗಗಳ ನೋವೆ!
ದರಿಕಂದರದೊಳಗಿನ್ನೂ ಹರಿದಾಡಿದೆ ಸಂಶಯವೆ.

ಕುದಿಯುವ ಆ ಬಸಿರಿನ ಆವುದೊ ರಸ ಹೀರಿ,
ಚಿಮ್ಮಿವೆ
ದಿನದಿನವೂ ಹೊಮ್ಮಿವೆ ಹಸುರಾಗಿ
ಲಕ್ಷಾಂತರ ಆಶೆ!
ದಿಕ್ಕು ದಿಕ್ಕುಗಳ ಗೋಪುರವೇರಿ ದಿಟ್ಟಿಸಿವೆ;
ಕಣ್ಣ ಕ್ಷಿತಿಜದ ಆಚೆ ನೂರು ಗೋಲಗಳಾಡಿ
ಅದನಿದನು ಇದನದನು ಹಿಡಿದು ಎಳೆದಾಡಿ,
ಕೂಡಿ ಕುಣಿದಾಡಿ,
ಕೊನೆಯಿರದ ವರ್ತುಲಕೆ ಒಯ್ದು ಮುಟ್ಟಿಸಿವೆ!

ಸಂಜೆ ಮುಂಜಾವಗಳ ಸೂರ್ಯಬಿಂಬದ ಸುತ್ತು,-
ಸದ್ದು ಗದ್ದಲವಿಲ್ಲದೆದ್ದು ಬಾನಂಗಳಕೆ ಬರುವ ಚಂದ್ರನ ಹೆಗಲ ಮೇಲೆ ಹೊತ್ತು,
ಬಾನ ಕಣದಲಿ ಕೋಟಿ ಚಿಕ್ಕೆ ಹಂತಿಯ ಕಟ್ಟಿ
ದಿವದ ಬದುಕನು ಒಕ್ಕಿ ರಾಶಿಮಾಡಿ
ಬೆಳಕು ಚಕ್ರಾಕಾರ ತಿರುಗುತ್ತಿದೆ!

೨

ಮಣ್ಣಮನೆಯೊಳು ಮಗುವು ಕಣ್ಣು ತೆರೆದಿತ್ತು!
ಬೆಳಕಿಂಡಿಯಿಂದ ಪಡಸಾಲೆಯಲಿ, ಮೂಲೆಯಲಿ
ಕೋಲಾಡಿಸಿತ್ತೆಳವಿಸಿಲು;
('ದೇವರ ಬಂಗಾರದ ಕುದುರೆ')
ಕಿಟಕಿಯಲಿ ಕೈ ಚಾಚಿ ಕರೆದ ಚಂದ್ರ.
(ಚಿಂದಪ್ಪ ಚಿಂದಪ್ಪ ಚೆಲುವ, ಚುಂಗಬಿಟಗೊಂಡು ಬರುವ)
ಚಿಕ್ಕೆ ನಕ್ಕವು ಬಾನ ಕನ್ನಡಿಯ ತುಣುಕಿನಲಿ
ಬಾನ ಬೀದಿಗೆ ನೂರು ಬೆಳ್ಳಿಯ ರಥ!
ಅಕ್ಕಪಕ್ಕದ ಮರದ ಹೂ ತುರಾಯಿಯ ಮೇಲೆ
ಹಾಡಿನುಯ್ಯಾಲೆ-
"ಅಕ್ಕ ಓ ಚಿಕ್ಕವ್ವಾ"
ಸಾಲೆ ಕೋಣೆಯಲಂದು ಮಗ್ಗಿ ಒಪ್ಪಿಸುವಾಗ
ಮೇಜ ಮೇಲೆಯೆ ಇತ್ತು ಪೃಥ್ವಿಗೋಳ.
ಗೂಡಿನಲಿ ಕುಳಿತು ಕುಟುಕರಿಸಿತ್ತು ಪಾರಿವಾಳ.
ಕಿಟಕಿಯಾಚೆಗೆ ದೂರ ಬೆಟ್ಟ ಬಯಲುಗಳಲ್ಲಿ
ಮುಂಗಾರು ಮಳೆ ಬೆಳೆದ ಭಾವ ಮೇಳ!
ಮಣ್ಣೆನೆದೆಯೊಳು ಸ್ನೇಹವಂಕುರಿಸಿ ಬೆಳೆದು
ಬೆಳುದಿಂಗಳಿನ ಹೊನಲೆ ಎಲ್ಲೆಲ್ಲು ಹರಿದು
ಕಣ್ಣೆದುರು ಸಾಗಿತ್ತು ಮಣ್ಣ ಮೆರವಣಿಗೆ
ಇಲ್ಲಿಂದ ಆ ಬಾನ ಗುಡಿಯವರೆಗೆ!

೩

ಕತ್ತಲೆಯ ಕೋಣೆಯಲಿ ಹುಣ್ಣಿಮೆಯು ಹರಿದಾಡಿ
ಮಣ್ಣ ಗೋಡೆಯ ಮೇಲೆ ಬಣ್ಣ ಬರೆದಿತ್ತು.
ಆಷಾಢ ನಿಬ್ಬಣವು ಸೂಸ್ಯಾಡಿ ಬರುವಾಗ ಎಷ್ಟೊಂದು ಚೆಂದವಿತ್ತು!
ಚಿತ್ತವೆಲ್ಲಾ ಅದರ ಮೇಲೆ ಇತ್ತು.
ಬಂದು ಹೋದವು ಬಂಡು ಹೂಡಿ ಒಂದರ ಮೇಲೆ ಒಂದು ಮಳೆಗಾಲ-
ಗುಡುಗಿ, ಗದ್ದಲಿಸಿ, ಮದ್ದಲೆ ಬಡಿದು ಕುಣಿದಾಡಿ
ಹಿಡಿದು ಹೆಂಡದ ಬುಂಡಿ ಎತ್ತಿ ಕುಡಿದು!
ಹಾಗೂ ಹೀಗೂ ಗೋಡೆ ನಿಂತಿಹವು ಜೋಲಿ ಹೊಡೆದು;
ಕುಸಿಯತೊಡಗಿದೆ ಕೆಳಗೆ ನೆಲಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು
ಎಷ್ಟು ಮಣ್ಣನು ಹಾಕಿ ಮೆತ್ತಿದರು ಪ್ರತಿ ವರುಷ ಇದರ ಹಾಡೇ ಇಷ್ಟು;
ಮಾಳಿಗೆಯ ಮೇಲೆ ಇರುವೆಗಳ ಸಾಲುದುರ್ಗ,
ಜಂತಿಯಲಿ ಇಲಿಗಳೋಡಾಡಿ ದಿನವೂ ಬುಟ್ಟಿ ಬುಟ್ಟಿ ಮಣ್ಣುದುರಿ
ಎಲ್ಲಿ ನೋಡಿದರಲ್ಲಿ ಸುರಂಗ ಮಾರ್ಗ!
ಇರುಳಿನಲಿ ಕುರುಡು ಬೆಳಕಿನ ಸುತ್ತ ನೆರಳುಗಳ ಕುಣಿತ.
ಇತ್ತೊ ಇಲ್ಲೋ ಎನಿಸಿ ಬಿಡುವ ಕತ್ತಲೆ ಒಳಗೆ;
ಹತ್ತು ಸಲ ಆರಿ ಹತ್ತುವ ದೀಪ ಬೀದಿಯಲಿ!
ಕೂಟು ಕೂಟುಗಳಲ್ಲಿ ಬೂಟು-ಸಪ್ಪಳ ಸೀಟಿ
ದಾಟಿ ಹೊಸತಿಲಿನಾಚೆ ಹೋದರೇನೊ ಎಂತೊ-
ಒಟ್ಟಿನ ಮೇಲೆ,
ಪರಿಸ್ಥಿತಿ ತುಂಬಾ ಶೋಚನೀಯ.

ಮೇಲೆ ಕಣ್ಣಿಟ್ಟ ಕಡೆಗೆಲ್ಲ ಜ್ಯೋತಿರ್ಮಾಲೆ
ನೀಲ ಬೆಳಕಿನಪೂರ್ವ ನೃತ್ಯಶಾಲೆ.
ಮಣ್ಣಮಡಿಲೊಳು ನಿತ್ಯ ಯಾತನೆಯ ನೆಲಗುಮ್ಮ
"ಎಚ್ಚತ್ತು ತಾಯಿ ಎಂವೆ ಬಿಚ್ಚಿ ಏಳಮ್ಮಾ
ಮಲಗಿರುವ ತಾಯಿ ಪೃಥಿವೀ".
ಕತ್ತಲೆಯ ಹುತ್ತ ಬೆಳೆದಿದೆ ಎತ್ತ ಸರಿದರೂ
ಆದರೂ ಎಂಥ ಸೋಜಿಗವೆಂದಿ-

ಬೆಳಕಿನಿಂದಲೆ ಅದರ ಉಪಜೀವನ-
ಜನನದಲಿ ಮರಣದಲಿ ತುಂಬಿ ಜಯಗಾನ.

ಚಳಿಗಾಲದಲ್ಲಿ ಮೈ ಸೆಟೆದುಕೊಂಡಿದ್ದ ತರು
ಬಂದು ನಿಂತಿದೆ ಬೀದಿ ಮಧ್ಯದಲಿ ಸಿಂಗಾರಗೊಂಡ ತೇರು!
ಬೇಡವೆಂದವರಾರು?
ಹಲಗೆ ಬಾರಿಸಿ, ಕಹಳೆಯೂದಿ, ಸಾಗಲಿ ಮುಂದೆ
ದುಂದು ಮೆರವಣಿಗೆ-
ಓ ಜೀವನವೆ!
ಶುಭಮಸ್ತು ನಿನಗೆ.

ಅಪರಾವತಾರ

ಚೋಟುದ್ದ, ಗೇಣುದ್ದ, ಆಕಾಶದುದ್ದ
ಕುತುಬ ಮೀನಾರಕ್ಕೆ ಕೈಯೂರಿ ಎದ್ದ!
ಕೆರೆಯಿಂದ ಸಾಗರದವರೆಗೆ ಸಾಗರಬಿದ್ದ
ರಾಡಿ ಮೈಯಿಂದಲೇ ಮೇಲಕೆದ್ದ-
ಗೌರಿಶಂಕರ ಶಿಖರ ಏರಬೇಕೆಂದಿದ್ದ
ಆದರೀಗಾಗಲೆ ಅದು ನಿಷಿದ್ಧ.
ಬುದ್ಧನೊಬ್ಬನು ಬೇರೆ ಆಗಿ ಹೋಗಿದ್ದ
ಇಲ್ಲದಿದ್ದರೆ ಇವನೆ ಇಂದಿಗೂ ಮುಂದಿಗೂ ಜಗದೆಲ್ಲ ಮಂದಿಗೂ ಸುಪ್ರಸಿದ್ಧ!
ಅಲ್ಲಿದ್ದ
ಇಲ್ಲಿದ್ದ
ಎಲ್ಲ ಕಡೆಗೂ ಬಾಲ ಗುಂಡಾಡಿಸಿದ್ದ.
ಹೋದ ಹೋದಲ್ಲೆಲ್ಲ ಹದನೋಡಿ ಹುಸಿಗುಂಡು ಹಾರಿಸಿದ್ದ!
ಮುದ್ದಾಗಿ ತೋರಿದವ ಹದ್ದಾಗಿ ಹಾರಿದ.
'ಉಳಿದ ಪಕ್ಷಿಗಳೇನು ನನ್ನಂತೆ ಹಾರುವವೆ
ಹಾಡಬಲ್ಲವೆ'? ಎಂದು ಡಂಗುರವ ಸಾರಿದ.
'ಕಿಂಖಿಲಿಲಿಲಿಲಿಲಿ' ಹರಡಿತ್ತು ನಾದಪ್ರಮಾದ!
ಆಕಾಶದಲ್ಲೆ ಯಾವ ದೇವರಿಗೊ ಪ್ರದಕ್ಷಿಣೆ ಹಾಕುತಿದ್ದವನು
ಕೆಳಗೆ ಸರ್ರನೆ ಇಳಿದು ಕೋಳಿಮರಿಗಳ ಮೇಲೆ
ಬಂದೆರಗಿದ!
ಪೂರ್ವಜನ್ಮದ ಸುಕೃತ-
ಈ ಮಹೋದಯ ಕೃಪಾಕಟಾಕ್ಷಕ್ಕೆ ನಾ ಬಿದ್ದೆ ಅಪ್ರಬುದ್ಧ.
ಚಿಕ್ಕೆ ಬಳಗದ ಚಂದ್ರ ಚೆಲುವಿನಿಂದ್ರ
ನಾಲ್ಕಾಣೆ ಚೂರುಗಳ ನಡುವೆ ಹೊಳೆಯುವ ಬೆಳ್ಳಿರೂಪಾಯಿಯಾದ.
ಬಿಡಲಿಲ್ಲ ಈತ ಅಲ್ಲಿಗೂ ಹೋಗಿ ಗಟ್ಟಿ ತಳವೂರಿದ;
ಹೂವಿನ ಸುವಾಸನೆಯ ಬೆಳದಿಂಗಳಿನ ತಂಪ

ತಕ್ಕಡಿಯ ಪರಡಿಯಲಿ ತೂಗ ಹೊರಟ.
ಕೊಬ್ಬರಿಯ ಜೊತೆಗದರ ಕರಟವನ್ನೂ ಕೂಡ
ತಿಂದು ಬಿಟ್ಟ.
ನಿತ್ಯವೂ ಮೊಗೆಮೊಗೆದು ಕುಡಿಯತೊಡಗಿದನಾಸೆಯಾಮಿಷದ ಪೀಯೂಷ

ಏನು ಕೊಟ್ಟರೆ ತಾನೆ ಬಂದೀತು ಇದರಿಂದ
ಬರುವ ಮಾದಕದಮಲು, ಸರಿಗಟ್ಟಿ ನಿಂತೀತು ದ್ರಾಕ್ಷಾರಸ?
ರೂಪಾಯಿ, ಆಣೆ, ಪೈ.
ಮನಸಿನೊಳಗೇ ನೀನು ಬೇಕಾದ್ದು ಬೈ
(ಪೂರ್ಣ ಪರವಾನಿಗಿ)
ಜಮಾಖರ್ಚಿಗೆ ಮಾತ್ರ ವ್ಯತ್ಯಯವಾಗದಿರಲಿ
ವೇದದಷ್ಟೇ ಪೂಜ್ಯ ರೋಜ ಕಿರ್ದಿ.
ರೂ. ಆ. ಪೈ.
ಇದರ ನಾದವೆ ನಾದ, ಇದುವೆ ಸಂಗೀತ
ಇದರ ಕುಣಿತವೆ ಕುಣಿತ: ಝುಣ್ ಝುಣ್ ತಕ್ಕಥೈ.
ಸೈ ಸೈ ತಲೆದೂಗಿ ಬೆನ್ನ ಚಪ್ಪರಿಸಿದನು ಕಥೆಯಾಗಿ ಕುಳಿತ ಆ ಮಿಡಾಸ!
ಅವರಿವರು ತೊಟ್ಟ ಬಿಳಿಯ ಬಟ್ಟೆಯ ಮೇಲೆ
ಮಸಿಯ ಸಿಡಿಸಿದರೆಷ್ಟು ಸೊಗಸು ಸಂತೋಷ!
ಯಾರ ತಲೆಗೆಂಥ ಟೊಪ್ಪಿಗೆಯಾದರೊಪ್ಪೀತು-
ಹಗಲಿರುಳು ಅದರದೇ ಧ್ಯಾನ, ಅದುವೆ ಜೀವನೋಲ್ಲಾಸ!
ಕತ್ತರಿಸಿ, ಹೊಲಿದು, ಬಿಚ್ಚಿ ತೇಪೆಯ ಹಚ್ಚಿ ತೊಟ್ಟು
ತೋರಿಸುವನು ತಗೊ ತಾಸಿಗೆ ನೂರು ವೇಷ.
ಊರಿನುಸಾಬರಿ ಇವನ ಊಟಕುಪ್ಪಿನಕಾಯಿ;
ಕೊಂಡಿ ಮಂಚಣ್ಣ, ಶಕುನಿ, ಜಕ್ಕಿಸಿಹೋದರಿವನೆದುರು-
ಅವರಿಗಿದ್ದವೆ ಹೇಳಿ, ನೂರು ಬಾಯಿ?
ಸಮಯಬಂದಾಗಿರಲಿ ಎಂದು ಸಂಗ್ರಹಿಸಿಹನು
ನಸುಗುನ್ನಿಕಾಯಿ.
ಕರಟಕರು ದಮನಕರಿಗೆಲ್ಲ ಇವನೇ ಇಂದು
ತಂದೆ ತಾಯಿ.

ಕಣ್ಣು ಗುಳಿಗಣ್ಣು, ಸದಾ ಒಳಸಂಚುಗಳ ಕೋಣೆ.
ಒಮ್ಮೆಯಾದರೂ ಅಪ್ಪಿ ತಪ್ಪಿ ಹೃದಯದ ಮಾತು ಹೊರಬಂದರಾಣೆ!
ಬಿಂಕದುಟಿಗಳ ಮೇಲೆ ಹಾಸ-ವಿರೋಧಾಭಾಸ
ಒಮ್ಮೊಮ್ಮೆ ಮಾತಿನಲಿ ಚೈತ್ರಮಾಸ!
ಮೊದಲ ನೋಟಕ್ಕಿವನು ಹಸುಳೆ. ಪೂರಾ ಹಸುಳೆ
ಗುಮ್ಮನಗುಸುಗ;

ಭಾವಕೋಶದ ಮೇಲುಮುಸುಗನೆಳೆದರೆ ಸಾಕು
ಮೂಗು ಮುಚ್ಚದೆ ಬೇರೆ ಗತಿಯೆ ಇಲ್ಲ.
ಒಳ ಮುಚುಗ; ನಾಲಗೆಯು ಹೊರಗೆ ಹಾದರೆ ಚುಚುಗ-
ತಿಂದುಚುಗ!
ಬೆಳಕಿಂಡಿಯಲ್ಲಿಳಿದು ಬಂದು ಬೆಣ್ಣೆಯ ತಿಂದು
ಗುರ್ರೆನುವ ಬಾವುಗ!
ಗೋಣಿಚೀಲದಿ ಹಾಕಿ ಹೊತ್ತು ಹೊರಗೊಗೆದರೂ
ಮತ್ತೆ ಹೇಗೋ ಬಂದು ಮೂಸುವುದು ಸೋಜಿಗ!
ಅಲ್ಲಿಲ್ಲಿ ಸಂಶಯದಿ ಏಕೆ ಹುಡುಕುತ್ತಿಹಿರಿ?
ಇಲ್ಲಿಯೇ, ಇವನಂತರಂಗದಲ್ಲಿಯೇ ಹೊಗೆಯಾಡುತಿದೆ
ಬನ್ನಿ, ಮೂರನೆ ಮಹಾಯುದ್ಧ.
ಗೊಬೆಲ್ಸ ಮಹಾಶಯ ಕೊನೆಯ ಗಳಿಗೆಯಲಿ ತನ್ನೆಲ್ಲ
ಗುಟ್ಟು ಇವನಿಗೆ ಕೊಟ್ಟು ಪ್ರಾಣ ಬಿಟ್ಟ.

ಕಂಡಿರಾ ನೀವಿವನ, ಪರಮ ಸ್ನೇಹಿತನ?
ಸ್ನೇಹಕೆಂದೇ ಮೂರ್ತಿಮತ್ತಾಗಿ ಈ ಇಳೆಗೆ ಅವತರಿಸಿದವನ?
ಮೊನ್ನೆ ಮೊನ್ನೆಯೆ ಆಯಿತೆನಗೆ ತಾನಾಗಿಯೇ
ಇವನೊಡಲ ಬ್ರಹ್ಮಾಂಡದ ಮಹಾದ್ಭುತ ವಿಶ್ವರೂಪದ ದರ್ಶನ;
ಸಿಡಿಲೆರಗಿದಂತಾಯ್ತು ನಡುಗಿಹೋಯಿತು ನನ್ನ ಅತ್ಯಲ್ಪ ಚೇತನ.
"ನಮೋನಮಸ್ತೇಸ್ತು ಸಹಸ್ರ ಕೃತ್ವಃ
ಪುನಶ್ಚಭೂಯೋಪಿ ನಮೋ ನಮಸ್ತೆ."

●

ಲಾಗ

೧

ಲಾಗ ಹೊಡಿಯಲೊ ಮಂಗ, ಲಾಗ ಹೊಡಿಯಲೊ ಮಂಗ
ಬಗ್ಗಿ ದಣಿಯರ ಮುಂದೆ ಲಾಗ ಹೊಡಿಯೊ;
ಹಾಕು ಅಂತರ್ಲಾಗ, ಹಾಕು ಜಂತರ್ಲಾಗ-
ನೆರೆದ ಮಹನೀಯರಿಗೆ ಶರಣು ಹೊಡಿಯೋ!

ಇಸ್ತ್ರಿ ಮಾಡಿದ ಪ್ಯಾಂಟು, ಕ್ರಾಪು ತಲೆ, ಬುಶ್ ಕೋಟು-
ತೊಗಲ ಚೀಲವ ಹಿಡಿದುಕೊಂಡು ಮಗನೆ!
ಅತ್ತಿತ್ತ ಹಣಿಕಿದರೆ ಲತ್ತೆ ಬಿದ್ದಾವು ಬಾ,
ಕುತ್ತಿಗೆಯ ಹಗ್ಗವನು ಜಗ್ಗಿದೊಡನೆ!

ಬಡಿವಾರ ಮಾಡುತ್ತ ಬಸನಿಂಗಿ ಬಂದಾಗ
ಓಡಿ ಹೋಗುವರೇನೋ ಬಡೇಮಿಯಾ?
ಲಾಗ ಹೊಡೆಯುತ ಬಂದು ಗಜಮು ನಿಂತರೆ ನಿನಗೆ
ದೊಡ್ಡ ಕೋಲಿನ ಪದವಿ, ನಿಸ್ಸಂಶಯ.

ಕಂಡ ಕಂಡವರೆದುರು ಹಲ್ಲು ಕಿರಿ, ಪರವಿಲ್ಲ;
ಕೆಲಸ ತೀರುವವರೆಗು ಮುಜುರೆ ಮಾಡು;
ತೊಲೆಯ ಸಂದಿಯ ನಡುವೆ ಬಾಲ ಜೋತಾಡಿಸುತ
ಕೀಲು ಹಿರಿದರೆ ಮಾತ್ರ ನಿನಗೆ ಕೇಡು!

ನೀ ಕೊಟ್ಟ ಹಣ್ಣು ರುಚಿ, ಹೃದಯವಿನ್ನೆಷ್ಟು ಸವಿ!
ಕಡಲ ತಳದಲಿ ಮೊಸಳೆ ತೆರೆದ ಬಾಯಿ-
ಮರದಲ್ಲಿ ಹೃದಯವನು ಬಿಟ್ಟ ಸೋಜಿಗವ ನುಡಿ,
ಬದುಕಿಕೊಳ್ಳಲು ಇದೇ ತಕ್ಕ ದಾರಿ.

ಬೆಕ್ಕು-ಬೆಣ್ಣೆಯ ಜಗಳದಲ್ಲಿ ತಕ್ಕಡಿ ತೂಗಿ
ನ್ಯಾಯದಾನವ ಗೈದ ನಿನ್ನ ಬುದ್ಧಿ-
ರಾಜಕಾರಣಿಗಳನು ತಲೆದೂಗಿಸಿಹುದಿಲ್ಲಿ
ನಿನಗಿಂತ ಅವರಿಗೇ ಹೆಚ್ಚು ಸಿದ್ಧಿ!

ಗುಲಗಂಜಿಯನು ಬೆಂಕಿ ಕಿಡಿಯೆಂದು ಊದಿದರೆ
ನಿನಗಂಜಿ ಚಳಿ ಹೋಯ್ತು, ಬರೋಽ ಬರಿ;
ಸೂಚೀಮುಖನು ಪಟ್ಟಪಾಡು ಯಾರಿಗೆ ಬೇಕು
ಲಾಗ ಹೊಡಿಯೋ ರಾಜ, ನಿಂದೇ ಸರಿ!

ಪ್ರತಿ ವರುಷ ನಿನಗೆಂದೆ ವನಮಹೋತ್ಸವವುಂಟು
ಮೋರೆ ಒಣಗಿಸಿಕೊಂಡರೇನು ಬಂತು?
ಬೇರೆ ದೇಶಗಳಿಂದ ನಿನಗು ಬೇಡಿಕೆಯುಂಟು
ಸೇತು ಬಂಧವ ಬಿಟ್ಟು ಹಡಗ ಹತ್ತು.

ಲಾಗ ಹೊಡಿಯಲೊ ಮಂಗ, ಲಾಗ ಹೊಡಿಯಲೊ ಮಂಗ
ಲಾಗ ಹೊಡಿದರೆ ಬೇರೆ ತ್ಯಾಗ ಬೇಡ!
ಹಾಕು ಅಂತರ್ಲಾಗ, ಹಾಕು ಜಂತರ್ಲಾಗ-
ಡೋಲು ಬಡಿಸುವುದಕ್ಕೆ ಮರೆಯಬೇಡ.

●

ಕೊನೆಯ ನಿಲ್ದಾಣ

೧

ಜೇನು ಹುಟ್ಟಿಗೆ ಯಾರೊ ಹೊಗೆಯಿಟ್ಟು ಹೋದಂತೆ
ಮಂದಿ ಗಿಜಿಗಿಟ್ಟಿರುವ ನಿಲ್ದಾಣ;
ಯಾವುದೋ ಊರು,
ಎಲ್ಲಿಯೋ ಏತಕೋ ಅವಸರದ ಕೆಲಸ,
ಮನದ ಕೊನೆಯಂಚಿನಲಿ ಮತ್ತಾವುದೋ ಸರಸ ವಿರಸ;
ನಿಂತಲ್ಲಿಯೆ
ಕುಳಿತಲ್ಲಿಯೆ
ಎದೆಯ ಮಗ್ಗದಲಿ ಮಿಂಚಿನ ಲಾಳಿ ಓಡಾಡಿದೆ!
ಕೈಯ ಗಡಿಯಾರದಲಿ ಕಾಲದ ನಾಡಿ ಮಿಡಿಯುತಿದೆ-
ಅಲ್ಲಿಗೂ ಇಲ್ಲಿಗೂ ಎಲ್ಲಿಗೋ ಎಳೆಯನೆಳೆದಾಡುತಿದೆ ಜೀವಜೇಡ!

ದೂರ ತಾರಸ್ವರದಿ ಕೂಗಿಕೊಂಡಿತು ಗಾಡಿ
(ಮುಗಿಲ ಭೇದಿಸಿ ಬರುವ ಅಶರೀರವಾಣಿ!)
ಅಡವು ಹತ್ತಿದ ಮೈಯ ತುರಿಸಿಕೊಳ್ಳುತ ನಾಯಿ
ಎದ್ದು ಕಿವಿ ಝಾಡಿಸಿದೆ-
ಧಡ್... ಧಡ್... ಧಡ್... ಧಡ್
ಕಂಪಿಸಿದವೆರಡೂ ಕಂಬಿ
ನೂರು ಗಾಲಿಗಳುರುಳಿ ದಡ್ಡು ಬಿದ್ದಿರುವೆದೆಯು
ಹೊಡೆದುಕೊಂಡಿದೆ ಮತ್ತೆ ಧಡ ಧಡಿಸಿ-
ಓ ಬಂತು !..... ಬಂದು ನುಗ್ಗಿತು ಗಾಡಿ
ಬಂದಂತೆ ಕೊನೆಗೊಮ್ಮೆ ಬೇರು ಕಿತ್ತು!
('ಬಂದಿತೆಂದರು ಇದ್ದುದಿದ್ದೆ ಇತ್ತು'.)

ಸಾಮಾನು ಸಟ್ಟು ಎಲ್ಲಾ ಒಳಗಿಟ್ಟು ಕುಳಿತೆಯಾ?-
ಇಲ್ಲವೋ ಇಲ್ಲಿ ಜಾಗ ಡಬ್ಬಿ ಭರ್ತಿ.
ಮೋಟಾರು ಬಸ್ಸೋ, ಸಿನಿಮ ಸರ್ಕಸ್ಸೋ, ಎಲ್ಲಿ ಹೋದರೂ
ಇದೇ ಫಜೀತಿ!

ಎಂಥ ಹುಚ್ಚನೋ ನೀನು!
ಸುಮ್ಮನೆ ದಂಗು ಬಡಿದೇಕೆ ನಿಂತಿ?
ಹೂಂ ಹತ್ತು, ಜೋರಾಗಿ ಆ ಕಡೆ ಒತ್ತು, ಈಗ ನಿನ್ನ ಸರತಿ.
'ಮಹಾಜನೋಯೇನ ಗತಸ್ಸಪಂಥಾ'
ಯಾರಾದರೇನು, ತಮಗಿಷ್ಟು ಆರಾಮು ಜಾಗ ಸಿಕ್ಕರೆ ಸಾಕು-
ಸಾಕಪ್ಪ ಸಾಕು; ಕುತ್ತಿಗೆ ಹಿಡಿದು ದಬ್ಬುವುದೊಂದೆ ಬಾಕಿ!
ಎಲಾ ಅವಿವೇಕಿ,
ಗುಂಪಿನಲ್ಲೂ ನೀನು ಮಾತ್ರ ಏಕಾಕಿ!

* * * * * * *

ಇದು ಹೊರಟಿದ್ದೆ ಲೇಟು
ಬಂದು ಮುಟ್ಟಿದ್ದು ಇನ್ನೂ ಲೇಟು;
ಸುಮ್ಮನೆ ಹೊಗೆ ಬಿಡುತ್ತಿದೆ ಸಾಹೇಬರ ಬಾಯ ಚಿರೂಟು;
ಫುಸ್.... ಫುಸ್.... ಫುಸ್....
ಉಶ್‌ಶ್.... ಎಲ್ಲಿ ಸತ್ತಿತೋ ಗಾಳಿ
ಒಂದೇ ಸವನೆ ಸೆಖೆ ಕುಚ್ಚುತಿದೆ
ಬಂದ ಬೆವರೆಲ್ಲ ಇಂಗಿ ಒಳ ಅಂಗಿ ಒಣಗಿ ಒತ್ತುಗರಡಾಗಿದೆ!
'ಸೋಡಾ ಲೆಮನ್ ಆರೇಂಜ್......'
'ಗರಮಾ ಗರಂ ಚಹಾ ....'
'ಒಂದಾಣೆ ದಿನ ಪತ್ರಿಕೆ'
ಅರೆ, ಎಲ್ಲಿ ಹೋಯಿತು ಕೋಟಿನೊಳಗಿಟ್ಟ ಪಾಕೀಟು!
ಅದರ ಜೊತೆಗೇ ಇತ್ತು ಈಗ ತೆಗೆಸಿದ ತಿಕೀಟು,
ಐದರದೊಂದು ನೋಟು!

ನನ್ನ ಪಾಲಿಗೇ ಬರಬೇಕೆ ಇಂಥ ಪಡಿಪಾಟು!
ಅಪರೂಪಕ್ಕೆ ಭೆಟ್ಟಿಯಾಗಿದ್ದ ಗೆಳೆಯರಿಗೆ
ಚಹ ಕುಡಿಸಲೊಂದಾಣೆ ಉಳಿಯಲಿಲ್ಲ,
ಅವರಾದರೂ ನನ್ನ ಕರೆಯಲಿಲ್ಲ;
ಯಾವ ಡಬ್ಬಿಯನೇರಿ ಯಾರ ಡುಬ್ಬದ ಮೇಲೆ ಕುಳಿತರೋ ಯಾವ ಬಲ್ಲ!
ಕಿಟಕಿಯೊಳಗಿಂದಲೇ ಒಳಗೆ ತುರುಕಿರಬೇಕು ಅವರ ಹಮಾಲ.
ಬೆನ್ನ ಹಿಂದೆಯೆ ಬೆಕ್ಕಿನೊಲು ಬಂದು ನಿಲ್ಲುವನೀಗ ಚೆಕ್ಕರು.
ಇದ್ದುದನು ಹೇಳಿದರೆ ನಂಬಬಹುದೇ ಅವನು?
ಹಾಗು ಹೀಗೂ ಜಡಿದು ವಸೂಲು ಮಾಡದೆ ಬಿಡನು.
ಇಲ್ಲಿ ಗದ್ದಲದಲ್ಲಿ ಕಣ್ಣು ತಪ್ಪಿಸಿ ನುಸುಳಿ ಪಾರಾಗಬಹುದು-
ಅಲ್ಲಿ ಏನೋ ಎಂತೊ
ನಾನಿಳಿವ
ಆ
ಕೊನೆಯ ನಿಲ್ದಾಣದಲ್ಲಿ!
(ಜಪ್ತು ಮಾಡಿದರೆ ಮಾಡಲಿ, ನನ್ನ ಕಿಸೆಯೆಲ್ಲ ಖಾಲಿ.)

* * * * * * *

ಇದು ದೊಡ್ಡ ನಿಲ್ದಾಣ ಕೂಟ
ಇಲ್ಲಿಂದಲೇ ಹೊರಟು ಇಲ್ಲಿಗೇ ಬಂದು ಕೂಡುವವೆಲ್ಲ ಕಡೆಯ ಗಾಡಿ;
ದೇಹಾದ್ಯಂತ ಸಂಚರಿಸಿ ಪುಪ್ಪುಸಕೆ ಹರಿವಂತೆ ರಕ್ತನಾಡಿ.
ನಮ್ಮ ಗಾಡಿಗೆ ಏನು ಬಂತೊ ಧಾಡಿ-
ನಿಂತು ನಿಂತಲ್ಲಿಯೇ ಗೊರಕೆ ಹೊಡೆಯುತ ಮಲಗಿಬಿಡುವ ರೂಢಿ.

ಎಲ್ಲಿ ಹೋದನೊ ಪುಣ್ಯಾತ್ಮ ಗಾರ್ಡ
ತ್ರಿಶಂಕುವಿನಂತೆ ನಮ್ಮನಿಲ್ಲಿಯೆ ಬಿಟ್ಟು; ಕೈಯಲ್ಲಿ ತಾಳಕೊಟ್ಟು
ಕುಣಿಯ ಹಚ್ಚಿದನಲ್ಲ, ಇವನೊಬ್ಬ ದೊಡ್ಡ ಕೀರ್ತನಕಾರನೇ ಥೇಟು!
ಆಕಳಿಸಿ, ತೂಕಡಿಸಿ, ಓಕರಿಸಿ ಸಾಕಾಯ್ತು ಮೂಗು ತಿಕ್ಕಿ!
ಒಬ್ಬರ ಮೇಲೊಬ್ಬರು ಹತ್ತಿ ಹತ್ತಿಕ್ಕಿ ಹತ್ತಿಯಂಡಿಗೆಯಂತೆ
ತುಳಿಯುತ್ತಿಹರು-

ಹೊಡೆಯಬಾರದೆ ಗಂಟೆ
ಊದಬಾರದೆ ಸೀಟಿ!
ಉರುಳಬಾರದೆ ಒಮ್ಮೆಲೇ ನೂರು ಗಾಲಿ!
"ಉಧೋ ಉಧೋ ಒಳಗಿದ್ದ ಬೆಳಕೆ ಬೆಳಕೇ
ಉಧೋ ಉಧೋ ಹೊರಗೆ ಬಾ ಏಕೆ ಒಳಕೆ!"

೨

ಧಡಗ್... ಗಡಗ್... ಧಡಗ್... ಗಡಗ್...
ಇದ್ದ ಶಕ್ತಿಯನೆಲ್ಲ ಒಟ್ಟುಗೂಡಿಸಿ ಮುಂದಕೆಳೆಯಿತೆಂಜಿನ್ನು
ಒಂದೊಂದೆ ಸುತ್ತು ಎಣಿಸುತ್ತ ಉರುಳಿದವು ಗಾಲಿ,
ಉಸಿರಾಡಿಸಿತು ಗಾಳಿ.
ಸಾಗಿದವು ಡಬ್ಬಿ ಹೊಯ್ದಾಡುತ್ತ ಒಂದರ ಹಿಂದೆ ಒಂದು...
ದೊಡ್ಡ ಸಂಸಾರಕ್ಕೆ ಒಬ್ಬನೇ ದುಡಿಯುವವ
ಹಬ್ಬಿ ಬೆಳೆದಿದೆ ಬಳಗ ತೂಗು ತೊಟ್ಟಿಲವಾಗಿ, ಬೆಳ್ಳಿ ಬಟ್ಟಲವಾಗಿ
ಒಂದಕ್ಕೆ ಹತ್ತಾಗಿ. ಹತ್ತು ನೂರಾಗಿ!
ವರುಷ ವರುಷಗಳೆಷ್ಟೊ ಗತಿಸಿದವು ಹೀಗೆಯೇ ಹಳಿಗುಂಟ ಸಾಗಿ.
ಜಗ್ ಜಗ್ ಝುಕು ಝುಕು
ಜಗ್ ಜಗ್ ಝುಕು ಝುಕು ಜಗ್ ಜಗ್...
ಓಹೊ! ಕುಣಿಯಲೂ ಬಲ್ಲದೀ ಗಾಡಿ ಒಮ್ಮೊಮ್ಮೆ ಉನ್ಮಾದಗೂಡಿ.
ಒಳ್ಳೆ ಪ್ರಾಯದ ಮೋಡಿ;
ಹತ್ತಿ ದಿಬ್ಬವ, ಸಿಳ್ಳು ಹೊಡೆದು, ಹುಬ್ಬನು ಕುಣಿಸಿ
ಹಸಿರ ಸೆರಗನು ಜಗ್ಗಿ ಸರಸವಾಡಿ
ಸೇತುವೆಯನೊತ್ತಿ ಮುತ್ತಿಟ್ಟು ಆಲಿಂಗಿಸುತ
ಕಣಿವೆ ಕಂದರಗಳಲಿ ಕಟ್ಟಾಡಿಸಿ-
ಜಗ್... ಜಗ್... ಝುಕು... ಝುಕು
ಜಗ್... ಜಗ್...
ಕೊಂಚ ಮುಗ್ಗರಿಸಿತ್ತು ಗಾಡಿ, ಬಿತ್ತು ಬ್ರೇಕು!

ಅಂತು ಇಂತೂ ಕೊನೆಗೆ ಬಂದು ಮುಟ್ಟಿತು ಇಗೊ ಬಂತು ನಿಲ್ದಾಣ;
ನಿಟ್ಟುಸಿರುಗರೆದು ನಿಂತಿತೋ ಆಗಿ ನಿತ್ರಾಣ;
ಹತ್ತುವರು ಇಳಿಯುವರು ಮುತ್ತಿ ಮುಗಿ ಬೀಳುವರು
ಮತ್ತೆ ನಿನ್ನಂಥವರು ಎಷ್ಟೋ ಜನ!
ಎಡಬಲದ ಗಿಡಮರಗಳೋಡಿ ಡಿಕ್ಕಿಯ ಹೊಡೆದು,
ಗಿರಿದರಿಗಳೆಲ್ಲ ಗರ ಗರ ತಿರುಗಿ, ಎಲ್ಲಿಗೋ ಬೀಸಿ ಒಗೆದು,
ಗಕ್ಕನೆ ಜೇನು ಜಗ್ಗಿ ನಿಲ್ಲಿಸಿದಂತೆ ಬಹುದೂರ ನೆನಪು-
ಇಡಿಯ ಹಾಡಿನಲಿ ಎದೆಯ ಮಿಡಿದಂತೆ ಯಾವುದೋ ಒಂದು ಚರಣ,
ಇರಲಿ; ಹೊತ್ತಾಯ್ತು ಮತ್ತೇಕೆ ಆ ಎಲ್ಲ ಹಳೆ ಪುರಾಣ?
ಹೊರು ನಿನ್ನ ಹೋಲ್ಡಾಲು
ಹಿಡಿದುಕೋ ಕೈ ಚೀಲ
ಇಳಿದು ಬಿಡು ಸಾವಧಾನ.

ಜಗ್... ಜಗ್.... ಜಗ್... ಜಗ್..
ಚಲಿಸುತಿವೆ ಗಾಲಿ,
ಮತ್ತೆ ಎಲ್ಲಿಂದಲೋ ಬಂತು ತ್ರಾಣ
ಎಲ್ಲಿಹುದೊ, ಈ ಇದರ ಕೊನೆಯ ನಿಲ್ದಾಣ?!

•

ರಂಜನಾ

ರಂಜನಾ-
ಎಲ್ಲಿ ಕುಳಿತರು ಬಂದು ಕಿವಿಗೆ ಝೇಂಕರಿಸುವುದು
ಮನೆ ತುಂಬ ಹರಿದಾಡಿ ಮರಿದುಂಬಿ ಗುಂಜನ;
ಕಣ್ಣು ನೀಲಾಂಜನ, ಕರಗಿಸಿದ ನಕ್ಷತ್ರ
ಮೂಗು ಹಟಮಾರಿತನಕೊಡೆದ ಮೊಗ್ಗು-
ಗೋಣು ಹೊರಳಿಸಿ ಸೋಗು ಮಾಡಿ ಕುಣಿವೀ ನವಿಲು
ಎತ್ತಿಕೊಂಡರೆ ಮುಗಿಲತನಕ ಹಿಗ್ಗು!

ದಿನದಿನದ ಬೆಳಗು ಹೊಂಗಿರಣದ ಕಿರೀಟ-
ನೂರು ಬಣ್ಣದ ಹೂವ ನರುಗಂಪನೊಮ್ಮೆಲೇ ಚಿಮ್ಮಿಸುವ ತೋಟ.
ಇದು ಯಾವ ಹಕ್ಕಿ-ಹಾಡಿನ ಮಧುರ ಸಂಪುಟ?
ಎಲ್ಲ ಸಂತೋಷಕೂ ಕನ್ನಡಿಯ ಹಿಡಿಯುವುದು ಈ ಮುಖದ
ಮುದ್ದುಮಾಟ.

ಆನಂದ ಬಂದರಿವಳಾಡಿಸುವನು
ಚಂದ್ರ ಒಂದೇ ಸವನೆ ಕಾಡಿಸುವನು
ಮೂವರೂ ಕೂಡಿದರೆ ಮೂರು ಲೋಕಕು ಧಾಳಿ
ಯಾವ ದೇವರು ಬಂದು ಬಿಡಿಸುವವನು?

ಮೂರು ಸಲ ಒಪ್ಪಂದ, ನೂರು ಸಲ ಯುದ್ಧ
ಅವರಿವರ ಸಂಧಾನ ಮೊದಲೇ ನಿಷಿದ್ಧ!
ಪಡುವಣಕೆ ಸಂದ ರವಿ ಮೂಡಣದಿ ಎದ್ದ
ರಂಗ ಭೂಮಿಗೆ ಮತ್ತೆ ರಥ ಕುದುರೆ ಸಿದ್ಧ.

ರಂಜನಾ

ಇವಳ ದೀರ್ಘಸ್ವರದ ನಡುವೆ ಅವರಿಬ್ಬರೂ ಬರಿ ವ್ಯಂಜನ,
ಸೆಡವು ಬಂದರೆ ಸುತ್ತಿ ಬೀಸುವ ಪ್ರಭಂಜನ!
ತಕ್ಷಣವೆ ಕೇಳುವುದು ಗುಡುಗು ಮಿಂಚಿನ ತಾನ

ಮರುಚಣದಿ ಮಳೆಬರುವ ಮೇಳಗಾನ,
ಸುತ್ತಿ ಸುಳಿವುದು ಮತ್ತೆ ಮಂದ ಪವನ,
ಮುಗಿಲು ತೆರೆವುದು ತನ್ನ ಕಲೆಯ ಭವನ.
ನೀರಿನೊಳು ಆಡುವವು ಮೂರು ಮೀನ.
ದೇವಲೋಕದ ಸರಕು ಹೊತ್ತು ತಂದಿಹ ಹಡಗು
ಈ ದಡವ ತುಂಬಿರುವದಿದರ ಬೆಡಗು;
ಕ್ಷಿತಿಜದಂಚಿನವರೆಗೆ ತೆರೆ-ನೊರೆಯ ಕೌತುಕವು
ತೆರೆಯುವದು ದಿನಕೊಂದಮೌಲ್ಯವಸ್ತು.

ಇರುಳ ಮೌನಕೆ ಬೆಳಕು ತೊದಲು ನುಡಿದು,
ಮೂಡ ಪಡುವಣದಲ್ಲಿ ಜೀವ ಒಡನುಡಿದು;
ಬೆಳಕು-ಬಯಕೆಯ ಬಳ್ಳಿ ನಾಲ್ದೆಸೆಗು ಹಬ್ಬಿ
(ಮರ ಮರವನಾಡಿಸಿವೆ ತರತರದ ಗುಬ್ಬಿ,)
ಹೂವ ಸೂಸಿದೆ ಸುತ್ತ ಪಾರಿಜಾತ
ಹಸುಳೆ ನಗೆ, ಹೂ ಬಿಸಿಲು ಓ! ಎಂಥ ಚಿತ್ರ.

ರಂಜನಾ
ರಂಜನಾ
ಕುಹೂ ಕುಹೂ ಕೂಜನ
ವಾತ್ಸಲ್ಯದ ಕೇತನ
ಇಲ್ಲಿ ಬಾ, ಹೆಜ್ಜೆಗಳ ಕುಣಿಸಿ ತೋರಿಸು, ಜಾಣೆ
ನೋಡೋಣ, ಕಾರಂಜಿ ಬೃಂದಾವನ!

ಈ ಸೃಷ್ಟಿ ನೂತನ
ನೀನೆಮ್ಮ ಚೇತನ
ತೃಣಮಪಿ ನ ಚಲತಿ ನಿನ್ನ ವಿನಾ, ನಿನ್ನ ವಿನಾ, ನಿನ್ನ ವಿನಾ.

ಧಾರವಾಡದಲ್ಲಿ ಮಳೆಗಾಲ

ಏನಿದೀ ಹನಿಹನಿಯ ತೆನೆತೆನೆ ಸಿವುಡಗಟ್ಟುತ ಒಗೆವುದು!
ಗುಡ್ಡ ಗುಡ್ಡಕೆ ಗೂಡು ಬಡಿಯುತ ಬೇರೆ ಸುಗ್ಗಿಯ ಬಗೆವುದು.
ಸೆಳಸೆಳಕು ಬೆಳೆ ಕೊಯಿದರೂ ಆ ಮೋಡದೊಕ್ಕಲು ತಂಗದು
ಬಾನ ಮೇಟಿಗೆ ಸೋನೆ ತೂರುತ ರಾಶಿಮಾಡದೆ ಹಿಂಗದು.

ಏನು ಬೆಳ್ಳಗೆ ಎಷ್ಟು ತೆಳ್ಳಗೆ ಮಳೆಯ ಮಸ್ಲಿನ್ ಪರದೆಯು!
ಒಳಗೆ ಸುಮ್ಮನೆ ಕುಳಿತು ನೋಡುವಳಾರು ಹೇಳಾ ಮುಗುದೆಯು?
ಹೂ ಬಿಸಿಲ ಕರವಸ್ತ್ರದಲಿ ತರತರದ ಹೆಣಿಕೆಯ ನಕ್ಷೆಯು
ದೂರ ಹೋದವರಿಂದು ಬರುವರೆ, ಎಂದು ಬರುವ ನಿರೀಕ್ಷೆಯು?

ನೋಡು ಮೋಡದ ಬಸ್ಸು ಭರ ಭರ ತುಂಬಿಕೊಂಡೇ ಸಾಗಿವೆ
ಯಾವ ಗಿರಿಶಿಖರದಲ್ಲಿ ಜಾತ್ರೆಯೊ, ಏಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕೆ ಬಂದರು
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

ಏನು ಕಳಕೊಂಡಿರುವೆ ಗಾಳಿಯೆ ಏಕೆ ಈ ಪರಿ ಹುಡುಕುವೆ?
ಕಿಡಕಿ ಬಾಗಿಲು ಮುಚ್ಚಿರಲು ಕಿರು ಬಿರುಕಿನಲಿ ಬಿಸುಸುಯ್ಯುವೆ.
ಆ ಹಿಮಾಲಯದಿಂದ ನಿನ್ನನು ಬೀಸಿ ಒಗೆದರೆ ಇಲ್ಲಿಗೆ?
ಸಪ್ತ ಸಾಗರ ಸುತ್ತಿ ಬಂದೆಯ, ಮತ್ತೆ ಹೋಗುವದೆಲ್ಲಿಗೆ?

ಮೋಡ ನೂತೇ ನೂಲುವದು ಬಿಳಿ ದಾರ ಧಾರಾಕಾರದಿ
ಗುಡ್ಡ ಮರಡಿಗೆ ಸುತ್ತಿ ಕುಕ್ಕಡಿ ಮಾಡಿ ತುಂಬಿದೆ ಕೊಳ್ಳದಿ,
ಹಳ್ಳ-ಹೊಳೆ ಮಗ್ಗದಲಿ ನೇಯುತ ಹೊರಗೆ ಕಳಿಸಿದೆ ಮಾಲನು
ಗದ್ದೆ ಹೊಲ ತೋಟಕ್ಕೆ ಹೊಚ್ಚಿದೆ ಕೆಂಪು ಖಾದಿಯ ಶಾಲನು.

ಹಗಲು ಇರುಳೂ ಕೆಲಸವೇನಿದೆ ಮಳೆಗೆ?-ಬಂದೇ ಬರುವದು,
ನಡುವೆ ಚಕ್ಕನೆ ಹಸುರ ಮಧ್ಯಕೆ ಸೂರ್ಯ ಸರ್ಚ್‌ಲೈಟ್ ಕೆಡವಲು
ಹನುಮನೆದೆಯೊಳು ರಾಮ ಸೀತೆಯರಂತೆ ಕಣ್ಣಿಗೆ ಹೊಳೆವುದು
ಮರುಚಣವೆ ಆಕಾಶವೆಲ್ಲವು ಹರಿದು ಬಿದ್ದೊಲು ಸುರಿವುದು.

ಕಾರಹುಣ್ಣಿವೆ ಕರಿ ಹರಿದು, ಮಣ್ಣೆತ್ತು ನೀರನು ಕುಡಿದವು.
ಬಂತು ಪಂಚಮಿ ಬೋಲಬಗರಿಗೆ, ಹೆಣ್ಣು ತವರಿಗೆ ಮಿಡಿದವು.
'ಅರಳು-ಮರಳಿ'ನ ಕವಿಯು ಕರೆದನು 'ಬಾರೊ ಸಾಧನಕೇರಿಗೆ'-
ಬಂತು ಶ್ರಾವಣ ಬಳಗದೊಂದಿಗೆ 'ಮಳೆಯು ಎಳೆಯುವ ತೇರಿಗೆ'.

ಗಣಪತಿಯು ಇಲಿಯೇರಿ ಭರ್ಜರಿ ವೇಷದಲ್ಲಿಯೆ ಬಂದನು
ಗರಿಕೆ ಪತ್ರಿಯ ಪೂಜೆ ಸಂದಿತು, ಕಡಬು ಹೋಳಿಗೆ ತಿಂದನು.
ಘಟಸ್ಥಾಪನೆಯಾಯ್ತು: ಮೋಡದ ಕೊಡವು ಬುಡಮೇಲಾಯಿತು
ಸೀಗೆ ಹುಣ್ಣಿವೆಗಾ ಮಸಾರಿಯು ಹಸುರು ಪುಚ್ಛವ ತೆರೆಯಿತು.

ಗೌರಿ ಹುಣ್ಣಿವೆ ಹಾಲ್ಗುಡಿದು ಬಿಳಿಜೋಳ ಧ್ವಜವನ್ನೆತ್ತಿತು.
ಗೋಧಿ ಹೊಡೆಗಟ್ಟಿರಲು ಕಡಲೆಯ ಮಡಿಲು ಹೂಮಿಡಿ ತುಂಬಿತು;
ಕುಸುಬೆ ಹೂಗಳ ಜರದ ಪೀತಾಂಬರವ ಹಬ್ಬಕೆ ಉಟ್ಟಿತು
ಮೊದಲೆ ದೀಪಾವಳಿಗೆ ಒಲುಮೆಯ ದೀಪ ಬೆಳಗಿಸಿಕೊಂಡಿತು.

ಏನು ಈ ಗಿಡ ಬಳ್ಳಿ ಮರಗಳಿಗೆಲ್ಲ ಎಂತಹ ಜಳಕವು!
ಹಸುರು ಹಚ್ಚನೆ ನಿಮಿರಿ ನಿಂತಿಹ ನೆಲಕೆ ಹರ್ಷದ ಪುಳಕವು,
ಎಲ್ಲಿಯಾದರು ಕಸರು-ಕಡ್ಡಿಯ ಹುಡುಕಿ ತೆಗೆಯಿರಿ ನೋಡುವ-
ಕೆಸರೊ? ಬೇಕಾದಷ್ಟು-ನಡೆಯಿರಿ ನಗರ ಸಭೆಗೇ ತೂರುವ.

ಕೊಡೆ ಹಿಡಿದು ಕಾಯ್‌ಪಲ್ಲೆ ತಂದರೆ ಪ್ಯಾಂಟು ಕೂಡಲೆ ಪಚಡಿಯು.
ಕಾರು ಹೊಯ್ದರೆ ಬಾಯ್ಗೆ ಸಿಡಿವುದು ಕೆಂಪು ಗೋಧಿಯ ಕಿಚಡಿಯು.
ಮಳೆಯ ಪಂಜರದಲ್ಲಿ ಸೆರೆಯಾಗಿಹೆವು ಸರ್ಕಸ್ ಹುಲಿಗಳು.
ಅಲ್ಲಿ ಹೊಲ ಗದ್ದೆಯಲಿ ಕೊಪ್ಪೆಯ ಹೊತ್ತು ಗೆಯ್ವರೆ ಕಲಿಗಳು.

ಬೂಟು ಚಪ್ಪಲು ಮಾಡದಲ್ಲಿಯೆ ಬುರುಸುಗಟ್ಟಿವೆ ಥಂಡಿಗೆ-
ಕೋಟು ಸ್ವೆಟರಿನ ಮೇಲೆ ಸ್ಕಾರ್ಫನು ಸುತ್ತಿ ಹೊರಟಿರ ದಂಡಿಗೆ?
ಬಿಸಿಲು ಮೋರೆಯ ಕಾಂಬುದಾಯಿತು ಬರಿಯ ಮನಸಿನ ಮಂಡಿಗೆ
ಜೀವ ಬೇಡಿದೆ ಕಾಫಿ ದೋಸೆಯ ಕರಿದ ಹಪ್ಪಳ ಸಂಡಿಗೆ.

ಒಲೆಯ ಬದಿಯಲಿ ತಲೆಯ ಹುದುಗಿಸಿ ಮಲಗಿಕೊಂಡಿಹ ಬೆಕ್ಕಿಗೆ
ಕನಸಿನಲ್ಲಿಯು ಇಲಿಯು ಬಾರದು, ಹಕ್ಕಿ ಗೂಡೊಳು ತೆಪ್ಪಗೆ.
ಮೈಯುಡುಗಿ ನಡುಗುತ್ತ ದನಕರು ಮೇದು ಬರುತಿವೆ ಒಟ್ಟಿಗೆ
ಮನೆಯ ಒಳಗೇ ಕುಳಿತು ಕಾತರಿಸಿಹೆನು ಗೆಳೆಯರ ಭೆಟ್ಟಿಗೆ.

ಬಿಸೇ ಚುರುಮುರಿ ಕಡಲೆ ಮಾರುವ ಮುದುಕಿ ಬಂದರೆ ಕರೆಯಿರಿ
ಮಕ್ಕಳೊಂದಿಗೆ ಕುಳಿತು, ಕುರುಕುರು ತಿಂದು ಹೊರಜಗ ಮರೆಯಿರಿ.
ಅಷ್ಟುಮಿಕ್ಕೀ ಬೇಸರಾದರೆ ರೇಡಿಯೋ ಕಿವಿ ತಿರುವಿರಿ.
ರಾತ್ರಿಯಾಗಲು ಊಟ ತೀರಿಸಿ ಜೊತೆಗೆ ಬೆಚ್ಚಗೆ ಮಲಗಿರಿ.

●

ಯುಗ ಯುಗದ ಹಾಡು

ಯುಗ ಯುಗಕೂ ಉರುಳುತಿಹುದು
ಜಗದ ರಥದ ಗಾಲಿ,
ಹಗಲು ಇರುಳು ಮರಳಿ ಮಸೆದು
ಸಾಹಸ ಮೈತಾಳಿ.

ಕಾಡು-ನಾಡು, ದೇಶ-ಕೋಶ
ಭಾಷೆ-ಭಾವ ದಾಟಿ,
ಭೂಮಿ ಬಾನು, ಬೆಂಕಿ-ನೀರು
ಗಾಳಿ-ರಾಟಿ-ಧಾಟಿ.

ನವ ಜನಾಂಗ ಮೂಡಿ, ಮೊಳಗಿ
ಬದುಕು ತಿದ್ದಿ ತೀಡಿವೆ;
ಸೂರ್ಯ, ಚಂದ್ರ, ಚಿಕ್ಕೆ ಕೋಟಿ
ಕಣ್ಣರಳಿಸಿ ನೋಡಿವೆ.

ಊರು-ಕೇರಿ, ಭೂಮಿ-ಸೀಮಿ
ಮೀರಿ ಬೆಳೆದ ಮಾನವ,
ನೂರು ತಾರೆಗಳಲಿ ಹುಡುಕು-
ತಿಹನು ವಿಶ್ವಗಾನವ.

ಸುತ್ತು ಮುತ್ತು ಭಯ, ಸಂಶಯ
ಕೊಳ್ಳಿ ದೆವ್ವ ಕುಣಿದಿವೆ;
ಮನ ಮನಗಳ ಮುಳ್ಳುಬೇಲಿ
ಮಮತೆ ದೂರ ತಳ್ಳಿವೆ.

ಯುಗಪುರುಷರ ಜಗುಲಿಗಿರಿಸಿ
ಕೈಯ ತೊಳೆದುಕೊಂಡೆವು;
ಬಯಲಾಟದ ವೇಷ ಕುಣಿದು
ಬೆಳಗು ಬರಲು ದಣಿದೆವು.

ಪ್ರತಿಪದವೂ ಪ್ರಗತಿಗೆಂದು
ಹದವಿಲ್ಲದೆ ಮಿದಿದೆವು;
ಕುದಿಯಿಲ್ಲದೆ ಎಸರಿಲ್ಲದೆ
ಕಸುಕಿಗೆ ಬಾಯ್ದೆರೆದೆವು.

ನಿನಗೆ ಬೇವು, ನನಗೆ ಬೆಲ್ಲ-
ನವಯುಗಾದಿ ಗಾದೆಯು;
ಕೂಡಿ, ಕುಟ್ಟಿ ಸವಿಯಲಿಲ್ಲ
ಯುಗ ಯುಗಗಳ ಹಾಡಿದು.

ದೂರ ದೂರ ಬೇರು ಚಾಚಿ
ಟೊಂಗೆ, ಟಿಸಿಲು ಮನುಕುಲ;
ತಾಯಿ ಬೇರು ಕಾಯಬೇಕು
ಹಣ್ಣಾಗಲಿ ಹಂಬಲ.

ಶುಭಾಶುಭದ ಫಲವ ಹೊತ್ತು
'ಶೋಭನ' ವಿದೊ ಬಂದಿದೆ;
ಇಳುಹಿಕೊಳ್ಳಿ ತಲೆಯ ಭಾರ
ಲಾಭ-ಹಾನಿ ಮುಂದಿದೆ.

•

ಕಾಲ ನಿಲ್ಲುವುದಿಲ್ಲ

೧

ಈ ಕಾಲನೆಂಬುವ ಪ್ರಾಣಿ
ಕೈಗೆ ಸಿಕ್ಕರೆ ಚೆನ್ನಾಗಿ ಥಳಿಸಬೇಕೆಂದಿದ್ದೆ;
ಎಲ್ಲೊ ತಲೆಮರೆಸಿಕೊಂಡು ಓಡಾಡುತಿದ್ದಾನೆ.
ಆಕಾಶದಲ್ಲಿ ಮಿಂಚಿ,
ಭೂಕಂಪದಲ್ಲಿ ಗದಗದ ನಡುಗಿ,
ಜ್ವಾಲಾಮುಖಿಯೊಳಗೆ ಸಿಡಿದು ನುಚ್ಚುನೂರಾಗಿ,
ನದಿನದಿಯ ಗರ್ಭವ ಹೊಕ್ಕು, ಮಹಾಪೂರದಲಿ ಹೊರಬಂದು
ನಮ್ಮೆದೆಯಲ್ಲಿ ತುಡಿವ ತಬಲವಾಗಿದ್ದಾನೆ.
ಹಿಡಿಯಿರೋ ಅವನ.....
ಗಡಿಯಾರದಲ್ಲವನ ಹಿಡಿದು ಗಾಣವಾಡಿಸಲು
ಹೆಣಗಿದ್ದೇವೆ.
ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿದು
ಒದೆಸಿಕೊಂಡಿದ್ದೇವೆ.
ತುಡಿವೆದೆಗೆ ಕಿವಿಗೊಟ್ಟು, ಮಿಡಿವ ನಾಡಿಯ
ಹಿಡಿದು ನೋಡಿದ್ದೇವೆ;
ಒಳಹೊರಗೆ ಉಸಿರು ಆಡುತ್ತಿದೆ ನಿರಾಯಾಸ.
'ಬಯಲು ಆಲಯದೊಳಗೋ? ಆಲಯವು ಬಯಲೊಳಗೋ?
ಕೊನೆಗೊಮ್ಮೆ ಅವನೇ ಎಲ್ಲ ಬಗೆಹರಿಸುತ್ತಾನೆ,
ಯಾರಿಗೂ ಅವಸರವಿಲ್ಲ ತಾನೇ?
ಈ ಕುದುರೆಯೇರಿ, ಲಗಾಮು ಬಿಗಿ ಹಿಡಿದು
ಸವಾರಿ ಮಾಡುವುದಷ್ಟು ಸುಲಭವಲ್ಲ.
ನಮ್ಮೆದೆಯ ಮೇಲೆಯೇ ಕಾಲಿಟ್ಟು ಓಡಿಹೋಗುವುದ
ನಾವೆಷ್ಟು ಸಲ ಅನುಭವಿಸಿಲ್ಲ?
ಸೆಕೆಂಡು, ಮಿನಿಟು, ತಾಸುಗಳ ಹಾಸು-ಹೊಕ್ಕಿನಲಿ

ಅಲ್ಲೊಂದು ಇಲ್ಲೊಂದು ಬಣ್ಣದ ನೂಲು
ಬೆತ್ತಲೆ ಬದುಕ ಸುತ್ತಿ ತೋರಿಸುತ್ತಿದೆ ಡೌಲು.
ಹೆಜ್ಜೆಯಿಟ್ಟಲ್ಲೆಲ್ಲ ಜೋಲಿಹಿಡಿದರೆ ಮಣ್ಣು
ಧುಮುಕುತಿದೆ ನೀರು,
ಮೈಸುತ್ತಿ ಒಳಹೊಕ್ಕು ನೋಡಿದೆ ಗಾಳಿ,
ಹದ್ದು ಮೀರಿದೆ ಬಯಲು-
ಬೆಳಕು-ಕತ್ತಲೆ ಕುಂಡದಲ್ಲಿ ಮುಳುಗೇಳುತಿಹೆವು ದಿನವೊಂದಕ್ಕು
ನಿದ್ದೆ ತಿಳಿದೆದ್ದಾಗ ಭೂಮಿಯಾಕಾಶಕ್ಕೆ ದೊಡ್ಡ ಬಿರುಕು.

೨

ಸದಾ ಅದೇ ಸೂರ್ಯಚಂದ್ರರ ಸುಪರಿಚಿತ ಮೋರೆ,
ನಮ್ಮಂತೆಯೇ ಅವರಿಗೂ ತಿರುಗುವದೊಂದೆ ಹೋರೆ.
ಆದರೂ ಆಗೀಗ ಈಚೆಯ ದಡಕ್ಕು ಹಾಯುವದು ಬೆಳಕಿನ ತೆರೆ.
ಒಡಮುರಿದೆದ್ದು ನಾಲ್ಕೂ ಕಡೆಗೆ ಕೈ ಚಾಚಿ
ನಿಂತಲ್ಲೆ ಬೇರು ಬಿಟ್ಟಿವೆ ವೃಕ್ಷ
[ಅಗೆದು ನೋಡಲೆ ಬೇಕೆ?]
ಹರಡಿಕೊಂಡಿದೆ ಹಸಿರು ಸಂಸಾರ
ನಮಗು ಅದಕೂ ನಿತ್ಯ ಹೊಕ್ಕು ಬಳಕೆ.
ಆರು ಋತುಗಳು ಬಂದು ಆರೈಕೆ ಮಾಡುವವು
ಯಾವುದೋ ಹಾರೈಕೆ ಎದೆಯೊಳಿಟ್ಟು;
ತತ್ತಿಯೊಡೆದು ರೆಕ್ಕೆ ಬಲಿತಾಗ ಹಾರುವವು ಗೂಡು ಬಿಟ್ಟು.
ದೂರದಲ್ಲಿಯೆ ಸಾಲು ನಿಂತ ಪರ್ವತ ಶಿಖರ
ಆಗಿಲ್ಲ ಭೂಮಿಗೆ ಭಾರ.
ತೇಲುತಿವೆ ಅಂತರಾಳದಲಿ ನೂರು ಗೋಲ.
ಸೋತು ತಲೆಬಾಗಿಲ್ಲ ಆಕಾಶ,
ಮೂಲೆ ಹಿಡಿದು ತೂಕಡಿಸಿಲ್ಲ ಗಾಳಿ,
ಒಳಗು ಹೊರಗೂ ಹರಿದು ಸ್ವಚ್ಛವಾಗಿದೆ ನೀರು
ಅಣೆಕಟ್ಟೆಗೂ ಕೆಳಗೆ ಆರುಪಾರು.
ಎತ್ತಿನ ಬಂಡಿಯಿಳಿದು, ಬಸ್ಸಿನ ದಾರಿ ಕಾಯ್ದು, ಕಾರಿನಲಿ ತೂರಿ,

ಹಡಗ ಬಿಟ್ಟು ವಿಮಾನದಲಿ ಹಾರಿ
ಗೋಲಗಳ ಮೇಲೆ ಧಾಳಿ ಮಾಡಿದ್ದೇವೆ.
ಮೈಕಿನಲಿ ಕೊಕ್ಕೊಕ್ಕೋ ಕೂಗಿ, ತುರಾಯಿ ಕುಣಿಸಿ
ಬೆಳಗಾಯಿತೆಂದು ಭ್ರಮಿಸಿದ್ದೇವೆ.
ಹೊಸದಾಗಿ ಹೂಡಿದ ಮೂಡಲ ಹೋರಿ ಮುಸುಗರೆದು
ಅಡ್ಡಾದಿಡ್ಡಿ ಜಗ್ಗುತಿದೆ,
ಜೊತೆಗಿರುವ ಸಾದು ಎತ್ತಿನ ಕೂಡ ಕಾದಾಟ.
ಹೌದು, ನಾವೆಲ್ಲ ಹೊಸಬರೆ;
ಅಜ್ಜ ಮುತ್ತಜ್ಜರಿಗೆ ಮಂಗಳಾರತಿ ಮಾಡಿ
ಕೈಯಲ್ಲಿ ಗಂಟೆ ಹಿಡಿದಿದ್ದೇವೆ.
ನೈವೇದ್ಯಕ್ಕೆ ಪಾಕವೇ ಸಿದ್ಧವಾಗಿಲ್ಲ, ಆಗಲೇ
ಪ್ರಸಾದ ಹಂಚಿದ್ದೇವೆ.
ಎದುರಿಗಿದ್ದದ್ದೆಲ್ಲ ಅದಲು-ಬದಲು ಕಂಚೀಬದಲು
ಹುಡುಕುತ್ತಿದ್ದೇವೆ ಕಣ್ಮುಚ್ಚಿ; ಇವರ ಬಿಟ್ಟವರಾರು?

೩

ದಿನವು ಬಿಸಿ ಬಿಸಿ ಅನ್ನ ದೇಹಕ್ಕೆ ಹಿತ.
ಮುಂಜಾವದಡಿಗೆ ಸಂಜೆಗಾಗಲೇ ತಂಗೂಳು.
ಹಳಸಿದನ್ನವ ನಾಯಿ ಕೂಡ ಮೂಸುವುದಿಲ್ಲ. ಅದೆ
ಅಕ್ಕಿ, ಜೋಳ, ಗೋಧಿಗಳಿಂದ ವಿಧವಿಧದ ಪಕ್ವಾನ್ನ
ಗಮಗಮಿಸುವುದು. ಉಪ್ಪು, ಕಾರ, ಹುಳಿ, ಸಿಹಿ
ತಕ್ಕಷ್ಟು. ಬದಲಾವಣೆಯೇ ಬಾಳಿನೊಗ್ಗರಣೆ.
ಬಾಡಿಸಿಕೊಳ್ಳಲೆಂದೆ ಉಪ್ಪಿನಕಾಯಿ.
[ಕದ ತಿನ್ನುವವಗೆ ಹಪ್ಪಳ ಈಡೆ?]
ಮಿತಿಮೀರಿದರೆ ಎಂಥ ಸುಗ್ರಾಸವೂ ಅಜೀರ್ಣ.
ಕುದಿಯುವುದು, ಮಿದಿಯುವುದು, ಹೊಂದಿ
ಹದಗೊಳ್ಳುವುದು: ಬದುಕಿನಲಿ ಎಲ್ಲರಿಗು ತೆರೆದ ದಾರಿ.
ಶ್ರುತಿಗೂಡಿದಾಗ ಹೊಮ್ಮುವುದು ಹಾಡಿನ ಲಹರಿ
ಗಾಳಿಯ ಬೆನ್ನಮೇಲೆ ಮೋಡದ ಸವಾರಿ.

ಗುಡುಗಿರಲಿ, ಮಿಂಚಿರಲಿ, ಮುಂಗಾರಿಗಾರು ಕಾತರಿಸಿಲ್ಲ?
ಉರಿವ ಬೇಸಗೆ ಚಿಗುರು ಚಿಣ್ಣರನು ಎತ್ತಿ ಆಡಿಸಿಲ್ಲ?
ಥಂಡಿಯ ಮುಸುಗಿನಲ್ಲು ಬೆಚ್ಚನೆ ಕನಸು ಕಂಡಿಲ್ಲ?
ಬೆಂಗಾಡಿನಂಗಾಂಗದಲ್ಲು ತುಂಗಭದ್ರೆಯು ತುಂಬಿ ಹರಿದಿಲ್ಲ?

ವರ್ತನೆಯ ನರ್ತನಕೆ ಪರಿವರ್ತನೆಯ ಸೊಬಗು.
ಕಂದ, ವೃತ್ತಗಳ ಝುರಿ ತೊರೆಯ ನಡುವೆ
ಹಸುರಿಗೆ ಗದ್ಯದುದ್ಯಾನ;
ಹದಿನೆಂಟು ಬಣ್ಣನೆಯ ಹುಲ್ಲುಗದ್ದೆಯ ನಡುವೆ
ಚಂಪುವಿನ ತಂಪುಕೊಳ.
ನಿಬ್ಬಣಕೆ ಹೊರಟಂತೆ ಹಾಡುಗಬ್ಬಗಳ ಕೊಲ್ಲಾರಿ ಬಂಡಿ.
ಭಾವ-ಗೀತ ಒಪ್ಪಿದರೆ ಚೆಂದ ವಧೂವರ ಜೋಡಿ.
ಒಲೆ ಹೂಡಿದ ಮೇಲೆ ಅದರ ಬಿಸಿ ತಾಗುವದು
ಕುದ್ದು ಹಣ್ಣಾಗುವದು ನೂರು ಅನುಭವದ ನವ್ಯಪಾಕ.
ಬಗಲಗಸೆ ಅಂಗಿಯಿಂದ ಬುಶ್‌ಕೋಟಿನವರೆಗೂ
ತೊಟ್ಟು ಕಳಚಿದ್ದೇವೆ.
ಮಾಡಿ ಉಂಡಿದ್ದೇವೆ ನಮನಮಗೆ ಸೇರಿದ ಅಡಿಗೆ.
ಇರಬಹುದು ಇದರಲ್ಲಿ ಕೆಲಭಾಗ ಜೀವನಸತ್ವ ಕಡಿಮೆ.
ಇದ್ದ ಶಕ್ತಿಯಲಿ ತುಸು ದೂರ ನಡೆದಿದ್ದೇವೆ.
ರೂಢಿಯಾಗಿದೆ ಒಬ್ಬೊಬ್ಬರಿಗು ಒಂದೊಂದು ಬಗೆಯ ನಡಿಗೆ.
ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ.

ಕಾಲ ನಿಲ್ಲುವುದಿಲ್ಲ; ನಾವು ಕೂಡುವದಿಲ್ಲ.
ಮಳೆಬಂದರೂ ಕಾಮನಬಿಲ್ಲು ಮೂಡುವದೆಂಬ ನಿಯಮವಿಲ್ಲ.
ಹಗಲಿರುಳ ಗಾಲಿಯಲಿ ಸೋಲು ಗೆಲುವಿನ ಕೀಲು ಭದ್ರ.
ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು
ನಿಂತವರಿಗೂ ಉಂಟು ನೋಡಿ ಸಂತಸ ಪಡುವ ಭಾಗ್ಯ.
ಗೆದ್ದವರಿಗಿದ್ದೆಯಿದೆ ಬೆಳ್ಳಿಯ ಥಾಲು.
ಸೋತವರ ಸೊತ್ತು
ಗೆದ್ದವರನಳೆವ ಜಗದೆಲ್ಲ ಅನುಭವದ ಪಾಲು.

ನೆಲ-ಮುಗಿಲು

ಕಣ ಕಣದ ಗತಿ-ಮತಿಯ ಗುರುತಿಸು, ಆದರೀಗಲೆ
ಅದರ ಇತಿವೃತ್ತವನು ಬರೆಯದಿರು, ನೀನಾಗಿ
ಕೊರೆಯದಿರು ದಾರಿಯನು. ಬಯಲ ಬಿಡುಗಡೆ ನುಂಗಿ
ನೀರು ಹಿಡಿಯಲಿ, ವಿಶ್ವವೆಲ್ಲವು ತೆರೆದ ಬಾಗಿಲೆ.
ಹಾರಿ ಹಕ್ಕಿಯಾಗಲಿ: ತುತ್ತ ತುದಿಗಿದೆ ಚುಕ್ಕಿ.
ಮೀರಿ ಹರಿಯಲಿ ದಡವನೆರಡೂ ಕಡೆಗೆ ಬಾಚಿ.
ಬತ್ತಿತೋ? ಚಿಮ್ಮುವದು ಒರತೆ ನಾಲಗೆ ಚಾಚಿ.
ಆಕಾಶ ಕೈ ಹಿಡಿದು ಎತ್ತುವದು, ಮುತ್ತಿಕ್ಕಿ
ಭೂಮಿಗಿಳಿಸುವುದು: ತೊಡೆಯ ಮೇಲಾಡುವದು ಮಗು.
ತಾಯ ಮೊಗ ಸೂರ್ಯಪಾನವು ಹೊರಳೆ ಹೊಂಬೆಳಗು!
ಎಲ್ಲೆಡೆಗು ಏಕಕಾಲಕೆ ಬಹುದೆ ಮಳೆ? ಹರಗು
ಒಳಹೊರಗು ಸಿದ್ಧವಿರು. ಹೊಸ ನೀರು ನಿಬ್ಬೆರಗು
ಗುರುತ್ವಾಕರ್ಷಣ ಕರುಣೆ-ಕೇಂದ್ರ ನೆಲದೊಡಲು
ಬಾನತೀಂದ್ರಿಯ ಸ್ಪರ್ಶ-, ತುಂಬಿ ತೇಲಿವೆ ಮುಗಿಲು.

ಬಿಸಮಿಲ್ಲಾರ ಶಹನಾಯಿವಾದನ ಕೇಳಿ

ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ; ನೂರು ಬಗೆ
ಭಾವ ಕುಸುಮವನೆತ್ತಿ ಗಾಳಿಸುಳಿಯಲಿ ಹೀಗೆ
ನರುಗಂಪ ತೇಲಿಸುವ; ಹಂಬಲದ ಸವಿದನಿಗೆ
ತುಂಬಿ ಆಲಿಸುವ; ಮನಸಿನ ಮಧ್ಯಬಿಂದುವಿಗೆ
ಕನಸು-ಕಾಮನಬಿಲ್ಲು ವರ್ತುಳವ ರಚಿಸಿ, ನೆಲ-
ಮುಗಿಲನೊಂದು ಸಲ ಬಂಧಿಸಿ ಜೀವ ಸ್ಪಂದಿಸುವ;
ಮೋಡದೊಡಲಿಗೆ ಮಿಂಚು ಸಂಚರಿಸಿ ಹನಿಗರೆವ
ರಾಗ ಲಹರಿಯ ತೊರೆಗಳೋಡಿ ತಬ್ಬಿವೆ ಕಡಲ.
ಕೋಟಿ ಮೈಲಂತರದ ನೀಹಾರಿಕೆಯ ನಾಡಿ-
ಮಿಡಿತ ತಟ್ಟಿತು ಕವಿಗೆ; ನಾದದ ಕೂದಲೆಳೆಯಲಿ
ಪೃಥ್ವಿತೂಗಿರೆ, ಸೂರ್ಯಚಂದ್ರರಿಗು ಜೋಕಾಲಿ.
ಪಾತಾಳಗವಿಗೆ ತೆರೆದವು ನೂರು ಬೆಳಕಿಂಡಿ.
ಹೊಕ್ಕಳ ಹುರಿಯ ಕತ್ತರಿಸಿ ಮುಗಿಯೆ ಶಹನಾಯಿ
ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ.

ಹಳಕಟ್ಟಿಯವರು

ಯಾವುದೋ ಅಮೃತಘಳಿಗೆ, ನಿಮ್ಮ ದೃಷ್ಟಿಗೆ ಬಿತ್ತು
ಹೂತಿಟ್ಟ ಹೊನ್ನಗಣಿ! ತೋಡಿದಿರಿ ಹಗಲಿರುಳು
ಮೈಮರೆತು; ಹೊರದೆಗೆದು ಹೇರಿದಿರಿ ಬಂಡಿ ಬಂಡಿ
ಚಿನ್ನದ ಅದಿರು; ಹಿಂಗಿತು ಹಸಿವು ನೀರಡಿಕೆ.
ತಾಳೆಗರಿ ಗರಿಯೊಡೆದು ಮರಮರವೇರಿ ಕುಕಿಲಿ
ಬೆಳಕನೆಚ್ಚರಿಸಿದವು; ನಡುವೆ ಮೂಡಿತು ಶರಣ-
ರನುಭಾವ ಮಂಟಪದ ಮಾಣಿಕ್ಯದೀಪ್ತಿ, ನಡೆ-
ನುಡಿಯ ಜ್ಯೋತಿರ್ಲಿಂಗ! 'ತನ್ನರಿವೆ ಗುರು' ಎಂಬ
ವಚನ ಕೊಟ್ಟಿರಿ. ನಿಮಗೋ? ಶೂನ್ಯ-ಸಂಪಾದನೆ.
ರುಮಾಲದ ಕಟ್ಟು ಬಿಚ್ಚಿಲ್ಲ. ತೆಗೆದಿಲ್ಲ ಇಟ್ಟ
ಕನ್ನಡಕ. ಉಡುಗಿಲ್ಲ ಉಟ್ಟ ಧೋತರ ಮಡಿಯು.
ಮೆಲುದನಿ-ಮಾತು ಭಕುತಿ ಬಳ್ಳಿಗೆ ಬಿಟ್ಟ ಕುಡಿಯು.
ಗೋಳ-ಗುಮ್ಮಟ ತಾನೆ ತಲೆ ಬಾಗಿಸಿತು ನಿಮಗೆ,
ಏಳು ಸಲ ಕರೆದರೂ ಎಚ್ಚರಾಗದು ನಮಗೆ.

•

ಹೊಸ ವರುಷದ ಸ್ವಾ(ಸ್ವ)ಗತ ಭಾಷಣ

ಯಥಾಪ್ರಕಾರ
ತಿಥಿ ನಕ್ಷತ್ರಗಳ ಅಕ್ಷಮಾಲೆಯ ಹಿಡಿದು
ಹಬ್ಬ-ಹುಣ್ಣಿಮೆ-ಅಮಾವಾಸ್ಯೆಗಳ ರುಬ್ಬುಗುಂಡಿನಲಿ ಸಜ್ಜಾಗಿ
ಯಾವ ಹೂರಣ ತುಂಬಿ ಕೊಡಬಂದೆ ವಿಶ್ವಾವಸು?
ಏನೇನು ಹೆಚ್ಚಿ ಹೆರಚಿ ಪಚಡಿ ಮಾಡುವೆ ಹೇಳು:
ಏನೆಲ್ಲ ಕೂಡಿಸಿ, ಕುಟ್ಟಿ ಚಟ್ನಿ ಅರೆಯಲಿಕಿರುವೆ?
ಯಾವ ಕಾಳನು ಕುದಿಸಿ ಗುಗ್ಗರಿ ಮಾಡಿ, ಒಗ್ಗರಣೆ ಭಗ್ಗೆನಿಸುವೆ?
ಯಾವ ಬೆಂಕಿಯ ಮೇಲೆ ಇಟ್ಟು ಹಪ್ಪಳ ಸುಡುವೆ?
ಯಾವ ಬಾಣಲೆಯಲ್ಲಿ ಏನ ಬಡಿಸುವೆ ಬಡಿಸು
ನಾವು ಹಸಿದಿದ್ದೇವೆ.

ದಿನವೂ ನಮಗೆ ಶಿವರಾತ್ರಿ
ಪ್ರತಿಯೊಂದು ಹಗಲಿರುಳ ಸಂಧಿಕಾಲವೂ ನಮಗೆ ಸಂಕ್ರಾಂತಿ.
ಎತ್ತರದ ಬಾನಿನಲಿ ಬಿಳಿಯ ಕುಸುರೆಳ್ಳುಗಳ ಹರವಿ
ಆಶೆ ತೋರಿಸಬೇಡ:
ಕೊಡುವುದಾದರೆ ನೆಲದ ಉಡಿತುಂಬ ಕೊಡು
ಹೊಡೆಯೆತ್ತಿ ನಿಲ್ಲಲಿ ಬದುಕು.
ಉಂಡು ಉಪವಾಸಿಗಳು ನಾವು
ಬಳಸಿದ ಬ್ರಹ್ಮಚಾರಿಗಳು.
ಸರ್ವಧರ್ಮ ಸಹಿಷ್ಣುತೆಯ ಜಗಜ್ಜಾಹೀರಗೊಳಿಸಿ
ಜಾತಿಕೂಪಕೆ ಮತ್ತೆ ಜಾರಿಕೊಂಡವರು;
ಗಾಳಿ ಬೀಸಿದ ಹಾಗೆ ತೂರಿಕೊಂಡವರು.
ಹೊಸ ವರುಷವೇ ಬಾ, ಹಿಂಜರಿಯದಿರು
ನಿನಗು ಗೊತ್ತಿರಬೇಕು: ನಾವು ಸತ್ಕಾರಶೂರರು ಎಂದು.
ತತ್ಕಾಲದಲಿ ಸಭೆಗೂಡಿ, ಕೊರಳಿಗೆ ಪುಷ್ಪಹಾರವ ಬಿಗಿದು

ಪುಕ್ಕಟೆಯಾಗಿ ಚಪ್ಪಾಳೆ ತಟ್ಟುವವರು.
ಪೇಟೆಯಲಿ ಸಿಗದ ಸಕ್ಕರೆಯನೆಲ್ಲ ಮಾತಿನಲಿ ತಂದು ಸುರಿವವರು
ಘಾಯದ ಮೇಲೆ ಅಹಿಂಸಕ ಜೇನುತುಪ್ಪವ ಸವರಿದವರು.
ಬೆಳ್ಳಗಿನ ಬಟ್ಟೆ ತೊಟ್ಟ ಬೆಳ್ಳಕ್ಕರಿಗರು.
ಮನದ ಬೇವೆಲ್ಲ ಹರಿದು ನಾಲಗೆ ತುದಿಯ ಬೆಲ್ಲದಲಿ ಕೂಡಿ
ರಸಸಿದ್ಧಿ ಪಡೆದವರು.
ಸತ್ಯದ ಮಿಸುವಿ-ಮಿಂಚನು ಅಸತ್ಯದ ಖನಿಯ ತೋಡಿ ಹುಗಿದವರು.

ಇಷ್ಟಾದರೂ ನಾವು ಬದುಕಿದ್ದೇವೆ, ಬಾ
ಈ ಮಿಶ್ರಿತಬೆಣ್ಣೆಯನ್ನು ಸಳಮಳ ಕುದಿಸಿ, ಸೋಸಿ
ತುಪ್ಪ ಬಂದರೆ ಉಳಿಸು;
ಇಲ್ಲ, ತಪ್ಪು ದಂಡವ ಕೊಡಿಸು.
ವರುಷದ ವಸಂತಕ್ಕೆ ಹರುಷದಲಿ ಪಲ್ಲವಿಸಿ
ಭುಲ್ಲವಿಸಿ ನಿಂತಿವೆ ಹೊಂಗೆ, ಮಾವು, ಬೇವು.
ನಾವೇನು ಪಾಪ ಮಾಡಿದ್ದೇವೆ?
ಭೂತದ ಬೇರಿನಿಂದ ವರ್ತಮಾನದ ಟೊಂಗೆ ಟಿಸಿಲೊಡೆದು
ಭವಿಷ್ಯದ ಚಿಗುರು, ಹೂ, ಹಣ್ಣುಗಳ ನೀಡು ನಮಗೆ:
ನಾವು ಹಸಿದಿದ್ದೇವೆ.

ಅಂತೂ ಸಕಾಲಕ್ಕೆ ಆಗಮಿಸಿ, ವೇದಿಕೆಯ ಮೇಲೆ
ವಿರಾಜಮಾನನಾಗಿರುವ ವಿಶ್ವಾವಸು-
ದಯವಿಟ್ಟು ಅಧ್ಯಕ್ಷತೆಯ ವಹಿಸು
ನಮ್ಮ ಮುಂದಿನ ಕಾರ್ಯ ಸಾಂಗಗೊಳಿಸು.
ಹಿಂದಿನ ಮಹಾಶಯರು ಇದೇ ಕುರ್ಚಿಯಲಿ ಕುಳಿತು
ಮಾಡಿದ ಕಮಾಯ, ನಡೆಸಿದ ಕಾರಭಾರ
ಎಲ್ಲವನು ವರದಿಯಲಿ ಸಾದರಗೊಳಿಸಿ ಒಪ್ಪಿಸಿದ್ದೇವೆ.
ಕಾರ್ಯಕ್ರಮದ ಪಟ್ಟಿ ತುಂಬ ಭಾರವಾಗಿದ್ದರೂ
ಕೊನೆಗೆ ಆಭಾರಮನ್ನಣೆಯುಂಟು;
ಕೆಲವರಿಗಾದರೂ ಅಲ್ಪೋಪಹಾರದ ವ್ಯವಸ್ಥೆಯುಂಟು.

ನಿನಗೂ

ನಿನ್ನ ಪರಿವಾರಕ್ಕೂ

ಮತ್ತೊಮ್ಮೆ ಸುಸ್ವಾಗತ.

●

ವಿನೂತನ ಕವಿಯ ಕೈಫಿಯತ್ತು

"ಏನೋ ಚಂದ್ರ ಪೆಂಗೆ
ನಾಚ್ಕೆ ಇಲ್ವೆ ನಿಂಗೆ!"
ಹೀಗೆ ಸಿಕ್ಕಾಬಟ್ಟೆ ಬೆಳುದಿಂಗಳನು ಚೆಲ್ಲಿ
ಹಾಳು ಮಾಡಿ, ಹತ್ತೀಬಿತ್ತುವದು ಸರಿಯಲ್ಲ.
ಅದನೆಲ್ಲ ಸಂಗ್ರಹಿಸಿ, ಭಟ್ಟೀ ಇಳಿಸಿ, ಗೊಟ್ಟಾ ಹಾಕು!
ಅಜೀರ್ಣವಾಗಿ ಹೊಟ್ಟೆ ಝಾಡಿಸಿದರೂ ಚಿಂತೆಯಿಲ್ಲ
ನಾವು ಕುಡಿಯಲು ತಯಾರು.
ನಿನ್ನ ಬೆಳಕೇನೊ ತಂಪಾಗಿ, ಸೊಂಪಾಗಿ ಹಿತವಾಗಿರಬಹುದು
(ಹಾಗೆಂದು ಹೇಳುತ್ತಾರೆ ಮುಗ್ಧರು).
ಆದರೆ, ಮಟಮಟ ಮಧ್ಯಾಹ್ನದ ಸೂರ್ಯನಂತೆ
ನಮ್ಮ ಕಣ್ ಕುಕ್ಕಿಸಿಲ್ಲ;
ಒಮ್ಮೆಯಾದರೂ ತಲೆಯನಾಸ್ಫೋಟಿಸಿಲ್ಲ;
ಮೇಲಾಗಿ ನಿನ್ನಲ್ಲಿ ಬೆಳವಣಿಗೆಯೇ ಇಲ್ಲ.
(ಇದ್ದರೂ ಇರಬಹುದು ಒಂದು ಪಕ್ಷ)
ಬೆಳೆ, ಬೆಳೆದು ತಳ ವಿತಳ ಪಾತಾಳವನ್ನು ಕಾಲಾಡಿಸಿಲ್ಲ.
ನೋಡಿಲ್ಲಿ:ಎಷ್ಟು ಬೆಳೆಸಿದ್ದೇವೆ-
ನಮ್ಮ ತಲೆ.
(ಇಂದಿನ ಪರಿಸ್ಥಿತಿಯಲ್ಲಿ ಇದೇ ಶ್ರೇಷ್ಠ ಕಲೆ)
ಭಾವಕೋಶದ ಮಾತೇಕೆ?
ಅದಕೆ ಟಾಚಣಿ ಚುಚ್ಚಿ ಚುಚ್ಚಿ ಪಿನ್‌ಕುಶನ್ ಮಾಡಿ
ಎದೆಯ ಮೇಜಿನ ಮೂಲೆಯಲ್ಲಿ
ಇಟ್ಟಿದ್ದೇವೆ.
ನಿನ್ನ ಸುತ್ತಲೂ ಒಂದೇ ನಮೂನೆಯ, ಅದೇ
ಮಿಣಮಿಣಕು ಚಿಕ್ಕೆಗಳ ಥಕ್ಕಥೈ;
ವಿವಿಧ ಪ್ರತಿಮೆಗಳ ಬಾವುಟವನೆತ್ತಿ ಹಿಡಿದಿದೆ

ರಂಗುರಂಗಿನ ನಮ್ಮ ಬುಶ್‌ಕೋಟು ತೊಟ್ಟ ಮೈ.
ನೀ ತಯಾರಿಸಿದ್ದು ಸ್ಪೆಶಲ್ ಮಸಾಲೆ ದೋಸೆಯಲ್ಲ.
(ನಮ್ಮ ದೋಸೆಗೆ ಮಾತ್ರ ತೂತಿಲ್ಲ;
ಸಂಪ್ರದಾಯದ ಗಾದೆಮಾತಿಗೆ ನಾವು ಬೆಲೆ ಕೊಡುವುದಿಲ್ಲ)
ಅಥವಾ ಗಮಗಮಿಸುವ ಆಮ್ಲೆಟ್ ಅಲ್ಲ-
ಬರಿಯ ಕೆನೆಮೊಸರಿನ ಬಿಳಿಜೋಳದ ರೊಟ್ಟಿ.
(ಅದನ್ನು ತಿನ್ನಲು ಹಳ್ಳಿಯ ಮುಕ್ಕರೇ ಗಟ್ಟಿ.
ಹೊಸ ರುಚಿ ಬೆಳೆಸಿಕೊಂಡ ನಮಗೆ ಅದೆಲ್ಲ ಲೊಳಲೊಟ್ಟಿ.)

ಅಯ್ಯ, ಚಂದ್ರಾಮ ಚೆಲುವ
ತಿಂಗಳಿಗೊಮ್ಮೆ ಮೈ ತುಂಬಿಕೊಂಡು, ದುಂಡಾಗಿ
ಗಲ್ಲ ಉಬ್ಬಿಸಿಕೊಂಡು ಬಂದರೂ ನಾವೂ ನೋಡುವದಿಲ್ಲ.
(ನಮಗೆ ಹೊಟ್ಟೆಕಿಚ್ಚು.)
ಕದ ಹಾಕಿ, ಕಿಟಕಿ ಮುಚ್ಚಿ, ನಾವೆ ಹುಟ್ಟಿಸಿಕೊಂಡ ಚಿಂತೆಗಳ
ಕಂತೆ ಬಿಚ್ಚಿ ಹಾಯಾಗಿ ಮಲಗುತ್ತೇವೆ.
ಬೇಕಾದರೆ ನೂರು ಕ್ಯಾಂಡಲ್ ಬಲ್ಬು ಹಾಕಿ
ಗುಂಡಿಯೊತ್ತುತ್ತೇವೆ;
ಬಂದು ಬಡಿಯುವ ನೂರು ಪತಂಗಗಳ ಬಾಲ್ ಡಾನ್ಸು
ನೋಡಿ ಛಾನ್ಸು ಹೊಡೆಯುತ್ತೇವೆ.
ಕಾಜಿನ ಕಿಟಕಿಯಲ್ಲಿಣಿಕಿ ಮುಗುಳುನಕ್ಕರೆ ನೀನು
ಕರಿ ಪರದೆಯೆಳೆದು ಕೈ ತೊಳೆದುಕೊಳ್ಳುತ್ತೇವೆ.
ಆಕಾಶನೌಕೆಯ ಕಳಿಸಿ
ನಿನ್ನ ಷೋಡಶ ಕಲೆಗಳ ಛಾಯಾಚಿತ್ರ ತೆಗೆದು
ದೊಡ್ಡದು ಮಾಡಿ
ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸುತ್ತೇವೆ.
ಆಗಲಾದರು ನಿನ್ನ ಬಣ್ಣ ಹೊರಬೀಳುವದು
ಯುಗಯುಗಗಳಿಂದ ತಂಗುಳಾಗಿದೆ ನಿನ್ನ ಬೆಳುದಿಂಗಳು.

ಅವರಿವರು ಯಾತ ಹೊಡೆದು ತೋಟವ ಮಾಡಿ
ಹಣ್ಣು ಹಂಪಲು-ಹೂವು ಬೆಳೆದು ಕೊಟ್ಟಿರಬಹುದು.
ನಮ್ಮಂತೆ ಬದುಕಿನ ಬಾವಿಯಾಳಕ್ಕಿಳಿದು
ಜೊಂಡು ಪಾಚಿಯ ಕಂಡು ಉಂಡವರೆಷ್ಟು ಮಂದಿ?
ಆಕಾಶದಲ್ಲಿ ಮೇಲೆ ಮೇಲೆ ತೇಲುತ್ತಿರುವ ನೀನು
ನಮ್ಮ ಬಾವಿದಂಡೆಗೆ ಹಣಿಕಿ ಹಾಕಬೇಡ:
ಅನುಭವಕೆ ತೆಕ್ಕೆ ಬಡಿದು, ಗುದುಮುರಿಗೆ ಹಾಕಿ, ಕಬ್ಬಾಡಿ
ಕೆಸರು ರಾಡಿಯ ಹಿಡಿಸಿ, ತಳಕಿಳಿದು
ಮೇಲೆ ಗುಳ್ಳೆಗಳ ಬಿಡುವದಿದ್ದರೆ ಮಾತ್ರ ಬಾ.
ನಮಗೆ ಬೇಕಿಲ್ಲವೋ ಆ ದೂರಲೋಕದ ಅತೀಂದ್ರಿಯ ದೃಶ್ಯ-
ನಮಗೆ ಹಿತ: ಇಲ್ಲೆ ಈ ಬಾವಿಯ ತಲಸ್ಪರ್ಶ.
ಹೋಗು, ನಮ್ಮಂತೆ ಸದಾ ಅಸ್ವಸ್ಥನಾಗು
ಬೇನೆಯಿರದಿದ್ದರೂ ನರಳು:
(ಅದೇ ವಾಸ್ತವದ ಬಾಳು)
ಕೃಷ್ಣ ಪಕ್ಷದ ಕತ್ತಲಲಿ ಮುಳುಗು ತಲೆಕೆಳಗು.

ನಮ್ಮ ಕುದುರೆಗೆ ಕಣ್ಣು ಪಟ್ಟಿಯ ಬಿಗಿದು
ಹುಲ್ಲುಗಾವಲದ ಹಸುರು ಕನಸುಗಳನೆಲ್ಲ ಎಲ್ಲಿಯೋ ಹುಗಿದು
ನೋಡು: ಹೇಗೆ ಹೊರಟಿದ್ದೇವೆ: ಆಸ್ಪತ್ರೆಗೆ.
ಗ್ರಹಣ ಹಿಡಿದರೆ ಅದರಲ್ಲೆ ಒದ್ದಾಡುವದೆ ಒಳಿತು;
(ಇದು ನಮ್ಮ ಅನುಭವದ ಮಾತು)
ಹೊರಬಂದು ಬೆಳುದಿಂಗಳನು ಚೆಲ್ಲುವ ಗೋಜಿಗೆ ಮರ್ರ್ಯೋ ಹೋಗಬೇಡ
ಚಂದಪ್ಪ, ಎಂದೆಂದಿಗೂ ಚೆಲುವಿನ ಹೆಸರು ಎತ್ತಬೇಡ.

●

ಎಪ್ಪತ್ತರ ಬೇಂದ್ರೆ

ಕಣ್ಣು ಮಿಂಚಿಸಿ, ನೂರು ಹಂಚಿಕೆಯ ಸಂಚಿಕೆಯ
ತುಂಬಿ ತಲೆಯಾಡಿಸುತ, ಯಾವುದೋ ಒಳದನಿಗೆ
ನಾದ ಕೂಡಿಸಿ, ನೆಲಕೆ ನೀರು ಬರಿಸುವ ಹಾಗೆ
ಬೀಸುಗಾಳಿಯ ಜೊತೆಗೆ ಬಂದರದೊ ಬೇಂದ್ರೆ! ಕೈಯ
ಮಾಟಕೆ ಮಾತು ಮಾಂತ್ರಿಕನಾಟ: ಅರಗಳಿಗೆ-
ಹೊರ-ಒಳಗೆ ತುಂಬಿ ತುಳುಕುವ ಬೆಡಗು. ಕಡಲ ಗುಟು-
ಕರಿಸಿ, ಚಿಕ್ಕೆಗಳ ಮುಕ್ಕಳಿಸುವರು; ತಟ್ಟನೆ ಒಗಟು
ಒಡೆಯುವ ಒಡಪು-ನುಡಿ: ಕುಡಿಮಿಂಚು ಬಾನ ಗುಡಿಗೆ.
ಇಪ್ಪತ್ತೊ? ಎಪ್ಪತ್ತೊ? ಮುಪ್ಪತ್ತು ಮುಂದೆ ನಡೆ;
ಅಂಬಿಕಾತನಯನಿಗೆ ದತ್ತುಕೊಟ್ಟಂದು ಇವ-
ರೊಪ್ಪತ್ತು. ಜಗದಂಬೆ-ಹಡಲಿಗೆ ಹೊತ್ತು ಕುಣಿವ-
ಗೆಲ್ಲಿ ಪುರಸತ್ತು? ಹಣ್ಣಾದ ಕೇದಿಗೆಯ ಹೊಡೆ:
ಚೂಪಾದ ಗರಿ: ಹುಷಾರಿ; ಕಂಪಿಗೆಲ್ಲಿಯ ಕೊರತೆ?
ನಡೆದದ್ದೆ ಸಾಧನಕೇರಿ, ನುಡಿದದ್ದೆ ಕವಿತೆ.

●

ನಂಬಿಕೆ

ಅನಂತವೆಂದರೂ ಆಕಾಶಕೊಂದು ಆಕೃತಿಯುಂಟು.
ನೀಲವೆಂದರೂ ನೂರುಬಣ್ಣದ ಲೀಲೆಗವಕಾಶವುಂಟು.
ಭೂಮಿಯ ಮೇಲೆ ಕಾಲೂರಿ ನಡೆದಿದ್ದರೂ ಇದರ
ಸ್ತರಗಳ ನಡುವೆ ಸ್ಥಿರಗೊಂಡ ಒಡನಾಟ, ನಿರಂತರ ನಂಟು.
ಹಗಲೆಲ್ಲ ಹಸುರಾಗಿ, ತುಂಬು ಕೆಂಪಾಗಿ, ರೆಂಬೆ-
ಕೊಂಬೆಗಳೆಲ್ಲ ಸಂಜೆ ಬಾನಿನ ನಿರಾಳ ಮನದೊಳಚ್ಚೊತ್ತಿ
ಚಿತ್ತಾರವಾಗಿ, ಕಪ್ಪು ಮುಸುಕಿನ ಒಳಗೆ ಹುದುಗುವವು
ಇದ್ದು ಇಲ್ಲದ ಹಾಗೆ. ಇರುಳಿನಲಿ ಒಮ್ಮೆಲೇ ಚಿಗುರೊಡೆದು
ಅಂತರಂಗವ ಬಿಚ್ಚಿ ಬಯಲಿಗಿಡುವುದು ಬಾನು:
ಎಚ್ಚರಾಗದ ಹಾಗೆ ನೆಲದ ಮೈಸಡವಿ ಮುದ್ದಿಸುವುದು.
ಆಗ ಎಲ್ಲರಿಗೂ ನಿದ್ದೆ. ಬೆಳಗಿನ ಜಾವ ಯಾವುದೊ
ಕನಸು: ಬೆಳಗಾದಮೇಲೆ ಮರೆತು ನೆನೆಸುವುದು-
ತಿರುಗಾಡಿ ಬರುವಾಗ ಗೆಳೆಯರಿಗು ಹೇಳಿ ನಕ್ಕು
ನಗಿಸುವುದು; ಹೂ ಗಿಡಕೆ ನೀರು ಹಣಿಸುವುದು.

* * * * *

ಚಳಿಗಾಲದಲ್ಲಿ ಒಂದೊಂದೆ ಎಲೆಯುದುರಿ ನೆನಪು ಕಳಚು-
ತ್ತಿರುವಾಗ ಯಾರಿಗೂ ಕಾಣದ ಹಾಗೆ ಬೇರಿಂದ ರಸ ಹೀರಿ
ಚಿಗುರಿ ನಿಂತವರಾರು? ಬಿರುಗಾಳಿ ಬೀಸಿ ಆಕಾಶದುದ್ದ
ಧೂಳಡರಿ ದಿಕ್ಕು ತಪ್ಪಿಸಿ, ಮನೆಮನೆಯ ಕಿಡಕಿ ಬಾಗಿಲು
ಬಡಿದು ಪಟಪಟ ಹನಿಯುದುರಿದಾಗ ಯಾರು ನೆಲಕಿಳಿದು
ಬಂದವರು? ಮರುದಿನ ಬೇಲಿಗುಂಟ ಹೂವರಳಿದಾಗ ಯಾರು
ಕಿಲಕಿಲ ನಕ್ಕು ಹೋದವರು? ನಿರ್ಮಲವಾಗಿ ನಿಂತ ಮೋಡ
ಹೊಯ್ದಾಡಿ ಎಲ್ಲೊ ಇಳಿಯುವುದು-ಭೂಮಿ ಗುಟುಕರಿಸುವುದು
ಆಗೀಗ ಮಿಂಚಿ ಅಂತರಿಕ್ಷದಲೇನೊ ಹೊಳೆಯುವುದು:

* * * * *

ಯಾವುದೋ ಗಳಿಗೆಯಲಿ ಹಠಾತ್ತನೆ ಒಳಗೆ ಅನಿಸುವ-
ದೊಂದು; ಬೆಟ್ಟದ ಮುಡಿಯ ಕಲ್ಲು ಬಂಡೆಯಲಿ ಚಿಲ್ಲನೆ ಬುಗ್ಗೆ
ಚಿಮ್ಮಿ ಮುಂದೆ ಹರಿದದ್ದೆಲ್ಲೋ. ಹಗಲಿರುಳು ಜಾರುವವು
ದಿನದಿನವು ನನ್ನೊಳಗಿಂದ ಏನೊ ಹೀರುವವು: ಮತ್ತೆಲ್ಲೊ
ತಿರುಗಿ, ಪತ್ತೆಯಿಲ್ಲದ ಹಾಗೆ ಜೇನಿಟ್ಟು 'ಬಿಡಿಸಿಕೊ' ಎಂದು
ದುಡಿಸುವವು. ಜೇಂಗೊಡವ ಕಂಡು ಅಚ್ಚರಿಗೊಂಡರೂ
ಅವಸರಪಡುವ ಹಾಗಿಲ್ಲ; ದಾಹ ತೀರಿಸಲು ನೀರಲ್ಲ,
ಮತ್ತು ಬರಿಸುವ ಮದ್ಯವಲ್ಲ. ಅಂಗೈಯಲ್ಲಿ ಹನಿಹನಿ
ಹಾಕಿ, ನೆಕ್ಕಿ ನಾಲಗೆ ತುಂಬ ಸವಿದು, ಕಣ್ಮುಚ್ಚಿ
ತೆರೆಯಬೇಕು.

* * * * *

ನನ್ನ ನಂಬಿಕೆಯೊಂದು ಆಕಾಶ:
ನಿಜ, ಅದಕೆ ತಳಬುಡವಿಲ್ಲ, ನಾನೆಷ್ಟು ಬೆಳೆದರೂ
ನನಗೆ ನಿಲುಕುವುದಿಲ್ಲ ದೂರದಿಂದಲ್ಲದೆ ನಾನದನು
ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
ನಡೆದರೂ ಅದು ಸದಾ ನನ್ನ ತಲೆಯ ಮೇಲೆ.
ಹಗಲುಹೊತ್ತಿನಲಿ ಅದರೆಡೆಗೆ ಲಕ್ಷ್ಯವಿಲ್ಲ. ನಮ್ಮ ಬದುಕಿನಲಿ
ನಾವು ಮಗ್ನರಾದರೆ ಸಾಕು, ಅದಕೆ ಚಿಂತೆಯಿಲ್ಲ.
ರಾತ್ರಿ ವಿದ್ಯುದ್ದೀಪ ಕೈಕೊಟ್ಟು, ಮಿಣಿಮಿಣಿ ಮೇಣ-
ಬತ್ತಿಯ ಹಚ್ಚಿ, ಅಂಜಿ ಆಕಳಿಸುತ್ತ ಕುಳಿತಾಗಲೂ
ಆಕಾಶದಲ್ಲಿ ಹೊಳೆವ ನಕ್ಷತ್ರಕ್ಕೆ ಲೆಕ್ಕವಿಲ್ಲ.

●

ಗಾಂಧಿ

೧

ಇರುವ ನೀರೆಲ್ಲ ಸುರಿದು
ಹಸಿದ ನೆಲ ಹಸುರಾಗಿ ಕಳಕಳಸಿ
ಬಾನು ಥಳಥಳಿಸಿರಲು-
ಬೆಳ್ಳಗೆ ಮೇಲೆ ಹೊರಟಿತ್ತು ಮಂದಹಾಸದ ಮೋಡ:
ಗಾಂಧಿ ನೋಡ,
ಮಹಡಿಮನೆ, ಗುಡಿಸಲು
ಪಡುಭೂಮಿ, ಹೊಲ-ಗದ್ದೆ, ಸುಡುಗಾಡ ಸುತ್ತಲು
ಒಂದೆ ಸಮ
ಮೋಡದೊಡಲ ಕರುಣಾವೃಷ್ಟಿ,
ಕತ್ತಲೆ-ಎದೆಗೆ ಜಗ್ಗನೆ ಬೆಳಕ ಹೊತ್ತಿಸುವ ಮಿಂಚುದೃಷ್ಟಿ-
ಗುಡುಗಿಗಿಂತಲು ಘೋರ ಮೌನ.
ನೀಲದಲಿ ಪ್ರಾರ್ಥನೆಯ ಮೂಲ ತಾನ-ವಿತಾನ
ಮಳೆಗೆ ಮೈದೊಳೆದು ಎದೆಯನರಳಿಸುವ
ಸೃಷ್ಟಿ-ಸಂತುಷ್ಟಿ.

೨

ಬೆಳಗಾಗುವುದೆ ತಡ, ಹೊರಟದ್ದೆ ಪ್ರಭಾತಫೇರಿ-
ಯುಗಯುಗದ ಭಾರದಲಿ ಸುಂದು ಹಿಡಿದು ಮಲಗಿ
ಮುಲುಗಿರುವ ಕಿವಿ-ಗವಿಗಳಲಿ ಹೊಡೆದನು ನಗಾರಿ.
ನರನರವೂ ಹೊಸ ನೆತ್ತರಿನ ತುತ್ತೂರಿ.
ಕ್ಷಿತಿಜದಾಚೆಯ ಯಾವ ಪ್ರೇರಣೆಗೊ ಹೊರಹೊಮ್ಮಿರುವ
ಹೊಂಗಿರಣಗಳ ಕಸಬರಿಗೆ ಹಿಡಿದು
ಉಡುಗಿದ್ದೆ ಉಡುಗಿದ್ದು
ಸಂದಿ-ಗೊಂದಿ, ಗಟಾರು, ಊರು, ಹೊಲಗೇರಿ,

ಮರಳಿದ್ದು ಯಾವ ಸಂಜೆಗೊ-
ಮತ್ತೆ ಕರೆದಿತ್ತು ನೂರು ದಾರಿ.
ಎಡ-ಬಲಕೆ ಮಂದಿ-ಮಕ್ಕಳು
ಹಿಂದೆ ನೆರಳಿನಲಿ ಹೆಜ್ಜೆಯ ಹಿಂದೆ ಹೊಸ ಒಕ್ಕಲು,
'ನಕ್ಕಳಾ ತಾಯಿ',
ಮೈದುಂಬಿ ತುಂಬುಹೊಳೆ ದಾಟಲು
ನಂಬಿಗೆಯ ಗುಡಿಸಲ ಕಣ್ಣ ಕಂಬನಿಯನೊರಸಲು
ಮೂಕತಂತಿಯ ನಾದ ಹಿಡಿದು.
ಗಡಬಡಿಸಿ ಹೊರಟ ದುಡುದುಡು ನಡಿಗೆ.
(ಕೈಯಲ್ಲಿ ಭದ್ರವಿದೆ ಸತ್ಯಾಗ್ರಹದ ಬಡಿಗೆ.)
ತನ್ನ ಉಪವಾಸದಗ್ನಿ ಕುಂಡದಲಿ ಕರಗಿ ಮಿರುಗಿಸಿದ
ಕೋಟಿಕೋಟಿ ಜನದೆದೆಯ ಕಲ್ಮಷ-ಬಗೆ.
ಹೆಡಮುರಿಗೆ ಬಿಗಿದ ಹಾವ ಕೊಲ್ಲದೆ, ವಿಷವ ಕಕ್ಕಿಸಿ
ಹುತ್ತ ಸೇರಿಸಿದ ಗಾರುಡಿಗ.
ನಿತ್ಯಚಕ್ರದಖಂಡ ಸತ್ಯ ಸ್ನೇಹದ ನೂಲ
ತೆಗೆದು ಸುತ್ತಿದನು ಖಂಡ ಖಂಡ.
ಎಂಥ ಬಿರುಗಾಳಿಯಲು
ಮಾತು-ಕೃತಿಗಳ ಪರಡಿ ಏರು-ಪೇರಾಗದೊಲು
ಹಿಡಿದ ಸಮತೂಕ.
'ನಾ', 'ನೀ' ಎಂಬ ಘಟಾನುಘಟಿಗಳನೆಲ್ಲ ಹಿಡಿದು ಪುಟವಿಕ್ಕಿ, ತಿಕ್ಕಿ
ಹೂಡಿದನು ತಾಯ ರಥಕೆ-
ಪಾದಗಟ್ಟೆಗೆ ತಂದು ನಿಲ್ಲಿಸಿದ, ಸಲ್ಲಿಸಿದ ತನ್ನನೇ ನೈವೇದ್ಯಕೆ.
ಜಗದ ಸೇವೆಯ ಸಾಣೆಕಲ್ಲಿನಲಿ ತಿರುತಿರುಗಿ ತೆಯ್ದು
ಗಂಧವಾದನು ಅವರ ಹಣೆಗೆ.
ಆಗದಿದ್ದರೂ ಕಾಲಕಾಲಕ್ಕೆ ಮಳೆ
ಬಾರದಿದ್ದರೂ ಬೆಳೆ
ಬೆವರು ಸುರಿಸುತ ಜೀವಸತ್ತ್ವವಾದನು ಕಪ್ಪು ನೆಲದಲ್ಲಿ
ನಿಂತಿರುವ ತೆನೆಯ ಧ್ವಜಕೆ

೩

ಯಾರು ಹೇಳಿದರು ನಾವೆಲ್ಲ ನಿನ್ನ ಮರೆತೆವೆಂದು?
ಹಗಲೆಲ್ಲ ಕಟಕಟಿ ಬೇಡವೆಂದು
ಕಟೆದು ನಿಲಿಸಿದ್ದೇವೆ
ಕೂಟುಕೂಟಿನಲಿ ನಿನ್ನ ನಗುವ ಮೂರ್ತಿ:
ಕಂಡು ಕಾಣದ ಹಾಗೆ ದಾಟಿ ಹೋಗುತ್ತೇವೆ-
ಮರುಗುವುದು ಒಳಗೊಳಗೆ
ಪಾರದರ್ಶಕದಂಥ ನಿನ್ನ ಅಂತಃಕರಣ;
ಕಾಡಿಗೆ ಬಳಿದ ಕಾಜಿನಲಿ ಮಾತ್ರ ಕಾಣುವುದು
ನಮಗೀಗ ಹಿಡಿದ ಗ್ರಹಣ.
ನೀನಿಂದು ಬದುಕಿದ್ದರೊಂದು ವೇಳೆ
ಗರತಿಯಾಗಬಹುದಿತ್ತೇನೊ ರಾಜಕಾರಣದ ಸೂಳೆ.
ಸತ್ಯಕ್ಕೆ ತಲೆ ತೆಗೆದು ನಿಂತವ ನೀನು
ನಿನಗೆ ಟೊಪ್ಪಿಗೆ ಹಾಕುವ ಧೈರ್ಯ ಯಾರಿಗಿತ್ತು?
ಕರುಣೆಯೋ, ಕನಿಕರವೋ, ಕ್ಷಮೆಯೊ
ನೀನು ನಗುತ್ತಲೇ ಇರುವಿ:
ಅಂತೆಯೇ
ದಿನವೂ ನಮಗೆ ಬೈಗು-ಬೆಳಗುಂಟು,
ಇರುಳ ಬಾನಿನ ತುಂಬ ನೀನೊಬ್ಬನೇ ಕೋಲೂರಿ ನಡೆದಂತೆ
ಚಿಕ್ಕೆಗಳ ಗುರುತುಂಟು.
ಬರಗಾಲದಲ್ಲಿಯೂ ಗುಟುಕು ಗಂಜಿಯುಂಟು;
ನಮ್ಮೊಳಗೆ ನಾವು ಗುರುಗುಟ್ಟಿದರೂ
ನೆಲವ ಕಾಯುವ ನಿಷ್ಠೆಯುಂಟು:
ಉಂಟು; ಉಂಟು;
ನಾವೆಲ್ಲ ಪೂಜೆಯ ಗಂಟು.
ಆದರೂ
ನಿನ್ನ ಹೆಸರಿನಂಕಿಯ ಮುಂದೆ ನಮಗೂ ಒಂದು ಬೆಲೆಯುಂಟು.

ವಿಶ್ವಭಾರತಿಗೆ ಕನ್ನಡದಾರತಿ

ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯಸಂಸ್ಕಾರಿ
ಜಯ ಭಾರತಿ, ಕರುನಾಡ ಸರಸ್ವತಿ
ಗುಡಿಗೋಪುರ ಸುರಶಿಲ್ಪಕಲಾಕೃತಿ
ಕೃಷ್ಣೆ, ತುಂಗೆ, ಕಾವೇರಿ ಪವಿತ್ರಿತ ಕ್ಷೇತ್ರ ಮನೋಹಾರಿ
ವಿಶ್ವವಿನೂತನ....॥೧॥

ಗಂಗ ಕದಂಬಾ ರಾಷ್ಟ್ರಕೂಟಬಲ
ಚಲುಕ್ಯ, ಹೊಯ್ಸಳ, ಬಲ್ಲಾಳ
ಹಕ್ಕ-ಬುಕ್ಕ, ಪುಲಕೇಶಿ ವಿಕ್ರಮರ, ಚೆನ್ನಮ್ಮಾಜಿಯ ವೀರಶ್ರೀ
ವಿಶ್ವವಿನೂತನ....॥೨॥

ಆಚಾರ್ಯತ್ರಯ ಮತ ಸಂಸ್ಥಾಪನ
ಬಸವಾಲ್ಲಮ ಅನುಭಾವ ನಿಕೇತನ
ಶರಣ-ದಾಸ-ತೀರ್ಥಂಕರ ನಡೆ-ನುಡಿ ವಿಶ್ವತಮೋಹಾರಿ
ವಿಶ್ವವಿನೂತನ....॥೩॥

ಪಂಪ, ರನ್ನ, ನೃಪತುಂಗ, ಹರೀಶ್ವರ
ರಾಘವಾಂಕ, ಸರ್ವಜ್ಞ, ಪುರಂದರ
ಕುಮಾರವ್ಯಾಸ, ರತ್ನಾಕರ, ಜನಪದ ಕಾವ್ಯ ಸಮುದ್ರವಿಹಾರಿ
ವಿಶ್ವವಿನೂತನ....॥೪॥

ಸಾಯಣ, ವಿದ್ಯಾರಣ್ಯ, ಭಾಸ್ಕರ
ಮಹಾದೇವಿ, ಮುಕ್ತಾಯಿ, ಮಹಂತರ
ಕಂತಿ-ಹಂಪ, ಸುಮನೋರಮೆ-ಮುದ್ದಣ; ಸರಸಹೃದಯ ಸಂಚಾರಿ
ವಿಶ್ವವಿನೂತನ....॥೫॥

ತ್ಯಾಗ-ಭೋಗ-ಸಮಯೋಗದ ದೃಷ್ಟಿ
ಬೆಳುವೊಲ, ಮಲೆ, ಕರೆ, ಸುಂದರ ಸೃಷ್ಟಿ
ಜ್ಞಾನದ, ವಿಜ್ಞಾನದ, ಕಲೆಯೈಸಿರಿ ಸಾರೋದಯ ಧಾರಾನಗರಿ
ವಿಶ್ವವಿನೂತನ....॥೬॥

ಅರಿವೇ ಗುರು, ನುಡಿ ಜ್ಯೋತಿರ್ಲಿಂಗ,
ದಯವೇ ಧರ್ಮದ ಮೂಲತರಂಗ;
ವಿಶ್ವಭಾರತಿಗೆ ಕನ್ನಡದಾರತಿ! ಮೊಳಗಲಿ ಮಂಗಲ ಜಯಭೇರಿ!
ವಿಶ್ವವಿನೂತನ....॥೭॥

•

ನೀಲಾಂಬಿಕೆ

೧

ಸದುವಿನಯದ ತುಂಬಿದ ಕೊಡ
ತಂದಳು ನೀಲಾಂಬಿಕೆ,
ಕಲ್ಯಾಣದ ಅಂಗಳದಲಿ
ತಳಿ ಹೊಡೆದಳು ಛಂದಕೆ.
ಸಮಚಿತ್ತದ ರಂಗೋಲಿಯು
ಒಳ-ಹೊರಗೂ ಧೂಪವು.
ಹಾದಾಡುವ ಹೊಸತಿಲಲ್ಲಿ
ಹೊಯ್ದಾಡದ ದೀಪವು.

೨

ಮಹಾಮನೆಯ ಮಹಾತಾಯಿ
ಮಾಸದ ಮಡಿ ಹಾಸಲು,
ದಾಸೋಹಕೆ ಮೀಸಲಾದ
ತೃಪ್ತಿಯ ನಗೆ ಸೂಸಲು,
ಎಲ್ಲೆಲ್ಲಿಯ ಗಣ ತಿಂಥಿಣಿ
ತಣಿದು ಹಾಡಿ ಹರಸಲು
ಭಕ್ತಿಯ ಭಂಡಾರ ತುಂಬಿ
ಹರಡಿತು ಬೆಳುದಿಂಗಳು

೩

ಅಯ್ಯನ ಕೈ ನೋವುದೆನಲು
ಆಭರಣವ ಕೊಟ್ಟಳು-
ಅನುಭಾವದ ಅಲಂಕಾರ
ಆಚರಣೆಯ ತೊಟ್ಟಳು.

ನೆರಳಾದಳು ಬಸವಣ್ಣನ
ಹರಳಾದಳು ಬೆರಳಿಗೆ,
ಅರಳಾದಳು ಲಿಂಗದಲ್ಲಿ
ಪರಿಮಳಿಸುತ ಪೂಜೆಗೆ.

೪

ಏನು ನೋವೊ ಹೇಳಲಿಲ್ಲ
ಕೇಳಲಿಲ್ಲ ಮಡದಿಗೆ,
ಹಾಗೆ ಹೊರಟು ಹೋದರಣ್ಣ
ಕಲ್ಯಾಣದ ಹುಡದಿಗೆ.
ಕೂಡಲದಲಿ ನೀರು ಹರಿದು
ತಿಳಿಗೊಂಡಿತು ಬನ್ನಿರಿ-
ನೀಲಾಂಬಿಕೆ ನೆನಪಾದಳು
ಬೇಗನೆ ಕರೆತನ್ನಿರಿ.

೫

ಕರಸ್ಥಲದಿ ಬಸವ ರೂಪು
ಪರಿಣಾಮವ ಮೀರಿಸಿ,
ಬಸವಯ್ಯನು ಮಾಡಿದಾಟ
ಲಿಂಗದೆಡೆಗೆ ತೋರಿಸಿ,
ಅಲ್ಲಿ ಇಲ್ಲಿ ಉಭಯವಳಿದು
ಅಂಗೈಯಲಿ ಸಂಗಮ
ಅಲ್ಲಿದ್ದರು, ಇಲ್ಲಿಲ್ಲವೆ?
ಜಗದ ಜೀವ ಜಂಗಮ.

೬

ನೀಲಾಂಬೆಯ ನಿಲುವಿನಲ್ಲಿ
ಮಹಾಲಿಂಗ ಹೊಳೆಯಲು
ಬಸವಣ್ಣನ ಭಕ್ತಿಕಲಶ
ಸಂಗಮನಡಿ ತೊಳೆಯಲು-
ಗಾಳಿಯಲ್ಲಿ ಗಾಳಿಯಾಗಿ
ಮಹಾಬೆಳಗು ಸಂದಿತು:
ಪ್ರಾಣಲಿಂಗದಲ್ಲಿ ಕರಗಿ
ನೀಲಾಂಬರ ಮಿಂಚಿತು

•

ಗುಬ್ಬಿ

ಗೋಡೆಗೆ ತೂಗು ಹಾಕಿದ ಫೋಟೋದ ಹಿಂದೆ
ಗುಬ್ಬಿ ಗೂಡು ಕಟ್ಟಿದೆ.
ಹುಲ್ಲು, ಹತ್ತಿಯ ಚೂರು, ದಾರ ಮೆತ್ತಗೆ ಒಟ್ಟಿದೆ.
ಈ ಪುಕ್ಕಲು ಪ್ರಾಣಿಯ ಧೈರ್ಯಕ್ಕೆ
ಬರೀ ಎರಡು ರೆಕ್ಕೆ.
ಅಡಿಗೆಯ ಮನೆಗೂ ಬಂದು ಕುಟುಕುತ್ತದೆ
ಅನ್ನದ ಅಗಳು-
ಬರ್‍ರನೆ ಹೊರಗೆ ಹಾರಿ, ಆರಿಸಿ ಹುಲ್ಲಿನ ಹುಳು.
(ಈ ಶಾಕಾಹಾರಿ)
ಸರ್‍ರನೆ ಬರುತ್ತದೆ ಮರಳಿ, ಮರ-ಮರಳಿ.
ಕಿಟಕಿಯ ಸರಳಿಗೆ ಕುಳಿತು, ಚಕಮಕ ಹೊರಳಿ
ತೂರಿಬಂದು, ಚಿಂವ್ ಚಿಂವ್ ಮರಿಗೆ ಗುಟುಕಿಟ್ಟು
ಹಾರಿ ಹೋಗುತ್ತದೆ. ಹೀಗೆ ಎಷ್ಟೋ ಬಾರಿ.

ಗುಬ್ಬಿಯ ಪುಟ್ಟ ಆಕೃತಿ
ಮರೆಯಾಗಿ,
ತಾಯಿಯ ವಿಶಾಲ ಹೃದಯದಲ್ಲಿ
ಕರಗಿ
ಹೋಗುತ್ತೇನೆ ನಾನು ಜೀವಂತವಾಗಿ.

ಸರ್ವಜ್ಞ ಕವಿ

ಮುಚ್ಚಿಟ್ಟು ಮುಗ್ಗುನಾರುವ ಒಳಬಾಳ ಬಿಚ್ಚಿ
ಬಿಸಿಲಿಗೆ, ಹಂಗು-ಹಾತೆಗಳ ಕೊಡವಿ, ಬರಿನೆತ್ತಿ
ಹೊರಟ ಜಗದಿ ಸ್ವತಂತ್ರ. ಸಂದಿ-ಗೊಂದಿಯ ಸುತ್ತಿ
ಹೊಲಸು-ಕೊಳೆ-ಕಸಕೆ ಬೆಂಕಿ ಹಚ್ಚಿ, ಒಳಿತನು ಮೆಚ್ಚಿ
ತಲೆಯ ಮೇಲಿಟ್ಟ. ಡಾಂಭಿಕರನೆತ್ತೆತ್ತಿ ಒಗೆದ.
ನಕ್ಕು ನಗಿಸಿದ ಸ್ವರ್ಗಕ್ಕೆ ಕಿಚ್ಚು ಹಚ್ಚುವುದ
ಕಲಿಸಿ. ಕೆಟ್ಟ ರಕ್ತದ ಕುರುವೊಡೆದು ಲೇಪಿಸಿದ
ಗಂಧ. ತನಗು ಜಗಕೂ ನಡುವೆ ತಕ್ಕ ತ್ರಿಪದಿಯ
ಬಂಧಃ ಬದುಕು ಬಂಗಾರಕ್ಕೆ ಒರೆ ಹಚ್ಚಿದ.
ಮನೆಯಿಲ್ಲ, ಮಠವಿಲ್ಲಃ ಊರೆಲ್ಲ ನೆಂಟರು.
ಎಲ್ಲಿ, ಯಾರಿವನ ಕಣ್ಣು ತಪ್ಪಿಸಿದ ಬಂಟರು?
ಬಳ್ಳಿಗುರುಡರಿಗೊಳ್ಳೆ ಗುರುವಾಗಿ ಕೈ ಹಿಡಿದ.
ಋಷಿಯಲ್ಲ? ಋಜುಬಾಳ ಋಷಿ. ನಿಜವ ಪರಿಭಾವಿಸಿ
ಇವನ ಕನ್ನಡಿಯಿರದೆ ನಮ್ಮ ಮುಖವೆಲ್ಲ ಮಸಿ.

ಯಾರು ಕೇಳುತ್ತಾರೆ, ಹೇಳಿರಣ್ಣ

ಅಲ್ಲಿ ಮುಳುಗುತ್ತಾರೆ, ಇಲ್ಲಿ ಏಳುತ್ತಾರೆ
ಎದ್ದು ಮೆರೆಯುತ್ತಾರೆ, ಹದ್ದು ಮೀರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಕದ್ದು ಕೇಳುತ್ತಾರೆ, ಸುದ್ದಿ ಮಾಡುತ್ತಾರೆ.
ಗುದ್ದಿ ನೋಡುತ್ತಾರೆ, ಒದ್ದು ಓಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಹೊರಗೆ ಮೆಚ್ಚುತ್ತಾರೆ, ಒಳಗೆ ಚುಚ್ಚುತ್ತಾರೆ
ಮರೆಗೆ ಕಚ್ಚುತ್ತಾರೆ, ತೆರೆಗೆ ಬಿಚ್ಚುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ತಲೆಯ ಕೆರೆಯುತ್ತಾರೆ, ಕಲೆಯ ಕೊರೆಯುತ್ತಾರೆ
ನೆಲವ ಮರೆಯುತ್ತಾರೆ, ಬೆಲೆಗೆ ಮೆರೆಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಬಲೆಯ ಬೀಸುತ್ತಾರೆ, ಬುಟ್ಟಿಗೆಸೆಯುತ್ತಾರೆ
ಇಟ್ಟು ಕೊಳಿಸುತ್ತಾರೆ, ಹೊಟ್ಟೆ ಬೆಳೆಸುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಮೇಜು ಗುದ್ದುತ್ತಾರೆ, ಮೈಕು ಮುರಿಯುತ್ತಾರೆ
ಮಾಲೆ ಬೇಡುತ್ತಾರೆ, ಮೋಜು ಮಾಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಘಂಡು ಎತ್ತುತ್ತಾರೆ, ಎತ್ತಿ ಹಾಕುತ್ತಾರೆ
ಬಂಡು ಹೂಡುತ್ತಾರೆ, ಬೆಂಡು ಸುಲಿಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಕೈಯ ಮುಗಿಯುತ್ತಾರೆ, ಕಾಲು ಕೆದರುತ್ತಾರೆ.
ಬಾಲಹಿಡಿಯುತ್ತಾರೆ, ಮೇಲೆ ಏರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಬಾಯಿ ಬಡಿಯುತ್ತಾರೆ, ಕಾಯಿ ಒಡೆಯುತ್ತಾರೆ
ಮರ್ಜಿ ಹಿಡಿಯುತ್ತಾರೆ, ಕುರ್ಚಿ ಪಡೆಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ರೈಲು ತಡೆಯುತ್ತಾರೆ, ದೀಪ ಒಡೆಯುತ್ತಾರೆ
ಕಲ್ಲು ತೂರುತ್ತಾರೆ, ಸುಳ್ಳು ದೂರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

ಹೊತ್ತು ಹೊರೆವವರಿಲ್ಲ, ಕಿತ್ತು ತಿಂಬವರೆಲ್ಲ
ಬಿತ್ತಿ ಬೆಳೆದವರಿಗೂ ತುತ್ತು ಭರವಸೆಯಿಲ್ಲ
ಎತ್ತ ಹೊರಳಿದರದೇ ನೋಟವಣ್ಣ.

ಹೇಳುವವರೇ ಎಲ್ಲ, ಕೇಳುವವರೇ ಇಲ್ಲ
ಹೇಳಿ ಕೇಳೀ ಬಾಳ ಏಕತಾರಿಯ ಪದವ
ಯಾರು ಕೇಳುತ್ತಾರೆ ಹೇಳಿರಣ್ಣ.

•

ಬರೆಯಲೊಲ್ಲದ ಕವಿತೆ

ಪುನರ್ವಸು, ಪುಷ್ಯ
ಮಳೆಗರೆದಾಗ ಈ ಮನುಷ್ಯ
ಹೊರಬಂದ. ಗುದ್ದಲಿ, ಸಲಿಕೆ, ಪಿಕಾಶಿ
ಬಳಸಿ ಅಗೆದಗೆದು, ಬಳಿದು ಕೈಯಾಡಿಸಿದ.
ಮಣ್ಣು ಘಮಘಮಿಸಿತ್ತು; ಗೊಬ್ಬರ ಹಾಕಿ
ಹದಗೊಳಿಸಿದ. ಗರಿಕೆಯ ತಳಬೇರು ಮಾತ್ರ
ಸಿಗಲಿಲ್ಲ; ಕೈಗೆ ಸಿಕ್ಕಷ್ಟೆ ಜಗ್ಗಿ ಕಿತ್ತೊಗೆದ.
ಬೇರಿನ ವಾಸನೆಗೆ ಬೇರೇನೊ ನೆನೆದು ನಕ್ಕ.

ಮುಗಿಲ ಬೆಳಕಿನ ಬೀಜ ಮರಳಾಗಿ ನೆಲವ ತಬ್ಬಿತ್ತು.
ಗಾಳಿ ಜೋಕಾಲಿಯಾಡಿ ತೂಕ ಹಿಡಿದಿತ್ತು.
ಸುಖದ ಸಂವೇದನೆಯಲ್ಲಿ ಮಣ್ಣ ಬೀಜ ಮೊಳೆದೋರಿತ್ತು.
ಹೊಳೆದಿತ್ತು ಅಪೂರ್ವ ಚೆಲುವಿನಲಿ ಬಯಲು.
ಯಾವುದೋ ಲಯದ ಗತ್ತಿನಲಿ ಜೀವ ಮಿಡಿದಿತ್ತು....

ದಿನಕೊಂದು ಚಂದ; ಅಮೂರ್ತಕ್ಕೆ ಮೂರ್ತತೆಯ ಬಂಧ
ಬಗೆಬಗೆಯ ಸಸಿ ಬೆಳೆದು ಪಲ್ಲವಿಸಿ ನಿಲ್ಲುವಾಮೋದ.
ಆಶ್ಲೇಷಾ, ಮಘಾ ಮಳೆಗಳ ಓಘ-ಮೊಗೆಮೊಗೆದು
ನೋಡನೋಡುತ್ತ ಹಸುರು ಹರಯಕ್ಕೆ ಬಂದಿತು ಪೂರ.
ತೊಳೆದು ಹೋಗಿತ್ತು ಕೇಡಿಯ ರೋಗ.

ಒಂದು ಬೆಳಿಗ್ಗೆ ಕಂಡವು ಮೊಗ್ಗೆ: ಸಮಸ್ತ ಪ್ರಪಂಚದ ಹಿಗ್ಗು
ಅಗ್ಗಲಿಸಿತ್ತು ಕಣ್ಣ. ಈ ಬಣ್ಣ ಇವಕೆ ಹೇಳಿ ಮಾಡಿಸಿದಂತೆ.
ಸೂರ್ಯಕಾಂತಿಯ ಸುವರ್ಣಮುಖ ಹೊರಳಿ ಪೂರ್ವಕ್ಕೆ
ದೃಷ್ಟಿ ನಿಲಿಸಿತ್ತು. ದಾಹ್‌ಲಿಯಾ ಯಾವ ದಿಕ್ಕಿಗು ಸರಿಯೆ

ಇಷ್ಟಗಲ ಸಂತುಷ್ಟಿ. ಗುಲಾಬಿಯ ಕಪೋಲಕ್ಕೆ ಮುತ್ತು,
ಸಂಪಿಗೆಯ ಮೂಗಿನಲಿ ನತ್ತು. ಕಂಪು ಗಾಳಿಗೆ ಹೀಗೆ
ಮೆಲ್ಲಗೆ ಜಂಪು. ಚೆಂಡು ಹೂಗಳ ದಂಡೆ ಗೌರಿ ಹುಣ್ಣಿಮೆ-
ವರೆಗು. ಹಾಳೆಯ ಮೇಲೆ ವಿಧವಿಧ ಬಣ್ಣ ಸಿಂಪಡಿಸಿದಂತೆ
ಪ್ಲಾಸ್ಕ್ ಹೂಗಳ ಭಂಗಿ-ಭಣಿತೆ. ಭಲಾ ಬೇಲಿಯನೆಲ್ಲ
ತಬ್ಬಿ ಹಬ್ಬಿರುವ ಬೋಗನ್‌ವಿಲಾ! ಸಾಮಾನ್ಯವಲ್ಲ ಮುಳ್ಳಿನ
ಹಿಡಿತ. ಮೌನವಾಗಿಯೇ ನಗುವ ಜೀನಿಯಾ-ಬಾಡದು ಬೇಗ:
ತುಂಬಿ ಕಾಡದು. ನೂರು-ಸಾವಿರ ಕಾಸ್ಮಸ್ ಕುಸುಮಗಳ
ಒಲೆತ ಅತ್ತಿಂದಿತ್ತ, ಇತ್ತಿಂದತ್ತ. ಹಿಂಡು ಚಿಟ್ಟೆಗಳ
ಕಾಲು ಕಟ್ಟಿದ ಹಾಗೆ ಚಂಚಲ ಚಿತ್ತ. ಅಂತಃಕರಣ
ಕುಡಿ ಚಾಚಿ, ಹಿಡಿ ಹಿಡಿ ಹೂವ ಕೊಡುವ ಮಲ್ಲಿಗೆಗೆ
ಒಲ್ಲೆನ್ನದು ಮನಸು. ಬೆಳುಗಾಲದ ಬಿಸಿಲಿನಲ್ಲಿ
ಬೆಳ್ಳಿ-ಬಂಗಾರವನು ಸೂರೆಗೊಳಿಸುವ ಸೇವಂತಿಗೆಗೆ
ಸಂತಸ ಸುಗ್ಗಿ. ಈಸು ದಿನ ಎಲ್ಲಿದ್ದವೊ ಪಾತರಗಿತ್ತಿ
ಜಾತ್ರೆಗೆ ಬಂದಂತೆ ಮುತ್ತಿವೆ ಈ ಮಾನವಮಿಯ ಹೊತ್ತಿಗೆ.
ಉತ್ತರಿಯ ಬಿಸಿಲಿಗೆ ತಗ್ಗಿದ ಹೂಮೊಗವನೆತ್ತಿ ಮುತ್ತಿಡಲು
ಶರದೃತು: ವಿಜಯದಶಮಿಗೆ ಸುಗಂಧದ ಸೀಮೋಲ್ಲಂಘನ.
ಉರಿಯಿರದ, ನೆಲದ ಸಾರವ ಹೀರಿ ಬಣ್ಣದೈಸಿರಿ ತಳೆದ
ಪರಿಮಳದ ಹೂವ ಹಣತೆಯಲಿ ಬೆಳಗುವವು
ಲೌಕಿಕ ಜಿನಾಗಮಗಳೆರಡೂ.

ಇಂಥ ತಂಪು ಹೊತ್ತಿನಲಿ ಮಾನ್ಯ ಸಂಪಾದಕರೆ,
ಕವಿತೆ ಏತಕೆ ಬೇಕು ಹೇಳಿ. ಗೌರವಧನದ ಚೌರಿ ಬೀಸಿ
ಮುಂಗಡ ಚೆಕ್ಕು ಕಳಿಸಿ ಪೀಡಿಸಬೇಡಿ. ಬಾಡಿರುವ
ಹೂಗಳ ತೆಗೆದು, ಒಣಗಿದೆಲೆಗಳ ಗುಡಿಸಿ, ಅಲ್ಲಲ್ಲಿ
ಅಸ್ತಿತ್ವಕ್ಕೆ ಧಕ್ಕೆಬಾರದ ಹಾಗೆ ಬೆಳೆದ ಕಸ-ಕಳೆಯ
ಕೆತ್ತಿ, ಕುರುಪಿಯಾಡಿಸಿ, ಜರಜರಿಯಿಂದ ನೀರೆರೆಯುವಲ್ಲಿ
ನನಗೆ ಸುಖವುಂಟು. ನಿಮಗೆ ಗೊತ್ತಿಲ್ಲ: ನಮ್ಮ ನಾಯಿ
ಮಣ್ಣು ಕೆದರಿ ತಣ್ಣಗೆ ಮಲಗಿ, ಅಕ್ಕಪಕ್ಕದ ಹೂ-

ಗಿಡವ ಮುರಿದು ಮುದುಡಿಸಿದೆ; ಅದಕೆ ಸಲಿಗೆ
ಕೊಟ್ಟವನು ನಾನೇ ಎಂದು ಈಕೆಯ ಸ್ಪಷ್ಟ ಹೇಳಿಕೆ.
ನೋಡಿ, ಅದನ್ನೆಲ್ಲ ಈಗ ಸರಿಪಡಿಸಬೇಕು; ಬಿಡುವಿಲ್ಲ.
ಮೇಲಾಗಿ ಬರೆಯುವ ಮನಸ್ಸಿಲ್ಲ. ನನ್ನ ಕವಿತೆ ಇರದಿದ್ದರೆ
ವಿಶೇಷ ಸಂಚಿಕೆಯ ಬೆಲೆಯೇನೂ ಇಳಿಯುವದಿಲ್ಲ.
ತಪ್ಪು ತಿಳಿಯಬೇಡಿ, ಅರ್ಥವಿಷ್ಟೆ; ಬರೆದ ಕವಿತೆಯ
ಭಾರ ಬರೆಯದ ಕವಿತೆಗಿಂತ ಹೆಚ್ಚಲ್ಲ.

•

‘ಅಲ್ಲ , ಮಾತ್ಹೇಳತೀನಿ’

ಯಾಕ ಸುಳ್ಳುಳ್ಳ ಸುದ್ದಿ ಹಬ್ಬಸ್ತೀರಿ?
ಮೊನ್ನಿ ಸಭಾದಾಗ ಯಾರೂ ನನ್ನ ಕಡೆ ಚಪ್ಪಲಿ ತೂರಿಲ್ಲ.
ಖರೇ ಹೇಳ್ತೀನಿ:
ತೂರಿದ್ದರೂ ನಾ ಅದನ್ನ ನೋಡಿಲ್ಲ.
ಕಟ್ಟ ಖರೇ ಹೇಳ್ತೀನಿ:
ಅದು ನನಗೆ ಬಡದೇ ಇಲ್ಲ.
ಪೇಪರಿನ್ಯಾಗ ಸುದ್ದಿ ಬಂದದಂತ್ಹೇಳಿ
ಅದನ್ನೆಲ್ಲಾ ನಂಬಾಕ ಹೋಗಬ್ಯಾಡ್ರಿ.
ಓದು ಒಲ್ಯಾಗ ಸುಡ್ರಿ.
ಅವರರs ಏನ ಸುದ್ದ ಇರತಾರ?
ನಡೀಬಹುದಾದ್ದನ್ನ ನಡದs ಹೋತು ಅಂತಾರ.
ಹೋತೋ, ಬಂತೋ- ಅಂತೂ ಸುದ್ದೀ ಮಾಡ್ತಾರ.
ಆದರ, ಯಾರೊ ಕರೇ ನಿಶಾನಿ ಹಿಡಿದದ್ದು ಮಾತ್ರ ಖರೆ.
ಯಾಕಂದರ ಬಿಳೀ ಟೊಪಿಗಿ ನಡುವ ಕರೇದು ಕಂಡs ಕಾಣಸ್ತದ.
ಆದರಾಗೇನ ತಪ್ಪದ?
ಅವತ್ತ ಮಂದಿ ಕೂಡಿದ್ದೇನು ತುಸಾನs ?
ನನ್ನ ಭಾಷಣಂದರೇನ ಕಸಾನs?
ಅಂಥಾ ಗದ್ದಲದಾಗ
ಯಾರದಾರ ಕಾಲಾಗಿಂದು ಕೈಯಾಗ,
ಕೈಯ್ಯಂದು ತಲಿಮ್ಯಾಗ ಹೋಗೂದು
ಸ್ವಾಭಾವಿಕ, ಹೌದಲ್ಲ?
ಅಂದ ಮ್ಯಾಲೆ, ಬೇಕಂತs ತೂರಿದರು
ಅಂತ ಯಾಕ ಬೊಬ್ಬಾಟ ಮಾಡ್ತೀರಿ?

ಹೋಗಲಿ, ಒಂದು ವ್ಯಾಳಿ ತೂರೇ ಬಿಟ್ಟಾರಂತ ಇಟಗೊಳ್ರಿ:
ಚೆಂಡು ತೂರಿ ಹಿಡಿಕೋತಾರಲ್ಲಾ
ಹಾಂಗ್ಯಾಕ ಮಾಡಿರಬಾರದು? ಹೇಳ್ರಿ.
ಇಲ್ಲ, ನನ್ನ ಕಡೇನ ತೂರಿದರು
ಅಂತ ನೀವನಬಹುದು.
ಹಂಗಾರ ನಾ ಒಂದು ಪ್ರಶ್ನೆ ಕೇಳ್ತೀನಿ:
ಅದೇನಿವರು ಸ್ವತಃ ತಯಾರ ಮಾಡ್ಸಿದ್ದ?
ಯಾರದೋ ಅಂಗಡ್ಯಾಗ ಕೊಂಡದ್ದು
ಇಷ್ಟು ದಿವಸ ಹಾಕ್ಕೊಂಡು ಅಡ್ಡಾಡಿದ್ದು
ಈಗ ಹರಿದಿದ್ದೀತು, ಬೀಸಿ ಒಗದಿದ್ದಾರು-ಆತು.
ಅಲ್ರೀ, ಎಲ್ಲೀದರ ಸಿಟ್ಟ ತಂದು ಎಲ್ಲ್ಯಾರ ಹಾಕಿದರ
ಏನ ಬಂದ್ಹಂಗಾತು?
ಗುಜರಾತದಾಗ ಗುಂಡು ಹಾಕಿದ್ರ, ಇವರ್‍ಯಾಕ ಗುರ್ರನಬೇಕು?
ಧಾರಣಿ ಏರಸೂದು, ಮಾನ-ಮರ್‍ಯಾದಿ ಇಳಸೂದು
ನಾಲಗಿ ಹೊಳ್ಳೂದು-
ಎಲ್ಲಾ ಕಡೇನೂ ನಡದs ನಡದೈತಿ.
ಬರೇ ನಮಗೆ ಏನ ಗುತಿಗಿ ಕೊಟ್ಟೈತೆ?
ಬಿಹಾರದಾಗ ನೋಡ್ರಿ, ಹ್ಯಾಂಗ ಬಾಯಿಗೆ ಅರವಿ ಕಟ್ಟಿಕೊಂಡು
ಹಿಂದ ಕೈ ಕಟ್ಟಿಕೊಂಡು ಮೆರವಣಿಗೆ ಹೊರಟಿದ್ರು-
ಅವರs ಪೇಪರಿನವರs ಕೊಟ್ಟಾರಲ್ಲ-
ಹಾಂಗ ಬಾಯಿಮುಚ್ಚಿಕೊಂಡು ಸುಮ್ಮನಿರಬೇಕ್ರೆಪ
ಅಂದರ ಶಾಣ್ಯಾತನ.
ಅಲ್ಲ, ಮಾತ್ಹೇಳತೀನಿ:
ಚಪ್ಪಲಿ ತೂರಿದ್ದು ತೂರಿ ಹೋಯ್ತು;
ಅವರಿಗೊಂದ ಹೊಸಾ ಜೋಡು ಕೊಡಿಸಿದರಾತಿಲ್ಲೊ?
ಏನಂತೀರಿ?

•

ಹುಲ್ಲು

ಈ ಜುಲೈ ತಿಂಗಳ ಜಿಟಿ ಜಿಟಿ ಮಳೆ-
ಗಟಗಟ ಕುಡಿದು ಧುತ್ತೆಂದು ಬೆಳೆದು ನಿಂತಿದೆ ಹುಲ್ಲು.
ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು:
ಸಿಮೆಂಟು ಗೋಡೆಯ ಬಿರುಕು, ಟಾರು ಬೀದಿಯ ಒಡಕು-
ಎಂಥ ಇಕ್ಕಟ್ಟಿನಲ್ಲು ಹೊರಬರುತ್ತದೆ ತುರಾಯಿ ಹಚ್ಚಿಕೊಂಡು.

ಗುಡ್ಡ-ಮರಡಿ-ಬಯಲು ಸ್ವಂತ ಸಾಮ್ರಾಜ್ಯ.
ಹಿತ್ತಿಲದ ಮಾತು ಗೊತ್ತೇ ಇದೆ;
ಅಂಗಳದ ಅಂಗುಲಂಗುಲ ಕೂಡ ಅದರದೇ ಗುತ್ತಿಗೆ.
ಹೂದೋಟದಲ್ಲಿ ಹೇಳಿ ಕಳಿಸಿದ ಹಾಗೆ ಹೊತ್ತಿಗೆ
ಮೊದಲೇ ಬಂದು ಡೇರೆ ಹೊಡೆದು ತಳವೂರುತ್ತದೆ-
ನೀರೆರೆದು ಬೆಳೆಸಿದ ಹೂವಿನಗಿಡಕ್ಕೆಸೆದು ಸವಾಲು;
ಬೀಜದ ಕಸುವೊ, ಮಣ್ಣಿನ ಹಸಿವೋ-
ಮುಸುಗುಡುತ್ತದೆ ದನ ಮೇದು ಹೋದ ಮೇಲೂ.

ಕರುಣೆ ತೋರದೆ ಕುರುಪಿಯಿಂದ ಕೆತ್ತಿ ಕೆತ್ತಿ ತೆಗೆದು
ಹೊರಗೊಗೆದು ಹಸನಾಯಿತೆಂದು ಉಸಿರು ಬಿಡು-
ವಷ್ಟರಲ್ಲೇ ಕಷ್ಟದ ಮರುದಿನದ ಮುಖದಂತೆ
ಬ್ಲೇಡಿಗೆ ತಯಾರು. ನೀವಾರು, ನಿಮ್ಮ ಹೆಸರೇನು,
ಕಸುಬಾವುದು-ಐದೆಸೆಯೆಲ್ಲ ಅದಕೆ ಗೊತ್ತು.
ಕರಿಕೆ: ಕಜ್ಜಿಯ ತುರಿಕೆ, ಹುಲ್ಲು: ಕಾಮನಬಿಲ್ಲು
ಕಣ್ಮುಚ್ಚಿ ಬಿಟ್ಟೇ-
ಬಿಡುತ್ತದೆ ಬಾಣ; ಹೇಳಿ ಎಲ್ಲಿಲ್ಲ ಅದರ ತಾಣ?

ಇರಬಹುದು ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ. ಅದರ
ತಳದಲ್ಲಿ ಮೆತ್ತಗೆ ಮಲಗಿರುತ್ತದೆ, ಪರೀಕ್ಷಿಸಿ ನೋಡಿ.
ಬೇಲಿ ದಾಟಿ ಒಳಗೆ ನುಗ್ಗುತ್ತದೆ; ಕಾಲ ಕೆಳಗೇ ಬಂದು
ಜಗ್ಗುತ್ತದೆ. ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲದಲ್ಲಿ
ಹಿಗ್ಗುತ್ತದೆ; ಬರಬರುತ್ತ ಒಗ್ಗಿಹೋಗುತ್ತದೆ.

ಮಳೆಗೆ ಹುಲ್ಲು ಮೊಳೆಯುವದು ಮೂಲ ಪ್ರವೃತ್ತಿ, ನಿಸರ್ಗ.
ಕಳೆ ತೆಗೆದು ಬಿತ್ತಿ ಬೆಳೆಯುವದು ನಾಗರಿಕ ಮಾರ್ಗ.
ಮರುಭೂಮಿಯ ಮಾತು ಬೇರೆ; ಅಲ್ಲಿ ಮಳೆಯೂ ಇಲ್ಲ.
ಆದರೂ ದೂರ ಅಲ್ಲೊಂದು ಓಯಾಸಿಸ್ಸು ಉಂಟಲ್ಲ ಮಾರಾಯರೆ-
ಆದಕ್ಕೇ ಅಲ್ಲಿ ಒಂಟಿ ಮಲಗಿ ಮೆಲುಕಾಡಿಸುವದು.

●

ಧ್ವನಿ-ದನಿ

ಮುಂಜಾವಿನಿಂದ ಮುಂಜಾವು: ಬಗೆ ಬಗೆಯ ಧ್ವನಿ
ಗಳೇರಿಳಿವು. ಋತು ಋತುವಿಗೊಂದು ಬನಿ.
ಎಷ್ಟೋ ದನಿಗೆ ಕಿವುಡರು ನಾವು ಕಂಡು ಕಂಡೂ.
ಮಹದನುಭವವ ಕಳೆದುಕೊಂಡು. ಹಿಂದು-ಮಂದಿರದ
ಸರಪಳಿ ತುಂಡು.

ತನಿಗೊಂಡ ಮಕ್ಕಳುಲಿ: ತಾಯಿ-ಮಗು ಸೆಳೆತ
ಯುಗ ಯುಗದ ಮಮತೆ ಓತಪ್ರೋತ. ಆಗಾಗ
ಬದುಕಿನ ಬಿರುಕಿನಿಂದೊಗೆವ ಅಸಹಾಯ, ಕ್ಷೀಣ ಧ್ವನಿ.
ಮಳೆ-ಗಾಳಿ ಹೊಯ್ಲು, ಉರುಳುರುಳಿ ನರಳುವ ರೈಲು; ಅಬ್ಬರಿಸಿ
ನುಗ್ಗು-ತಡಸಲು, ಮೌನದಲಿ ಕಿವಿಗೊಟ್ಟ ಬಟ್ಟ ಬಯಲು.

ಸ್ನೇಹ ಕೂಟದ ಬೆಚ್ಚಗಿನ ದನಿ, ಸಂತಸದ ತುಂಬು-ತುಳುಕು.
ಪಯಣದಲಿ ಕೊಲ್ಲಾರಿ ಬಂಡಿಯ ಲಯದ ಗಿಲಕ್ ಗಿಲಕು.
ಟಾರು ಬೀದಿಯಲಿ ಟಾಂಗಾ ಕುದುರೆ ಟಕಕ್ ಟಕಕು.
ಮಟಮಟ ಮಧ್ಯಾಹ್ನ ಗೂಡಿನಲಿ ಗುಬ್ಬಿ-ಗುಟುಕು.

ಬಿರುಗಾಳಿ ಮುನ್ನ ಮರಮರವ ಹೊಕ್ಕು ತೀಡುವ ಗಾಳಿ.
ಭೆಟ್ಟಿಗೆ ಬರುವ, ಮರೆತ ಗೆಳೆಯನ ತ್ವರಿತ ಫೋನಿನುಲಿ.
ಹೊರಗಿಂದ ಬಂದ ಮನೆಯವರ ನಗುಮೊಗದ ಕಲಕಲ ಮುದ್ದು-
ಬೇಲಿಯಾಚೆಗೆ ಬಣ್ಣ ಬಣ್ಣದ ಹಕ್ಕಿ ಹಾರಿದ ರೆಕ್ಕೆಸದ್ದು.

ನಿದ್ದೆಗೂಸಿನ ಉಸಿರಾಟ ನಿರಾಳ ಸೂಕ್ಷ್ಮ ಸೂತ್ರ ಧ್ವನಿ.
ಇರುಳಿನಲಿ ಹೊರಗೆ ಸಣ್ಣಗೆ ಬರುವ ಮಳೆಯ ಹನಿ.
ಅಟ್ಟದ ಮೇಲೆ ಮೇಷ್ಟ್ರು ಮಕ್ಕಳಿಗೆ ಹೇಳುವ ಗಣಿತ,

ಹೊತ್ತುಗಳೆಯದೆ ಉಣ್ಣೆಯಂಗಿಯ ಹೆಣೆವ ಸೂಜಿಗಳ ಕ್ವಣಿತ.
ಶಬ್ದಗಳ ಹುಡುಹುಡುಕಿ ಮೌನ ಭೇದಿಸುವ ಪ್ರೇಮಿಗಳ
ಎದೆಯ ಮಿಡಿತ.

ದಂಡೆಗಪ್ಪಳಿಸಿ, ನಿಧಾನ ಹಿಂದೆ ಸರಿಯುವ ಕಡಲ ತೆರೆ.
ಬಳಿಬಳಿಯಾಗಿ ಬಂದು ಸುಳಿದು ಸಿಂಗರಿಸುವ ಕೆರೆಯ ಸಣ್ಣ ಅಲೆ.
ನೆರೆಮನೆಯ ಜಗಳ ಕದ್ದು ಕೇಳುವ ಕಿವಿಗೆ ಮುತ್ತಿನೋಲೆ.

ಆಕಾಶದುದ್ದ ಕೊರೆವ ಹದ್ದು-ಕಾಗೆಗಳ ಕರ್ಕಶ ಧ್ವನಿ.
ಸುಗ್ಗಿ ಮಾಡುವ ರೈತರುತ್ಸಾಹ, ಕೇಕೆ. ಹೊಲದ ಬದುವಿನಲಿ
ಮೇಯುವ ದನದ ಕೊರಳ ಕಿಂಕಿಣಿ ಸರಣಿ, ಕರುವಿನಂಬಾ ದನಿ.
ಅಡುಗೆ ಮನೆಯಲಿ ತಾಟು-ಲೋಟಗಳ ಭರವಸೆಯ ಸಿಂಘನಿ.
ಮಧ್ಯಾಹ್ನ ಎದ್ದು ಆಕಳಿಸಿದಾಗ ಚಹದ ಕಪ್ಪು-ಬಸಿ ಒಪ್ಪಾಗಿ
ಟಿಂಟಿಣಿ ದನಿ.

ಮಲಗಿ ಓದುತ್ತ ಕಾದಂಬರಿಯ ಕುತೂಹಲದ ಪುಟ ಪುಟ ದನಿ.
ತಲ್ಲೀನ ಕುಳಿತ ಗಾಯಕನ ಹಿಂದೆ ಮಾಯಕದ ತಂಬೂರಿ
ನರನರವ ಮೀಟಿ ಹೊರಡಿಸುವ ಜೀವಧ್ವನಿ.

ನಿರಂತರ ಉರುಳುರುಳಿ ಮೊರೆವ ಸಮುದ್ರ:
ಬಾನಿನಲಿ ಮತ್ತೆ ಗುಡುಗಿನ ದನಿ. ಎಲ್ಲಿ
ಏಕಾಂತದಲಿ ಮಿಡಿದು ಮಾರ್ದನಿಗೊಳುವ ನನ್ನೊಳದನಿ?
ಲೋಕಾಂತದಲಿ ಧ್ವನಿಗಳೇರಾಟ ಚೀರಾಟಗಳ ನಡುವೆ
ನಾನು ಮೌನಿ.

ಈಗ ಕವಿತೆ ಬರೆಯಲು....

ಈಗ ಕವಿತೆ ಬರೆಯಲು ನಾನು ಹೊರಟಿಲ್ಲ.
ಹೊರಟದ್ದು ಆಫೀಸಿಗೆ; ಉಂಡು ಅವಸರದಿಂದ-
ಸಿಕ್ಕರೆ ಬಸ್ಸು ಹಿಡಿದು, ಇಲ್ಲ, ಮೆಲ್ಲಗೆ ನಡೆದು;
ಸಡಿಲಾಗಿರುವ ಕೋಟು ಪ್ಯಾಂಟುಗಳನ್ನು ಇದ್ದು-
ದರಲ್ಲಿ ಸರಿಪಡಿಸಿಕೊಂಡು. ಎಷ್ಟೋ ವರ್ಷಗಳ
ಹಿಂದೆ ಎಡಗಾಲ ಹಿಂಬಡ ಗಾಯ ಮಾದದ್ದು
ಈಗ ಮತ್ತೆ ನೋವು. ಮದುವೆಯಲ್ಲಿ ಕಟ್ಟಿದ ವಾಚು
ಆಗೀಗ ಬಂದುಬಿದ್ದರೂ ಆದರಂತರಂಗದದ್ಭುತ-
ಸೂಕ್ಷ್ಮಯಂತ್ರಕ್ಕೆ ಸಾಗಿದ ನಾನು ಮಂತ್ರ ಮುಗ್ಧ.

ನನ್ನ ದಾರಿಗೆ ಅಡ್ಡ ಎಮ್ಮೆಗಳು (ನಮ್ಮೂರ ದೊಡ್ಡ
ಹೆಮ್ಮೆಗಳು) ಉದ್ದಕ್ಕೂ ಉಚ್ಚೆಹೊಯ್ಯುತ್ತ, ಸಗಣಿ
ಹಾಕುತ್ತ, ಅತ್ತಿತ್ತ ಸುಖವಾಗಿ ಬಾಲ ಜಾಡಿಸುತ್ತ;
ಸೈಕಲ್ಲು, ಕಾರು, ಸ್ಕೂಟರು ಜಾರಿ, ತಮ ತಮಗೆ ದಾರಿ
ಮಾಡಿಕೊಂಡು. ಚೀಲದ ತುಂಬ ಪುಸ್ತಕ ಭಾರ ಹೊತ್ತು
ಶಾಲೆಗೆ ನಡೆದ ಮಕ್ಕಳುತ್ಸಾಹಕ್ಕೆ, ಎಡಬಲದ
ಗಿಡಮರಗಳಲ್ಲಿ ಚೈತ್ರ ನಗುವ ಚಿಗುರು.

ಆಫೀಸಿನ ಕುರ್ಚಿ ಮೇಜುಗಳ ರೀತಿ ರಿವಾಜು
ಗಳಲ್ಲಿ ಫೈಲುಗಳು; ಪತ್ರಕುತ್ತರ ಮತ್ತೆ ಸುತ್ತೋಲೆ:
ಟೀಕೆ-ಟಿಪ್ಪಣಿ ಸರಣಿ; ದೂರವಾಣಿಯಲ್ಲಿ ದೂರುಗಳು.
ಸುಸೂತ್ರ ಸಾಗುತ್ತಿದ್ದಂತೆ ಕೆಂಪು ಪಟ್ಟಿಯಲ್ಲಿ ಕಗ್ಗಂಟು-
ಹೀಗೆ ಇಪ್ಪತ್ತೆಂಟು ಗಲಿಬಿಲಿಯ ನಡುವೆ, ಬಿಟ್ಟೂ
ಬಿಡದೆ ಟೈಪ್‌ರೈಟರಿನ ಲಯಬದ್ಧ ನಡಿಗೆ; ಕೊನೆಗೆ
ಕೆಳಗಿಂದ ಮೇಲಿನ ತನಕ ರುಜುವಾಗಿ, ಹೊರ ಜಗತ್ತಿಗೆ

ರವಾನೆ. (ಹೇಗಿದ್ದರೂ ಮುಗಿಸಬೇಕಾದ ಕೆಲಸ ತಾನೆ?)
ಹೊತ್ತು ಇಳಿಯುವ ಸಮಯ: ಬಾಗಿದ ಬೆನ್ನು ಎತ್ತಿ
ಹೊರಗಿನ ಗಾಳಿ ಬೆಳಕಿಗೆ ತೇಲಿ ಬರುವಾಗ
ಮೇದು ಮೆಲುಕಾಡಿಸುತ ಬರುವ ದನ-ಕರುಗಳು.
ಹುಡುಗನ ಹೆಗಲಲ್ಲಿ ಜೋತ ಟ್ರಾನ್ಸಿಸ್ಟರಿನ ಹಾಡು.

ಕಟ್ಟಿಗೆಯ ಹೊರೆ ಹೊತ್ತು ದಣಿದ ಹೆಜ್ಜೆಯ ಹೆಣ್ಣು
ಮಕ್ಕಳ ಹಣೆಯ ಬೆವರು. ಗುಡ್ಡವನ್ನಿಳಿದು
ಸಾಗಿದ ನೆರಳು. ಬಾನ ಮನಸಿಗೆ ಅವಿಸ್ಮರಣೀಯ
ನೆನಪುಗಳ ಮೆಲ್ಲ ತೇಲಿಸಿ ತರುವ ಬೆಳ್ಳಕ್ಕಿ ಸಾಲು.
ಆಟದ ಬಯಲಿನಲ್ಲಿ ಬರೀ ಕ್ರಿಕೆಟ್ಟು.

ಮನೆಯ ಮೆಟ್ಟಿಲು ಹತ್ತಿ ಹಾಗೆ ಹೊರಳಿದರೆ-
ದಿನದ ದುಡಿಮೆಯ ಕೆಂಪು, ಬಾನಿನಲಿ ಮೆಲ್ಲಗೆ
ನಂದಿ, ಒಂದೆರಡು ಅಸ್ಪಷ್ಟ ಚಿಕ್ಕೆಗಳು ಮೂಡಿ
ಗೂಡಿನಲ್ಲಿ ಸ್ತಬ್ಧ ಹಕ್ಕಿಗಳು.

ಈ ದಿವಸ ಮಾಡಿ ಮಟ್ಟಿದ್ದೇನು? ಎದೆಯ ತಟ್ಟಿದ್ದೇನು?
ನಿನ್ನೆಗಳ ಇಂದು ಎಳೆತಂದು, ನಾಳೆಗುತ್ತರವ
ಹುಡುಕುವ ಉತ್ತರೋತ್ತರ ಕೆಲಸ. ಪುರಸತ್ತಿರದೆ
ಸುತ್ತುವದು ಹೀಗೆ ನಮ್ಮ ಸುತ್ತು: ಈ ಜಗತ್ತು-
ವಿವಿಧ ಛಂದಸ್ಸಿನಲಿ ಕಸರತ್ತು ಲಯವಾಗಿ, ಈಗೀಗ
ವಿರಳ ಸರಳ ರಗಳೆಯ ಹೊಕ್ಕು ಹೊರಬಂದು
ಮುಕ್ತಛಂದದ ಹೆಸರಿನಲ್ಲಿ ನಿಧಾನ ಹೆಜ್ಜೆ ನಿಂದು.

ಇರುವೆ

ಈಟಿರುವೆ
ಕೀಟಿರುವೆ; ಬಾಲ್ಯದಿಂದಲು ನನ್ನ
ಕಣ್ಣೊಳಗೆ ನಾಟಿರುವೆ.
ಎಲ್ಲಿದ್ದರೂ ಸ್ವಲ್ಪವೂ ಸದ್ದಿಲ್ಲದಿರುವೆ.
ಇದೀಗ
ಗುದ್ದಿನೊಳಗಿಂದ ಪುದುಪುದು ಎದ್ದು
ಸ್ಪರ್ಶಾಂಗಗಳ ಗಾಳಿಗಾಡಿಸಿ
ಮೂಸಿ, ಗುರುತಿಸಿ, ಅಡ್ಡಿ-
ಆತಂಕಗಳ ದಾಟಿರುವೆ.
ಎಲ್ಲ ತುಳಿದಾಟದಲಿ, ನಿನ್ನದೇ
ಹಾದಿಯನು ಹಿಡಿದು ಹೊರಟಿರುವೆ.

ಕೆಂಪಿರುವೆ
ಕಪ್ಪಿರುವೆ; ಗುಂಪುಗಳ
ಕಟ್ಟಿರುವೆ; ಒಮ್ಮೊಮ್ಮೆ
ಬಿಟ್ಟಿರುವೆ. ಆದರೂ ಸೌಹಾರ್ದದಲಿ
ಮತ್ತೆ ಸಾಲುಗೊಂಡಿರುವೆ.
ಮನೆ-ಹೊಸತಿಲು-ಬೀದಿ ಮೇಲೆ ಸರಸರ ಹರಿದು
ಎಲ್ಲೆಡೆ ದೌಡಾಯಿಸಿರುವೆ.
ಎಲ್ಲಿಗೆಲ್ಲಿಗೆ ಧಾಳಿ?
ಗೆದ್ದಲಿನ ಹುತ್ತ, ಕೀಟಗಳ ತೋಟ
ಹೂವ ಮಕರಂದ, ಧಾನ್ಯಗಳ ಕಣಜ-
ಮೇಯಲಿಕ್ಕೆ?
ಹೊಸ ಬಿಡಾರವ ಹುಡುಕಿ ತಂಗಲಿಕ್ಕೆ?
ನೆಲ ಕೊರೆದು

ಮಣ್ಣ ಕಣ ಕಣವ ಪೇರಿಸಿ
ರಾಣಿಗರಮನೆಯ ಕಟ್ಟಿ ಕಾಪಾಡುವುದಕೆ?
ಇಲ್ಲ-
ವೈರಿಯ ಜೊತೆಗೆ ಹೋರಾಟಕೆ?
ಸತ್ತ ಜೀವಿಗಳನೆತ್ತಿ ಎಳೆದು ಹಾಕಿರುವೆ.
ಬಿಳಿ ತತ್ತಿಗಳ ಒಂದೊಂದೆ ಹೊತ್ತು
ದೂರ ಸಾಗಿರುವೆ.
ಎಂಬತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ
ನಾನು ಮೇಲಿರುವೆ-ಎನುವಾಗ
ಗುಪ್ತ ಸ್ಥಳವನು ಹೊಕ್ಕು
ಕಚ್ಚಿಬಿಟ್ಟಿರುವೆ.

•

'ಮನು'ವಿನ ಕೊನೆಯ ಗಳಿಗೆ

ಕಳೆದ ಐದಾರು ದಿನಗಳಿಂದ ಮನಸ್ಸಿಗೆ
ಸಮಾಧಾನವೇ ಇರಲಿಲ್ಲ-
ಒಳಗೂ ಹೊರಗೂ ಬಿಟ್ಟೂ ಬಿಡದೆ ಓಡಾಡಿಕೊಂಡು
ಬೇಡವೆಂದರೂ ಬಾಲವನ್ನಾಡಿಸಿ ಬೆಂಬತ್ತಿ ಬಂದು
ಮೊದಲೇ ಮುಂದಿನ ದಾರಿಯನ್ನು ಮೂಸಿ
ಹೊರಡುತ್ತಿದ್ದ 'ಮನು'
ಏಕಾಏಕಿ ಮಲಗಿಬಿಟ್ಟಿತು.

ಚಳಿಗಾಲದಲ್ಲಿ ಒಂದೊಂದು ದಿನ ಇದು ಹೀಗೇ-
ಮಣ್ಣುಕೆದರಿ, ಬೆಚ್ಚಗೆ ಮೈ ಮುದುಡಿ ಮಲಗಿಕೊಳ್ಳುವದೆಂದು
ಸುಮ್ಮನಿದ್ದೆ. ಆದರೆ
ಯಾರು ಬಂದರೂ ಹೋದರೂ ಕಣ್ಣೆತ್ತಿಯೂ ನೋಡದೆ
ಒದರದೆ, ಓಡಾಡದೆ, ಒಮ್ಮೆಲೆ
ಮೌನವಾಗಿ ಬಿಡುವುದೆ?

ಉದ್ದಕೆ ಗೋಣು ಚಾಚಿ, ಕೂಳು ನೀರಿಲ್ಲದೆ ನಿಸ್ತೇಜ
ಬಿದ್ದುಕೊಂಡುದ ಕಂಡು ತಣ್ಣಗಾದೆ.
ಎಲ್ಲರಿಗೂ ಅದೇ: 'ಮನು ಏಕೆ ಹೀಗಾದೆ?'
ಹಾಕಿದ ಔಷಧ, ಕುಡಿಸಿದ ಹಾಲು, ಕಟವಾಯಿಗುಂಟ.

ಒಂದು ಕ್ಷಣ-ಒಂದೇ ಒಂದು ಕ್ಷಣ-ಇದಕ್ಕೆ ಬಾಯಿ ಬಂದು
ತನ್ನ ನೋವನ್ನೆಲ್ಲ ಹೇಳಿಕೊಳ್ಳಬಾರದೇ-ಎನ್ನಿಸಿತು.
ಇಂಥ ಸ್ಥಿತಿಯಲ್ಲೂ ಹತ್ತಿರ ಹೋದರೆ
ಮೆತ್ತಗೆ ಬಾಲವಲ್ಲಾಡಿಸಿತು.

ಕೊನೆಯ ಗಳಿಗೆಯಲ್ಲಿಯೂ ಮೆಲ್ಲಗೆ ಕಣ್ಣು ತೆರೆದು
ಕಣ್ಣಲ್ಲಿಯೇ ಜೀವ ಹಿಡಿದಂತೆ
ಗುಡ್ಡೆ ಹೊರಳಿಸಿ, ಒಮ್ಮೆ ಎಲ್ಲರನ್ನು ನೋಡಿದ
ಕೃತಜ್ಞತೆಯ ಆ ಪ್ರಶಾಂತ ನೋಟ-
ಮೊನ್ನೆ ಸಂಜೆಯ ಅಪರೂಪದ ಆ ಚಂದ್ರ-ಶುಕ್ರ ಕೂಟ
ಮೂಡಿ ಮರೆಯಾಯಿತು.
ಹಣತೆಯ ಕುಡಿ-ಬೆಳಕು ಸಣ್ಣದಾಗುತ್ತ ನಂದಿತು.
ಹೌದು. ಆದರೆ ಆ ನೀಲಮಣಿ ಬೆಳಕು ಎಲ್ಲಿ ಹೋಯಿತು?
ಕತ್ತಲೆಯನ್ನು ಭೇದಿಸಿ ಹೇಗೆ ಪಾರಾಯಿತು?
ಮಣ್ಣ ಹಣತೆಯನ್ನು ಮಣ್ಣಿಗೆ ಬಿಟ್ಟು
ಆಕಾಶದ ಯಾವ ಮೂಲೆಯಲ್ಲಿ ಚಿಕ್ಕೆಯಾಯಿತು?
ಅದರ ಶೌರ್ಯವನ್ನೆಲ್ಲ ಈಗ ಯಾರ ಮುಂದೆ ಹೇಳುವದು?
ಹೇಳಿ ಏನು ಮಾಡುವದು?
ಏಳೆಂಟು ವರುಷಗಳ ಎಡೆಬಿಡದ ಜೀವದ ನಂಟು
ಮಲ್ಲಿಗೆಯ ಅಂಟಿನಂತೆ ನೆನೆಸಿದಾಗೆಲ್ಲ ಚಿಗುತು ಹೂ ಬಿಡುವದು
ನೆಲ-ಬಾನುಗಳನ್ನು ಸುತ್ತಿ ಬೀಸುವ
ಎಲ್ಲರ ಉಸಿರಾಗಿರುವ, ಇದ್ದೂ ಇಲ್ಲದ ಹಾಗಿರುವ
ಈ ಗಾಳಿಯಲ್ಲಿ
ಇಂಥ ಎಷ್ಟು ಜೀವಗಳ ಪರಿಮಳ ಬೆರೆತು ಹೋಗಿದೆಯೋ-
ನೆಲದ ಮೇಲಿನ ಹೂವು, ಮುಗಿಲಲ್ಲಿಯ ಚಿಕ್ಕೆ
ಅವೇ ಬಾಯಿಬಿಟ್ಟು ಹೇಳಬೇಕು.

●

ಹೆಸರಾಯಿತು 'ಕರ್ನಾಟಕ'

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

ಹೊಸೆದಹಾಗೆ ಹುರಿಗೊಳ್ಳುವ
ಗುರಿ ತಾಗುವ ಕನ್ನಡ;
ಕುರಿತೋದದ ಪರಿಣತಮತಿ-
ಅರಿತವರಿಗೆ ಹೊಂಗೊಡ.

ಪಡುಗಡಲಿನ ತೆರೆಗಳಂತೆ
ಹೆಡೆ ಬಿಚ್ಚುತ ಮೊರೆಯುವ
ಸಹ್ಯಾದ್ರಿಯ ಶಿಖರದಂತೆ
ಬಾನೆತ್ತರ ಕರೆಯುವ.

ಗುಡಿ-ಗೋಪುರ ಹೊಂಗಳಸಕೆ
ಚಿಂಬೆಳಕಿನ ಕನ್ನಡ;
ನಮ್ಮೆಲ್ಲರ ಮೈ ಮನಸಿನ
ಹೊಂಗನಸಿನ ಕನ್ನಡ.

ತ್ರಿಪದಿಯಿಂದ ಸಾಸಿರಪದಿ
ಸ್ವಚ್ಛಂದದ ಉಲ್ಲಸ,
ಭಾವಗೀತ, ಮಹಾಕಾವ್ಯ-
ವೀರ-ವಿನಯ ಸಮರಸ.

ಹಳ್ಳಿ-ಊರು, ನಗರ-ಜಿಲ್ಲೆ
ಮೊಗದ ಹೊಗರು ಕನ್ನಡಿ;
ಎಲ್ಲ ದಿಸೆಗು ಚೆಲ್ಲುವರಿದ
ಚೈತನ್ಯದ ದಾಂಗುಡಿ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿ ಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

•

ಮಳಲು ಹಾಡುತ್ತದೆ

ರಶಿಯಾದ ಕಾರಕುಮ್ ಮರುಭೂಮಿಯಲ್ಲಿ
ಮಳಲು ಹಾಡುತ್ತದೆ-
ಹಾಗೆಂದು ಮೊನ್ನೆ ಪತ್ರಿಕೆಯಲ್ಲಿ ಸುದ್ದಿ.
ಬಿರುಗಾಳಿ ಬೀಸಿದೊಡನೆ
ಉಸುಕಿನ ತರಂಗಗಳ ತಂತಿ ಮೀಟುತ್ತ
ಹಾಡಿದಂತೆ, ಗರ್ಜಿಸಿದಂತೆ
ಕೆಲವೊಮ್ಮೆ ರೋದಿಸಿದಂತೆ-ಕೇಳುತ್ತದಂತೆ.

ಶತಮಾನಗಳಿಂದ ಸುಡುವ, ತಣ್ಣಗೆ ಕೊರೆವ
ಮರುಭೂಮಿಯ ರಹಸ್ಯಗಳ ದಿಕ್ಕು ಹಿಡಿದು
ಹೊರಡುವದು ಕಷ್ಟ.
ಒಂಟೆಯ ಮೇಲೆ ಒಂಟಿಯಾಗಿ, ಹಿಂದಕ್ಕೂ
ಮುಂದಕ್ಕೂ ತೂಗುತ್ತ ಸಾಗಿದಾಗ
ಎಲ್ಲೊ ದೂರದಲ್ಲಿ
ಓಯಾಸಿಸ್ ಕಂಡರೂ ಕಾಣಬಹುದು.
(ಇಲ್ಲವಾದರೆ ಒಂಟೆಯ ಬೆನ್ನನ್ನೇ ಬಗಿದು
ನೀರು ಕುಡಿಯಬಹುದು.)
ಸಾಧುವಲ್ಲದ ಈ ಪ್ರಾಣಿಯನ್ನು ಸಾಕಬಹುದು.
ತಾಳ್ಮೆಯಿದ್ದರೂ ಹಟಮಾರಿ, ಕಾಡಾದರೂ ವಿಧೇಯ.
ಮೊಳಕಾಲೂರಿಸಿ ಹಿಂಬದಿಯಿಂದ ಹತ್ತುವಾಗ ಸವಾರ-
ರೇಗಿಸದೆಯೂ ಮೈಮೇಲೆ ಏರಿ ಬರಬಹುದು.
ಹಿಂದೂ ಮುಂದೂ ಕೂಡಿಯೆ ಒದೆಯಬಹುದು.
ಸಮೀಪ ಸಿಕ್ಕುದನು ಹಿಡಿದು ಕಚ್ಚಬಹುದು.
ಒಮ್ಮೆ ಹತ್ತಿಸಿಕೊಂಡು ಹೊರಟಿತೊ-

ಕಣ್ಣುಗಳನರೆಮುಚ್ಚಿ ತನ್ಮಯತೆಯಲಿ
ಸೂರ್ಯ, ಚಂದ್ರ, ನಕ್ಷತ್ರಗಳ ಕೆಳಗೆ
ಮರುಭೂಮಿಯ ಹಡಗು ಈಸುವದು ಒಂದೇ ಗತಿಗೆ.

ಮಳಲು ಹಾಡುತ್ತದೆಂದ ಮೇಲೆ-
ಮಾನವ ಸಹಜ ಭಾವನೆಯ ಬಿಮ್ಮನೆ ಬಿಗಿದುಕೊಂಡಿರುವ
ಮರಳುಗಾಡಿನ ಆ ಸುತ್ತು ನಾಡಿನಲ್ಲಿ
ಹೇಳಲಾಗದೆ ಹುಗಿದ ಭಾವಗಳು
ಈಗ ಹೊರಹೊಮ್ಮಬಹುದು.
ಯಂತ್ರಗಳ ಕೈಗೆ ಸಿಗದ, ಒಂದಿಷ್ಟು ನಗೆಮೊಗದ
ಕನಸುಗಳ ಕಾರಂಜಿ ಚಿಮ್ಮಬಹುದು.

ಆದರೆ, ಮಳಲಿನ ಈ ವರ್ತನೆ
ಭೂಕಂಪಕ್ಕೆ ಮುನ್ಸೂಚನೆ ಎಂಬು ವಿಜ್ಞಾನಿಗಳ ಶಂಕೆ,
ಆದರೂ ಏರುತ್ತಲೇ ಇದೆ
ಅಣ್ವಸ್ತ್ರಗಳ ಸಂಖ್ಯೆ.

●

ಈಗಿನ ಮಕ್ಕಳು

ಈಗಿನ ಮಕ್ಕಳಿಗೆ ಎತ್ತಿಕೊಳ್ಳುವದು ಅಷ್ಟೊಂದು ಇಷ್ಟವಿಲ್ಲವೇನೋ-
(ಅದರಿಂದ ಯಾರಿಗೂ ನಷ್ಟವಿಲ್ಲ; ಆ ಮಾತು ಬೇರೆ.)
ಆದರೆ ಪ್ರೀತಿಗೆ ಪಟ್ಟಗಟ್ಟುವದು ಹೇಗೆ?
ಮಕರಂದವೆಲ್ಲ ಜೇನುಹುಟ್ಟಿನಲಿ ತುಪ್ಪವಾದ ಹಾಗೆ?

ದೂರದಿಂದಲೆ ಕಣ್ಣರಳಿಸಿ, ಕೈಮಾಡಿ ಗೋಣು ಹಾಕುತ್ತವೆ.
ಸಮೀಪಕ್ಕೆ ಹೋದರೆ ಮುಖ ಹೊರಳಿಸುತ್ತವೆ.
ಅಷ್ಟು ದೂರ ಏಕೆ, ಇಲ್ಲೇ ಇದ್ದಾಳಲ್ಲ ಮೊಮ್ಮಗಳು
ಪ್ರೀತಿ, ವಾತ್ಸಲ್ಯಗಳ ಹೆಮ್ಮುಗ್ಗುಳು
'ಏಯ್' ಎಂದು ಕರೆಯುತ್ತಾಳೆ.
'ಓ' ಎಂದರೆ ಮುಖವೆಲ್ಲ ಮುದ್ದುನಗೆಯಲ್ಲಿ ಅದ್ದಿ ತೆಗೆಯುತ್ತಾಳೆ.
ತುಂಬುಗಲ್ಲದ ನಡುವೆ ಮೂಗು ಕಿರು ಮುಗುಳಾಗಿ
ಬಾಯಿ ಹಿಗ್ಗಿಸಿ, ಕೆಳಗಿನೆರಡು ಹಲ್ಲಿನ ಚುಕ್ಕಿ-
ಕಣ್ಣಿನಲಿ ಉಳಿದೆಲ್ಲ ಮಿನುಗಿಸುತ್ತಾಳೆ.
ಅವ್ವ ಬಳಿಗಿರಬೇಕು, ಅಪ್ಪ ತಿಳಿದಿರಬೇಕು,
ನಾವು-ಪ್ರೇಕ್ಷಕರು, ಆದಷ್ಟು ರಂಗಭೂಮಿಯ ಬಿಟ್ಟು
ದೂರವಿರಬೇಕು.

ಈಗಿನ ಮಕ್ಕಳೇ ಹಾಗೆ-
(ಹೊಸ ಪೀಳಿಗೆ)
ಕರೆದೊಡನೆ ಅಡಬರಿಸಿ ಬರುವುದಿಲ್ಲ;
ಬಂದರೂ ಹೆಗಲೇರಿ ಬಹಳ ಹೊತ್ತಿರುವುದಿಲ್ಲ.
ಅವಸರದಲ್ಲಿ ಕೆಳಗಿಳಿದು, ಎದ್ದು ಬಿದ್ದು
ತಮ್ಮ ಕಾಲ ಮೇಲೆ ತಾವೇ ನಿಲ್ಲಬಯಸುತ್ತವೆ.
ಹೆಜ್ಜೆ ಹೆಜ್ಜೆಗೂ ಕುತೂಹಲ ಹುಟ್ಟಿಸುತ್ತ
ಆತಂಕ ದಾಟುತ್ತ
ದೊಡ್ಡವರೆನಿಸಿಕೊಂಡ ನಮ್ಮನ್ನು ದಂಗುಬಡಿಸುತ್ತವೆ.

•

ಕಾರ್ತಿಕದ ಮೋಡ

ಒಂದರ ಹಿಂದೊಂದು ಪರದೆ ಹಿಡಿದು, ಬಾನೆಲ್ಲ
ಮುಸುಕಿ, ಹಿಟ್ಟು ಸೋಸಿದ ಹಾಗೆ ಹನಿ ಜಿನುಗುತ್ತ
ಗಾಳಿಗೊಂದೇ ಸವನೆ ಉಸಿರು ಬಿಡದಂತೋಡಿ-
ಶ್ರಾವಣದ ಮೋಡದ ರೀತಿ: ಅವಸರದ ಪ್ರೀತಿ.

ಕಾರ್ತಿಕದಲ್ಲಿ ಪೂರ್ತಿ ಬೇರೆ ತರಹ. ಬೆಟ್ಟದ
ಹಾಗೆ ಗಟ್ಟಿಯಾಗಿ ಒಂದೆಡೆ ನಿಂತು, ಮೆಲ್ಲಗೆ
ಅರಳಿ, ಹಲವು ಬಗೆ ಶಿಲ್ಪದಲಿ ಕಡೆದ ಪ್ರತಿಮೆ-
ಗೆಲ್ಲುಪಮೆ? ಸಂಜೆ ಸೂರ್ಯನ ಬಣ್ಣದೋಕುಳಿಗೆ

ಅಪೂರ್ವ ಜೀವಕಳೆ, ನಿಮಿಷ ನಿಮಿಷಕ್ಕೊಂದು
ಭಂಗಿ. ಕೆಳಗೆ ಕಪ್ಪಗೆ ನೆಲಕೆ ಕಾಲೂರುವದು
ಮಳೆ. ಕತ್ತಲಾದಾದಂತೆ ಮಿಂಚು ಕೋರೈಸಿ
ಗುಡುಗುವದು: ದೂರದ ಗುಡಿಯ ನಗಾರಿಯಂತೆ.

ಕಣ್ಣು ತಣಿಸುತ ಮಣ್ಣಿಗುಣಬಡಿಸುವದು ಮೋಡ.
ಕಲೆಗಾಗಿ ಕಲೆಯುಂಟೆ? ಜನ ಬದುಕುವದು ಬೇಡ?

ಹಿರಿಯರ ಸಾವು

ಸಾವೆ? ತಳಮಳವೆಲ್ಲ ತಳಕಿಳಿದು, ನಿರಂಬಳ
ನಿಲುವು ಗೆದ್ದ ನಿಶ್ಶಬ್ದ ನೋವೆ? ಆಕಾಶವೆ
ಹೀಗೆ ಭೂಮಿಗೆಟಕುವ ತಾವೆ? ಉಳಿದೆಲ್ಲ ಇದ್ದು
ಯಾವುದೋ ಒಂದಿರದ ಶೂನ್ಯತಮದನುಭವವೆ?
ಜೀರ್ಣಗೊಂಡರು ದೇಹ ಜೀವ ತುಂಬಿರುವ ಹಿರಿ-
ಯರ ಕಾಪು. ಸಣ್ಣ ಕೋಣೆಯ ಕಣ್ಣು ಎಲ್ಲೆಡೆಗು.
ವಿಶ್ವವನು ಗುಬ್ಬಿಗೂಡಿನೊಳಗಿಟ್ಟ ಧೈರ್ಯ-
ತಪ್ಪಿದನಾಥ ಭಾವ; ತಪ್ಪು-ಒಪ್ಪಿನ ಕೊರಗು.
ಸಾವಿನಪ್ಪಿಗೆಗು ತಮಗು ಈ ತಂದೆ ತಾಯಂದಿರು
ತಮ್ಮ ಸರದಿಯ ಪಡೆದು, ನಮ್ಮನದರಿಂದ ದೂರ-
ವಿಟ್ಟವರು. ಈಗದರ ಬಿಸಿ ಗಾಳಿ ತಟ್ಟುವುದು-
ಹೊಸ ಅನುಭವಕೆ ಸಿದ್ಧಗೊಳಿಸಿದ ಭಾರ ಹಗುರ.
ಬದುಕು ಮಾಡುತ್ತಲೇ ಬಾಳುವೆಗೆ ಬೆಲೆಗಟ್ಟಿ
ಬಲು ಗಟ್ಟಿ ಎನಿಸಿ, ಕೊಟ್ಟರು ನಮಗೆ ಬುತ್ತಿಕಟ್ಟಿ.

●

ಬೇಂದ್ರೆ-ಪ್ರತಿಮೆ

೧

ಅಂತೂ ಇಂತೂ ನಿಲ್ಲಿಸಿಬಿಟ್ಟರು ಬಟ್ಟ ಬಯಲಿನಾಗ
ನೆನಪು ಹಾರದ್ಹಾಂಗ ಬೇಂದ್ರೆ - ಹಕ್ಕಿ ಮೂರು ವರುಷದಾಗ
ಇದರ ಧ್ವನಿಗೆ ಬೇರೆಲ್ಲಿದೆ ಹೋಲಿಕೆ? ಇಂದಿಗೂ ಹೊಳೆದಿಲ್ಲ
ಅಂತೆ ಏನೊ ಈ ಮೂರ್ತಿಯು ಕೂಡ ಆ ಮುಖ ಹೋತಿಲ್ಲ.

ಗದ್ದಿಗೆಗಲ್ಲಿನ ಉದ್ದಕು ಹೆಸರಿವೆ: ಐವತ್ತೇಳು ಮಂದಿ-
ನಗರಸಭೆಯು ನಗದವರನು ನಗಿಸುವ ಸೊಗಸಿಗೆ ಏನಂದಿ?
ತೊಂಬತ್ತನೆ ಈ ಜನ್ಮದಿನಕೆ ಅದು ಮೂವತ್ತೂರು ಕಡಿಮೆ-
ಎಲ್ಲ ಸಂಖ್ಯೆಗಳ ಶಂಕೆ ನಿವಾರಿಸಿ ನಿಂತ ಕವಿಯ ಹಿರಿಮೆ.

೨

ಐದು ದಾರಿಗಳು ಕೂಡಿದ ವರ್ತುಳದಂಚಿನಲ್ಲಿ ನಿಂತು
ಒಂದು ಕಣ್ಣು ತುಸು ಸಣ್ಣದು ಮಾಡಿ ನೋಟ ತೂರಿ ಬಂತು:
ಓಡುವ ವಾಹನ, ಅಡ್ಡಾಡುವ ಜನ, ಪೋಲೀಸನ ಕೈ, ಸೀಟಿ.
ಅಂತರಿಕ್ಷವನು ಭೇದಿಸಿ ಹೋಯಿತು ಸೌರವ್ಯೂಹ ದಾಟಿ.

ಇದೇ ಬಯಲು, ಆ ಅದೇ ಬಾನು, ನಡುವೆ ನೂರು ತಂತಿ
ಗಾಳಿಯಲ್ಲಿ ಜುಮ್ಮೆನ್ನುತ್ತಿರಲು ನೀ ಸುಮ್ಮನೇಕೆ ಕುಂತಿ?
ಏಳು, ಕೈಯ ಕುಣಿಸುತ್ತ ಹಾಡು ಉನ್ಮತ್ತಧಾಟಿ ಹಿಡಿದು
ಜಗದ ಮೂಲ ಚೈತನ್ಯ ಸೆಲೆಗೆ ತುಟಿಹಚ್ಚಿ ಹೀರಿ ಕುಡಿದು.
ಈ ನೆಲದ ಮಣ್ಣು, ಅದಕೊಂದು ಕಣ್ಣು, ಆ ತೊಟ್ಟು ಬಿಟ್ಟ ಹಣ್ಣು-

ಆದರ ರಸದಿ ಸಮರಸವು; ಜೀವದಾಟಕ್ಕೆ ಗಂಡು-ಹೆಣ್ಣು.
ಕಬ್ಬು ಗಾಣದಲಿ ಹಿಂಡಿ ಹಾಲು-ಕೊಪ್ಪರಿಗೆ ಕಾಸಿ ಬೆಲ್ಲ-
ಹೂವಿನೆದೆಯ ರಸ ಜೇನುತುಪ್ಪ ಹೇಗಾಯ್ತು? ಅವನು ಬಲ್ಲ.

ಪಂಚಲೋಹದೀ ಮೂರ್ತಿ ಪಂಚಭೂತಗಳ ಹುಡುಕುವಂತೆ
ಈ ಪ್ರಪಂಚದಾಳದಲಿ ಹೊಳೆದು ಹಾಡಿದವು ಎಲ್ಲ ಚಿಂತೆ.
ಸಿದ್ಧನಂತೆ ಎಲ್ಲದಕು ಮದ್ದು ಕೊಡಬಲ್ಲ ಮರುಳಸಿದ್ಧ
ಮರಣವನ್ನು ಮುದ್ದಿಸುತ ಮರಳಿ ಅರಳಿದನು ಭಾವಶುದ್ಧ.

●

ಜರ್ಬರಾ

ಗಡ್ಡೆ ಹೌದೊ, ಅಲ್ಲವೊ
ಒತ್ತಾಗಿ ಸುತ್ತ ಹರಡಿರುವ ಬೇರುಗಳ
ಗೇಣುದ್ದ ಜಾಲ.

ಬೇಸಗೆಯಲ್ಲಿ
ಮಣ್ಣಿನೊಳಗಿದ್ದು ಇಲ್ಲದಂತೆ.

ಮೊದಲ ಮಳೆ ಬಿದ್ದೊಡನೆ
ನೆನಹು
ಒಡಮುರಿದೆದ್ದು
ನೆಲದಿಂದಲೇ
ಹಿಡಿಯಷ್ಟು ಹಸಿರು ಗರಿ ಬಿಚ್ಚಿ
ನಡುವೆ ಒಂದೆರಡು ಮೊಗ್ಗೆ
ಉದ್ದ ಗಣೆ ತುದಿಗಿದ್ದು
ಬಿಚ್ಚುವವು
ಬಣ್ಣ ಬಣ್ಣದ ಛತ್ರಿ-
ಗಾಳಿಗೋಲಾಡುತ್ತ
ಹಗಲು-ರಾತ್ರಿ.

ಸದ್ದಿಲ್ಲದೆಯೆ
ಚೆಲುವು ಬಾವುಟವೆತ್ತಿ
ನಿತ್ಯ ಗೆಲ್ಲುವದು
ಜೀವನ ಶ್ರದ್ಧೆ-
ತುಂಬಿ ಬುದ್ಧಿ-ಭಾವದ ಕೊರತೆ.

ಜರ್ಬರಾ:
ಅಬ್ಬರವಿಲ್ಲದಪ್ಪಟ ಕವಿತೆ.

ಹೂವು ಹೊರಳುವವು

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ,-
ಇರುಳಿನ ಒಡಲಿಗೆ, ದೂರದ ಕಡಲಿಗೆ
ಮುಳುಗಿದಂತೆ, ದಿನ ಬೆಳಗಿದಂತೆ
ಹೊರ ಬರುವನು ಕೂಸಿನ ಹಾಗೆ.

ಜಗದ ಮೂಸೆಯಲಿ ಕರಗಿಸಿ ಬಿಡುವನು
ಎಲ್ಲ ಬಗೆಯ ಸರಕು;
ಅದಕೆ ಅದರ ಗುಣದೋಷಗಳಂಟಿಸಿ-
ಬಿಡಿಸಿಬಿಟ್ಟ ತೊಡಕು.

ಗಿಡದಿಂದುದುರುವ ಎಲೆಗಳಿಗೂ ಮುದ-
ಚಿಗುರುವಾಗಲೂ ಒಂದೆ ಹದ.
ನೆಲದ ಒಡಲಿನೊಳಗೇನು ನಡೆವುದೋ
ಎಲ್ಲಿ ಕುಳಿತಿಹನೊ ಕಲಾವಿದ.

ಬಿಸಿಲ ಧಗೆಯ ಬಸಿರಿಂದಲೆ ಸುಳಿವುದು
ಮೆಲು ತಂಗಾಳಿಯು ಬಳಿಗೆ.
ಸಹಿಸಿಕೊಂಡ ಸಂಕಟವನು ಸೋಸಲು
ಬಂದೆ ಬರುವುದಾ ಗಳಿಗೆ.

ಸಹಜ ನಡೆದರೂ ಭೂಮಿಯ ಲಯದಲಿ
ಪದಗಳನಿರಿಸಿದ ಹಾಗೆ.
ವಿಶ್ವದ ರಚನೆಯ ಹೊಳಹಿನಲ್ಲಿ
ಕಂಗೊಳಿಸಿತು ಕವಿತೆಯು ಹೀಗೆ.

ಪ್ರೀತಿ-ಸಂಬಂಧ

ಪ್ರೀತಿ ಸಂಬಂಧಗಳ ಸಡಿಲುಗೊಳಿಸದೆ ಹಿಡಿವ
ಕರುಳ ಬೆರಳಿನ ವಿರಳ ಕೌಶಲ್ಯ : ಜೀವನದ
ಮೌಲ್ಯ, ಕೂಡಿ ಬಾಳಲಿಕೆಂದೆ ಕಾದಾಟ. ಕದ
ಮುಚ್ಚಿ ತೆರೆವಷ್ಟರಲ್ಲಿ ಹದಗೊಳುವುದೇ ಜೀವ?
ನಮ್ಮ ಮಾತೇ ನಮಗೆ ಅಸ್ಪಷ್ಟ; ಸಂವಹನ-
ಕೆಲ್ಲಿದೆ ಹಾದಿ? ಶಬ್ದಕ್ಕೆ ತಡಕಾಡಿ ಮುರಿದ
ಸೇತುವೆ ಕಟ್ಟಿ ದಾಟಿದರೆ ಅಷ್ಟೆ ಸಂಮೋದ,
ಕೃತಿಯಲ್ಲಿ ಒಡಮೂಡಿ ಪ್ರೀತಿ ತಳೆವುದು ಮೌನ.
ಆಗ ಮಾತಿನ ರೀತಿ ಎಣ್ಣೆ-ಬತ್ತಿಗೆ ಜ್ಯೋತಿ
ಸಂತೋಷದಭಿವ್ಯಕ್ತಿ ಮುಕ್ತ ಸಂಬಂಧಕ್ಕೆ
ಶಕ್ತಿ. ಯೋಚಿಸದೆ, ಯಾಚಿಸದೆ ತನ್ನಷ್ಟಕ್ಕೆ
ಸಂಭವಿಸಿ ನಿತ್ಯದ ರೂಢಿ-ರಂಗು-ಸಂಗಾತಿ.
ತೆರೆದ ತೋಳಿಗೆ ಕುಸಿದವರನೆತ್ತಿ ತಬ್ಬುವುದು.
ಅಪೂರ್ಣತೆಯರಿತು ಆಜನ್ಮ ಸ್ವೀಕರಿಸುವುದು.

ಕೀಟಕ

ಕೀಟಗಳೆಂದರೆ ಎಲ್ಲಿಲ್ಲದ ಕುತೂಹಲ ನನಗೆ;
ಅವುಗಳ ಬಗೆಬಗೆಯ ಮಾಟ, ಆಟ, ಬೇಟ ಕೂಡ.
ಅಡ್ಡಾದಿಡ್ಡಿ ಕಡ್ಡಿಯಂತಹ ಕಾಲು, ವಿಚಿತ್ರ ನಡಿಗೆ ನೋಡ.
ಒಡೆದು ಕಾಣುವ ಶರೀರದ ಖಂಡ-ತುಂಡದ ತುದಿಗೆ
ಮೂಸಿ, ಮೆಲ್ಲನಲುಗುವ ಮೀಸೆ, ಅವಲೋಕಿಸುವ
ಗುಂಡು ಗಾಜಿನಂತಹ ಕಣ್ಣು, ವಿವಿಧ ಮೈ ಬಣ್ಣಗಳು.

ಉಳ್ಳಿಪರೆಯಂಥ ರೆಕ್ಕೆಗಳಲ್ಲಿ ಒಳ್ಳೊಳ್ಳೆ ನಕ್ಷೆ
'ಜಿರ್‌ಜಿರ್' ಜಿಗಿದು ಹಾರುತ್ತ, ನಮ್ಮ ಸುತ್ತುಮುತ್ತ
ತಮ್ಮ ಮಿತಿಯಲ್ಲೆ ನಡೆಸಿರುತ್ತವೆ ಸೃಷ್ಟಿ-ಸಮೀಕ್ಷೆ.
ಮಾನವನೊಂದಿಗೇ ಹುಟ್ಟಿ ಬೆನ್ನಟ್ಟಿ ಬಂದಿರಬಹುದು;
ತಮ್ಮ ಲೀಲೆಗೆ, ಹಾರುವ ಕಲೆಗೆ, ಒಂದಿಷ್ಟು ಕೀಟಲೆಗೆ
ಪರಸ್ಪರ ದಾಳ-ಧೂಳಿ, ಆಮೇಲೆ ತಂತಮ್ಮ ನೆಲೆಗೆ.

ಬೇರು ಕಡಿದು, ಕಾಂಡ ಕೊರೆದು, ಎಲೆತಿಂದು, ಕಾಳು ಜೊಳ್ಳಾಗಿಸಿ-
ಕಚ್ಚಿ, ಚುಚ್ಚಿ ರಕ್ತದ ರುಚಿ ನೋಡಿ ಹಾಡಿಕೊಂಡಿವೆ ಕೆಲವು.
ಹೊಲಸಿನಲಿ ಹುಲುಸಾಗಿ ಸಿಕ್ಕುತ್ತ ಹಾರುವ ನೊಣ-
ಜಾಡಿಸುವುದೆ ನಮಗೆ ಉದ್ಯೋಗ-ಹರಡುತ್ತ ರೋಗ.

ವೈವಿಧ್ಯದಲ್ಲಿ ಮಾನವನಿಗಿಂತ ಮಿಗಿಲು ಕೀಟ ಪ್ರಪಂಚ;
ದಿಗಿಲು ಹುಟ್ಟಿಸಬಹುದು ಅಗಾಧ ಸಂತಾನ ಶಕ್ತಿ.
ಬೆರಳು ಕಚ್ಚುವ ಹಾಗೆ ಬೆಳವಣಿಗೆ. ಇಲ್ಲವೆಂದಲ್ಲ
ಹಿತಶತ್ರುಗಳು, ಅಥವಾ ನಿರುಪದ್ರವಿ ಕ್ಷುದ್ರ ಜೀವಿಗಳು.
ಬಣ್ಣಬಣ್ಣದ ಚಿಟ್ಟೆ, ಹೂವಿನ ತಟ್ಟೆ ಗಾಳಿಯಲಿ ಹಾರಬಿಟ್ಟು,
ಜೇನ್ನೊಣದ ಹಿಂಡು ಬಂಡುಂಡು ಕಟ್ಟಿದ ಹುಟ್ಟು
ಎಟುಕದಂತಿದೆ ಇಂದಿಗೂ ಆ ಕಲೆಯ ಗುಟ್ಟು.

ಪಿಡುಗು ಕೀಟಗಳ ಹುಟ್ಟಡಗಿಸಲು ಹುಡುಕಿದೌಷಧ
ಕುಡಿದು ಬದುಕಿ ಬಲಗೊಂಡ ಮಾಯಕ.
ಹೊಸ ಬಗೆಯ ರಾಸಾಯನಿಕ, ಅವಕೆ ಕುಡಿದಂತೆ ಪಾನಕ
ಉಳಿದೆಡೆಗಳಲ್ಲಿ ಪಸರಿಸಿಬಿಟ್ಟ ವಿಷಧಾರೆ,
ಸೋಲು-ಗೆಲುವಿನ ಮಾನವ ಪ್ರಯೋಗಶಾಲೆ.

ಶೋಧನೆ, ಶೋಧನೆ ಇನ್ನೂ ಶೋಧನೆ-
ನಿಸರ್ಗದ ಮಡಿಲಿಗೇ ಹಿಂದಿರುಗಿದ್ದಾನೆ ಕೊನೆಗೆ,
ಪರಿಸರವ, ಜೀವಜಾಲದ ಏರುಪೇರಾಗಿಸದ ಕ್ರಮಕ್ಕೆ.

ವಂಶ ನಿರ್ವಂಶಗೊಳಿಸುವ ಸಾಹಸ ವ್ಯರ್ಥವೆನಿಸಿ
ಕೀಟಗಳಿಂದಲೇ ಕೀಟಗಳ ನಾಶ; ಜೈವಿಕ ನಿಯಂತ್ರಣಕ್ಕೆ

ನಡೆದಿಲ್ಲವೇ ಮತ್ತೆ ಮನುಷ್ಯನಿಂದಲೇ ಮನುಷ್ಯನ ಕೊಲೆ?
ಜೀವಕ್ಕೆಲ್ಲಿದೆ ಬೆಲೆ? ನನ್ನೆದುರು ಉರಿವ ಮೇಣಬತ್ತಿಗೆ
ರೆಕ್ಕೆಬಡಿದು ಸುಟ್ಟುಕೊಂಡಿದೆ ಪತಂಗ: ಸುತ್ತೆಲ್ಲ ಕತ್ತಲೆ.

•

ಶ್ರಾವಣದ ಒಂದು ಸಂಜೆ

ಬಾನೆಲ್ಲ ಮೋಡದ ಮುಸುಕು, ಮಬ್ಬುಗತ್ತಲು ಕೋಣೆ
ಸಣ್ಣಗೆ ಹಿಡಿದು ಬಿಟ್ಟ ತಂತು ತುಂತುರು ಮಳೆ.
ದುರಸ್ತಿ ಕಾಣದ ರಸ್ತೆ-ಗುಂಡಿಗಳ ತುಂಬ ರಾಡಿ ನೀರು.
ಗಾಳಿ ಬೀಸಿ, ಮೋಡ ಚದುರಿದರೆ ಒಂದಿಷ್ಟು ಹೂ ಬಿಸಿಲು.
ಕೋಣೆಯ ಮೂಲೆಗಳಲ್ಲಿ, ನನ್ನೆದುರಿನಲ್ಲೆ
ರಾರಾಜಿಸುತ್ತಿರುವ ಜೇಡಬಲೆ.
ಕಸಗುಡಿಸುವಾಗ ಕಾಣಿಸದಿರುವ ಪುರಾತನ ಕಲೆ.

ಗಾಳಿಗೆ ಚೌರಿ ಬೀಸಿ ಬೀಸಿ ಸೋತ ತೆಂಗಿನ ಗರಿ
ವರುವರುಷ ಮೇಲಕ್ಕೇರುತ್ತಲೇ ಇದೆ ತೇರಿನ ಮರ
[ಆಕಸ್ಮಾತ್ ಬಿದ್ದು ಬಿಟ್ಟರೆ?]
ತುತ್ತತುದಿಯಲ್ಲಿ ಹಾಯಾಗಿ ಕುಳಿತ ಬಣ್ಣದ ಹಕ್ಕಿ.
ಬಯಲಲ್ಲಿ ಶ್ರಾವಣದ ಹುಲ್ಲು ಮೇಯುವ ಎಮ್ಮೆಗಳ ಹಿಂಡು.
[ಮನೆಯಲ್ಲಿ ಗೌಳಿಯ ಹಾಲು ನೀರೆ.]
ಮುಂದಿನೆರಡೂ ಕಾಲು ಮೇಲೆತ್ತಿ ಬೇಲಿಗೆ-ಗಪಗಪ ತಿನ್ನುವಾಡು,
ಎದ್ದು ಓಡಿಸಿದಾಗ ಕದ್ದು ನೋಡುತ್ತಾನೆ ಕಾಯುವ ಹುಡುಗ.
ಅರ್ಧತೊಯ್ದಿರುವ ಅಂಗಿ, ಚೊಣ್ಣ, ಅವನಿಗಿಂತಲು ಉದ್ದಬಡಿಗೆ.

ಹೂವಿನ ಗೆಜ್ಜೆ ಕಟ್ಟಿ ನಿಂತ ಗಿಡ್ಡ ಗೌರಿ ಹೂ-ಗಿಡ ಸಾಲು.
ಹಿಡಿಹಿಡಿ ಉದುರಿ ಬಿದ್ದಿವೆ ಮೃದುವಾದ ಪಕಳೆ-ಮಣ್ಣುಪಾಲು.
ರಾತ್ರಿಯಲ್ಲರಳಿ ಮುಂಜಾನೆ ಮುದುಡಿದ ಬ್ರಹ್ಮಕಮಲ
ಮುಳ್ಳು-ಕಳ್ಳಿ-ಕುಂಡಗಳಲ್ಲಿ ತುಂಬಿದ ಕಮಂಡಲ.
ದಾಳಿಂಬೆ ಗಿಡದಲ್ಲಿ ನಿತ್ಯ ಇಣಚಿಗಳ ಕಾಟ,
ಅರ್ಧಮರ್ಧ ತಿಂದು ಟೊಕಳೆ ಉಳಿಸಿದ ಹಣ್ಣು-ಕಾಯಿ.

ಹೊರಗೆ ಹೊರಟಾಕ್ಷಣವೆ
ಹೇಳಿ ಕಳಿಸಿದ ಹಾಗೆ ಹನಿದು ಜಿನುಗುಡುವ ಮಳೆ,
ಹೇಗೋ ಬಸ್ಸು ಹಿಡಿದು ಪೇಟೆಯವರೆಗೆ ಹೋದಾಗ-
ನನ್ನ ಹಾಗೇ ಎಲ್ಲರೂ ಗಡಿಬಿಡಿಯಲ್ಲಿ ತಿರುಗಿ ಮರಳುವವರೆ,
ಆದರೆ,
ಅಲ್ಲೊಂದು ಕಡೆ ತಟಸ್ಥವಾಗಿದ್ದಾರೆ ಸಾಲಾಗಿ ಹೆಣ್ಣು-ಗಂಡು,
ಮಕ್ಕಳು-ಮರಿ.
ಚಿಮಣಿ ಎಣ್ಣೆಗೆ ಕಾದು ರಸ್ತೆಯುದ್ದಕೂ.
ದೂರದರ್ಶನದಲ್ಲಿ ಓಡುತ್ತಾರೆ ಅವರು ಪಂಜು ಹಿಡಿದು
ಇವರು ಸೋತು ನಿಂತಿದ್ದಾರೆ ಕೈಯಲ್ಲಿ ಖಾಲಿ ಡಬ್ಬಿ ಹಿಡಿದು.
'ಮೇರಾ ಭಾರತ್ ಮಹಾನ್'
ಬೀದಿ ದೀಪಗಳಲ್ಲಿ ಕೆಲವಾದರೂ ಹತ್ತಿಕೊಂಡಿವೆ.

•

ಶಿಶಿರದಲ್ಲಿ ಬಂದ ಸ್ನೇಹಿತ

ಚಳಿಗಾಲದಲ್ಲಿ ಒಬ್ಬನೇ ಬೆಚ್ಚಗೆ ಹೊದ್ದು ಕುಳಿತಾಗ
ಮುಪ್ಪು ಮಾತಾಡಿಸಿತು, ತೀರ ಹತ್ತಿರಕೆ ಬಂದು:
"ಏನಪಾ, ಎಲ್ಲ ಸೌಖ್ಯವೆ? ಇತ್ತೀಚೆ ಮತ್ತೆ ಬರವಣಿಗೆ?
ಷಷ್ಟ್ಯಬ್ಧಿಗೂ ನಾನು ಬಂದಿದ್ದೆನಲ್ಲ, ನೆನಪಿರಬಹುದು.

ವಿಶ್ರಾಂತ ಜೀವನದಲ್ಲು ಬಿಡುವಿಲ್ಲವೆಂದರೆ ಹೇಗೆ?
ಮಾತಾಡು, ಭಾಷಣ ಬಿಟ್ಟು ಬೇರೆ ವಿಷಯ;
ಮಕ್ಕಳೆಲ್ಲರು ದೂರ, ಮನೆಯಲ್ಲಿ ಇಬ್ಬರೇ ರಾಜರಾಣಿಯರು-
ತಮಾಷೆಗೆಂದೆ ಮಾರಾಯ, ಕುಡಿದಿಲ್ಲವೆ ನಾನೂ ಕಷಾಯ?

ವಸಂತದ ಚಿಗುರು, ಮೊಗ್ಗುಗಳ ಹಿಗ್ಗು ಯಾರಿಗೆ ಬೇಡ?
ಅಂಬೆಗಾಲು, ಅಚ್ಚರಿಗಣ್ಣು, ತೊದಲು ಮಾತು;
ನೋಡ ನೋಡುವಷ್ಟರಲಿ ಕರಗಿ ಹೋಗಿತ್ತು ಪೆಪ್ಪರಮಿಂಟು-
ಬಿದ್ದ ಹಲ್ಲಿನ ಜಾಗದಲ್ಲಿ ನಾಲಗೆಯ ನಂಟು.

ವೈಶಾಖಕ್ಕೆ ಯೌವನದ ಸೊಕ್ಕು, ಬಿಸಿಲೂ ಪ್ರಖರ-
ಮುಂಗಾರಿನೊಡಲ ಮಿಂಚು, ಮಳೆಯ ರಭಸ;
ಬೇಗೆಯಿಲ್ಲದ ಬಿಸಿಲ ಹದ ಈಗ, ಉದ್ವೇಗವಿಲ್ಲದ ನಡಿಗೆ
ಮುಗಿದ ಸುಗ್ಗಿಯ ಕೊಡುಗೆ; ನಕ್ಷತ್ರಗಳ ಮಂದಹಾಸ.

ಹಂಪುಗಾಲಕ್ಕೆ ಹಣ್ಣಿಗೆ ಬೇರೆ ಬಣ್ಣ, ರುಚಿಯೂ ಅಷ್ಟೆ
ಮಾಗಿದನುಭವದ ಕಳೆ ಮುಖದ ಮೇಲೆ;
ಬದುಕಿನಿತಿಮಿತಿಯನರಿತ ಸಂತೃಪ್ತಿ, ನಿಶ್ಚಿಂತ ನಿಲುವು
ಹೊಸ ಚೆಲುವಿನಾವಿಷ್ಕಾರ, ಸುಕುಮಾರಲೀಲೆ.

ಹಿರಿಯನೆಂದೆನಿಸಿಕೊಳ್ಳುವದು ನಿನ್ನಂಥವಗೆ ಸ್ವಲ್ಪ ಕಿರಿಕಿರಿಯೆ
ಅದಕಾಗಿ ಸಲಿಗೆ ಮೊಮ್ಮಕ್ಕಳಿಗೆ ಅಜ್ಜನೊಡನೆ;
ಶಿಶಿರದ ಬಸಿರಿನಲ್ಲೆ ಚೈತ್ರ ಕಣ್‌ತೆರೆವ ಜೀವದ ಕುಸುರು
ಒಣಗಿರುವ ಕೊಂಬೆತುದಿಯಲ್ಲಿ ಹಕ್ಕಿಯಾಲಾಪನೆ.

ಸಂಜೆಗೆಂಪಿನ ಮುಂದೆ ಬದುಕಿನ ಗುಟ್ಟು ಬಿಚ್ಚಿಡುವಂತೆ
ಬೆಟ್ಟ, ಸ್ತಬ್ಧ ಗಿಡಮರ, ನಿಶ್ಶಬ್ಧ ಹಕ್ಕಿ-ಸಾಲು;
ಕಾಡಿನಂಚಿಗೆ ಕಣ್ಣು ಮುಚ್ಚಾಲೆ ಮಿಂಚು-ಹುಳ
ಹುಬ್ಬುಗೈಹಚ್ಚಿ ನೋಡುವ ಚಂದ್ರ, ಹಿಡಿದು ಲಾಂದ್ರ.

ಬೆಳಗಿನ ವಿಹಾರದಲಿ ಮೈಕೊರೆವ ಚಳಿ, ಮೂಡ ಗಾಳಿಯ ಮೊರೆತ-
ನಗುನಗುತ ಹಣ್ಣೆಲೆಗಳುದುರಿ ಚದುರುವಾಟ;
ಜೀವನ ಲಯದ ಸ್ವೀಕಾರದಲ್ಲಿದೆ ಸೊಗಸು; ಇದೆಲ್ಲಿಯ ತರಲೆ
ಎನಬೇಡ, ನಾಸಿಸ್ನು ಬರಲೆ? ಗೊತ್ತಲ್ಲ ನಾ ಸ್ವಲ್ಪ ಒರಟ".

ಚಹವ ಗುಟುಕರಿಸುತ್ತ ಮೇಲೆದ್ದ ಬಾಲ್ಯದ ಗೆಳೆಯ
ನಕ್ಕು, ಕೈಕುಲುಕಿ ದಟ್ಟಮಂಜಿನಲಿ ಕರಗಿಹೋದ.

●

ಕವಿತೆ

ಇರುಳು
ನಕ್ಷತ್ರ ಮಿನುಗುತ್ತವೆ-
ಎಂದರೆ,
ಬೆಳಕು ಬಾಯ್‌ಬಿಟ್ಟು, ತುಟಿಗೆ ತುಟಿ
ಹಚ್ಚದೆ ಮಾತಾಡಿಕೊಳ್ಳುತ್ತವೆ. ಕವಿತೆ
ಕಿವಿಗೊಟ್ಟು ಕೇಳುತ್ತದೆ.
ಮಂದ ಬೆಳಕಿನಲ್ಲಿ ಗಿರಿ ಶಿಖರ
ಗಿರಿಗಿರಿ ಬುಗುರಿಯಾಡಿ
ಇದ್ದಲ್ಲೆ ನಿದ್ದೆ ಹೋಗುತ್ತವೆ.
ಗಿಡಮರಗಳು ಆಕಾಶದಲ್ಲಿ
ಬೇಕಾದ ಹಾಗೆ ಹಾರಾಡಿ
ಬಂದು ತೂಕಡಿಸುತ್ತವೆ.
ಮರೆಯಲ್ಲಿ ನಿಂತು ಕವಿತೆ
ಬಟ್ಟಲುಗಣ್ಣು ತೆರೆದು ನೋಡುತ್ತದೆ.

ಹಳ್ಳ-ಹೊಳೆ ನಿರಂತರ ಹರಿದು
ಕಡಲ ಒಡಲ ಹಾಯ್ದು
ಮಿಂಚಿ, ಗುಡುಗಿ, ಕಾವ್ಯಮೇಘದಮೋಘ ಸಾಲು
ಅನುರಣಿಸಿ ಮಣ್ಣರಳಿಸುತ್ತದೆ.

ಹೂ-ಮಕ್ಕಳ ನಗೆಯರಳಿ, ಕೊಳದಲ್ಲಿ
ಮೀನು ಹೊಡಮರಳಿ;
ಬಾಗಿ ನೇಗಿಲು ಹೊಡೆದು ಇಳಿದ ಬೆವರಿಗೆ
ಮುತ್ತು-ಕಾಳು ತೆನೆ ಹಿಡಿದು
ಕವಿತೆ ಹೊಳೆಯುತ್ತದೆ.

ಕಸದ ತೊಟ್ಟಿಗೆ ಹಸಿವೆ
ಮುಗಿಬಿದ್ದು ಅನ್ನದಗುಳನು ಹೆಕ್ಕಿ
ತೆಗೆವಾಗ-
ಮಂತ್ರಿಗಿಂದ್ರ ಪದವಿಯ ಭೋಗ;
ಕವಿತೆ ತುಟಿ ಕಚ್ಚಿ ತಲೆ ತಗ್ಗಿಸುತ್ತದೆ.

ಹಲವು ದಾರಿಗೆ ಹಲವು ಗುರಿ ನೇರ-ವಕ್ರ,
ಅತಿಕ್ರಮಿಸಿದ ವೇಗ ಎಡರು-ತೊಡರಾಗಿ
ಅಪಘಾತ; ಲಯ ತಪ್ಪಿಹೋದ ಕವಿತೆ
ಮಾನವ ಭಗ್ನ ಪ್ರತಿಮೆ.

ಕಣ್ಣಲ್ಲಿ ಕಣ್ಣಿಟ್ಟು ಕಡೆದ ಶಿಲಾ-
ಬಾಲಿಕೆಯರೆದ್ದು ಬರುವಂತೆ
ವಾದ್ಯವೃಂದೋನ್ಮಾದವಿಳಿದಾಗ, ಬಳಿಗೆ
ನುಸುಳಿತು ಕಾವ್ಯದೇಕತಾರಿ.

ಬಟ್ಟ ಬಯಲಿನ ನಡುವೆ ಬೆಟ್ಟ-
ಬಂಡೆ ಅಖಂಡ ಗೊಮ್ಮಟ ಕಲೆ;
ನೆಲದಿಂದ ಮುಗಿಲವರೆಗೂ
ಕವಿತೆ, ಬರಿಬತ್ತಲೆ.

•

ಒಂದು ಬೆಳಗು

ನಸುಕಿನಲ್ಲಿ ಎಲ್ಲರಿಗಿಂತ ಮೊದಲೇ
ಎಲ್ಲಿಂದಲೋ ಕೂಗಿದ್ದು ಕೋಗಿಲೆಯೇ-
ಎಂದು ಕಿವಿ ನಂಬದಾಯ್ತು.
ಮನೆಯ ಪಕ್ಕದಲಿ ಹಕ್ಕಿ ಚಿಲಿಪಿಲಿಗುಟ್ಟಿದಾಗ-
ನಾಭಿ ಮೂಲದಿಂದ ಕಹಳೆಯ ಪಾಂಗಿನಂತೆ ಹೊಮ್ಮಿದ 'ಕುಹೂ'
ಅದೇ ಅದೇ ಎಂದು ಖಾತ್ರಿಯಾಯ್ತು.

ಮಬ್ಬುಗತ್ತಲೆಯನ್ನು ಭೇದಿಸಿ ನಮಾಜಿನ ಆವಾಜು
ಆಕಾಶಕ್ಕೇರಿ ಇಳಿದಾಗ,
ದೂರದಿಂದ ಧಾವಿಸಿ ಬರುತ್ತಿದ್ದ ರೈಲಿನ ಸಿಳ್ಳು
ದಿಗಂತದ ನಸುಗೆಂಪನ್ನು ತಿದ್ದಿ ತೀಡಿ
ದೀರ್ಘರೇಖೆಯನ್ನೆಳೆದಾಗ,
ಸಂಧಿಕಾಲಕ್ಕೆ ಪ್ರಯಾಣ ಸಮೀಪಿಸಿತ್ತು.

ನಗರದ ಕೋಳಿಗಳಿಗೆ
ಬೀಸಾಗಿ, ಪಟಪಟ ರೆಕ್ಕೆ ಬಡಿದು
ಕೊರಳೆತ್ತಿ ಕೂಗುವಭ್ಯಾಸ ಮರೆತೇ ಹೋಗಿದೆ.
ಎಡೆಬಿಡದೆ ತತ್ತಿ ಇಡುವುದೊಂದೇ ಅವಕ್ಕೆ
ಮನುಷ್ಯ ವಹಿಸಿಕೊಟ್ಟಿರುವ ಕುಟುಂಬ ಯೋಜನೆ.
ಅದಕ್ಕಾಗಿ ಪಂಜರದಲ್ಲೆ ಪೌಷ್ಟಿಕಾಹಾರ, ಜೋಪಾಸನೆ.

ಕೋಗಿಲೆಯೊಂದು ಮಾತ್ರ ಇದುವರೆಗೆ
ಯಾರ ಕೈಗೂ ಸಿಗದೆ
ಸ್ವಚ್ಛಂದ ಹಾಡಿ ಬದುಕುತ್ತಿರುವುದೇ ಆಶ್ಚರ್ಯ
ಕೋಗಿಲೆ-ನಮಾಜು-ರೈಲು

ಕಲೆ-ಧರ್ಮ-ವಿಜ್ಞಾನದ ಪೈಲು
ಪರಸ್ಪರ ಸಂಧಿಸಿ, ಸ್ಪಂದಿಸಿ ದಿನವೂ
ಹೀಗೆ ಬೆಳಗಾದರೆ?-
ಎಂದು ಪ್ರಶ್ನೆಯ ಬೆತ್ತ ಹಿಡಿದು
ಬೆಳಗಿನ ವಿಹಾರಕ್ಕೆ ನಾನು ಹೊರಬಿದ್ದೆ.

ಶಬ್ಧ-ನಿಶ್ಶಬ್ಧ

'ನಾ' 'ನೀ' ಎಂದು ಹಿಗ್ಗಿ, ನುಗ್ಗಿ ಬರುತ್ತಿದ್ದ
ನನ್ನ ಅಂತಃಕರಣದ ಮುಗ್ಧ
ಸ್ನಿಗ್ಧ ಶಬ್ದಗಳೆ, ಶೂನ್ಯಕ್ಕೆ
ಕೊಂಬುಕೊಟ್ಟು, ಜಗ್ಗಿ ಕೆಳಗಿಳಿಸಿದಿ 'ರಾ'?
ಮ 'ಮ' ಕಾರಕ್ಕೆ ಈಡಾಗಿ
ಕಲ್ಲು ಇಟ್ಟಿಗೆ ನಡುವೆ ಎದೆಯ ಸೊಲ್ಲಡಗಿ
ಕಣ್ಣುಪಟ್ಟಿಯ ಕಟ್ಟಿ ಓಡಿಸಿದ ರಥ-ಪಥದ
ಚಕ್ರಕ್ಕೆ ಸಿಕ್ಕು ಚೀತ್ಕರಿಸಿ
ನೋಡ ನೋಡುತ್ತ ಹಾಡೇ ಹಗಲು
ಕವಿದ ಕತ್ತಲು;
ಬೇತಾಳಗಳ ಪದಾಘಾತಕ್ಕೆ
ರಾಮಾರಗತವಾಗಿ ಹೋದಿರಾ?

ಇಲ್ಲ-
ಓಂಕಾರದ ಶಂಖದಿಂದ ನಾಭಿಮೂಲಕ್ಕಿರಿದು
ಕರುಳು ಹೊರದೆಗೆದು, ಜೈಕಾರಗೈದ
ಸಾಧು ಸತ್ಪುರುಷರ ಕಂಡು
ಮರಾ ಮರಾ ಮರಾ ಮರುಗಿದಿರಾ?

ಸೇಡಿನ ಹೋಮ ಹವನಕ್ಕೆ ಪ್ರೀತಿ, ಮೈತ್ರಿಯ ಕವನ
ಎಲ್ಲಾ ಆಹುತಿಯಾಗಿ ಹೋದ-
ವಲ್ಲಾ!
ತಿಳಿವಿನ ತುಪ್ಪ ಸುಟ್ಟ ಕಮಟು ವಾಸನೆಯಲ್ಲಿ
ಶ್ವಾಸೋಚ್ಛ್ವಾಸಕ್ಕೆ ಕೂಡ ದಾರಿಯಿಲ್ಲ.

ಗೂಢ ಗುಮ್ಮಟದೊಳಗೆ
ಗುಟುಕಿಟ್ಟು, ಪಟಪಟ ರೆಕ್ಕೆ ಬಡಿವಾಗ
ಬಿಳಿ ಪಾರಿವಾಳ,
ಸುತ್ತಿಗೆ ಹಿಡಿದು ಬಡಿದು ಕತ್ತರಿಸಿ
ತಾಯ ಮೊಲೆತೊಟ್ಟು
(ಮಕ್ಕಳಿವರೇನಮ್ಮ ... ಮಕ್ಕಳಿವರೇನಮ್ಮ)
ಚರಿತ್ರೆಯ ಪುಟಪುಟದಲ್ಲಿ ಮತ್ತೆ
ರಕ್ತ ತಟಗುಟ್ಟಿ
ಸರಯೂ ನದಿಯು ಮುಂದೆ ಹರಿಯಲಿಲ್ಲ.

ಚೂರಿ ಇರಿತಕ್ಕೆ ಕುಸಿದ ನಿಶ್ಯಬ್ಧ ಶಬ್ಧಗಳೆ
ಮೆಲ್ಲಗೆ ಎತ್ತಿ, ಗಲ್ಲಕ್ಕೆ ಒತ್ತಿಕೊಳ್ಳುತ್ತೇನೆ.
ಅಕ್ಷರಕ್ಷರದಲ್ಲಿ ಬೆಸೆದು, ಭಾಷೆ
ಕೊಟ್ಟಿದ್ದೀರಿ ಭಾವಕ್ಕೆ
ಹೃದಯ ಸಂವಾದಕ್ಕೆ, ಅನುಭಾವ ಗೀತಕ್ಕೆ
ಈಗ ಏತಕ್ಕೆ ಮೂಕವಾಗಿದ್ದೀರಿ?

ಬೆಂಕಿಯಾರಿಸಿ, ಕಣ್ಣೀರನೊರೆಸಿ, ಅಕಲಂಕವಾಗಿ
ಬನ್ನಿ, ಬನ್ನಿ ಕನಸುಗಳೇ ಮರಳಿ ತಲೆಯ ಗುಮ್ಮಟಕೆ
ಕಾದಿರುವ ಹೃದಯ ಕಮ್ಮಟಕೆ;
ಸೌಹಾರ್ದದ ಮುದ್ರೆ ಪಡೆದು ಚಲಾವಣೆಯಾಗಿ
ದೇಶದುದ್ದಗಲಕ್ಕು ಸಂಚರಿಸಿ
ಸಮ-ರಸ-ಧ್ವನಿಯಾಗಿ.

ನನ್ನವೇ ನಾಲ್ಕು ಶಬ್ಧ

ಇಷ್ಟೊಂದು ಸದ್ದುಗದ್ದಲದಲ್ಲಿ ಒದ್ದಾಡು-
ತಿರುವಾಗ ಎಲ್ಲಡಗಿ ಮುದ್ದೆಯಾಗಿರಬಹುದು
ನನ್ನವೇ ನಾಲ್ಕು ಶಬ್ಧಗಳು? ಕೋಶಗಳನೊಡೆದು
ಹೊಸ ದೇಶಿಯಲಿ ಬಣ್ಣ ಬಣ್ಣದ ರೆಕ್ಕೆ ಪಡೆದು
ಹೊರಟಿದ್ದ ಸ್ಥಾಯಿ-ಸಂಚಾರಿಗಳು? ಎಲ್ಲ ಬಗೆ
ಹೂವುಗಳ ಸಖ್ಯದಲಿ ನೋವು-ನಲಿವಿನ ಗಾಳಿ-
ಹಾವು ಹರಿದಾಡದಿಹ ಜಾಗವೆಲ್ಲಿದೆ ಹೇಳಿ-
ಬೀಸಿ ಪರಿಶುದ್ಧಗೊಳಿಸುವ ಪರಿಮಳದ ಪರಿಗೆ.

ರಸ್ತೆ ಹಿಡಿಸಲಾರದೆ ಬಿಡುವಿಲ್ಲದೋಡಾಡು-
ತಿರುವ ಕುರುಡು ಚಕ್ರದ ನಡುವೆ ಸಿಕ್ಕ ಬೆಕ್ಕಿನ
ಮರಿಯನೆತ್ತಿ ತರಹೋದ ಕವನವೆ ಜೋಪಾನ:
ಹದ್ದು ಹಾರಾಡುವಾಕಾಶದೆಡೆಗೂ ನೋಡು.
ಮೋಡ ಮಳೆಗರೆಯಲಿ, ಆಮೇಲೆ ಬರಲಿ ಸೂರ್ಯ
ಈಗ ಪದ ಪಂಕ್ತಿಯಲಿ ಬೀಜ ಬಿತ್ತುವ ಕಾರ್ಯ.

●

ಮುಗಿಯದ ಹಾಡು*

ಏಳು ಹತ್ತಲೆ ಎಷ್ಟು? ಮಗ್ಗಿ ಒಪ್ಪಿಸಿ ಆಗ
ನಾ ಪಾಸಾಗಿದ್ದೆ. ಮುಂದಿನ ಇಯತ್ತೆಗೆ ಬಿದ್ದೆ.
ಸಾವಕಾಶ ಎದ್ದೆ. ಸಿಕ್ಕದ್ದು ಓದಿದೆ, ಬರೆದೆ.
ದಕ್ಕಿದ್ದು ಅಷ್ಟೊ ಇಷ್ಟೋ. ಮಿಕ್ಕಿದ್ದು ಈಗ
ಈ ಬದುಕು, ಈ ಬಾಳೆ, ಚಿರಂತನ ಮಂಥನ.
ಅಂತsನ ಈ ಹೊತ್ತಿನೊಳಗ ನಾವೆಲ್ಲ ಹೀಂಗ
ಕೂಡೀವೆಲ್ಲ; ಮರೆತು ಹಿಂದಿನೆಲ್ಲ ಜಂಜಾಟ-
ಬೇವು-ಬೆಲ್ಲ. ಇದೂ ಒಂದು ಹೊಸ ಯುಗಾದೀನs
ಬಚ್ಚ ಬಾಯಿಲೆ ನಕ್ಕೋತ, ಹಣ್ಣೆಲಿ ಹಾಂಗ
ಗಾಳಿಗೆ ತೇಲ್ತ, ಚಿಗುರು-ಮಗ್ಗಿ ಹಿಗ್ಗಿನ್ಯಾಗ
ನೆಲಕಿಳಿದು, ಮುಗಿಲಿಗೆ ಕೈ ಮುಗಿತಾವ. ಯೋಗ
ಕೂಡಿಬಂದರ ಪಾಡು; ಹಾಡು ಮುಗಿಯೂದಿಲ್ಲ-
ಅವೂ ನಿನ್ನ ಬಿಡೂದಿಲ್ಲ. ಮೊದಲs ಸೂಕ್ಷ್ಮ ಪ್ರಕೃತಿ
ಈ ಜಗತ್ತು ಎತ್ತಿ ಹಿಡಿತಲ್ಲ, ಎಂಥ ಸುಕೃತಿ!

●

* ಎಪ್ಪತ್ತರ ಅನಿಸಿಕೆ

ಅತ್ತಿಕೊಳ್ಳದಲ್ಲಿ ಸೂರ್ಯ

ಬೇಂದ್ರೆ 'ಬೆಳಗಿ'ನ ಅತ್ತಿಕೊಳ್ಳದಲ್ಲಿ ಸಾವಿರ
ಮಂದಿ ಬಡಬಗ್ಗರು ಮನೆಕಟ್ಟಿ ಅಲ್ಲಲ್ಲಿ
ಗುಡಿಕಟ್ಟಿ, ಸುತ್ತು ಗುಡ್ಡಗಳ ಇಳಿಜಾರಿನಲ್ಲಿ
ಸಂಸಾರ ಹೂಡಿ, ದಸದಸ ತೇಕಿ ಮೇಲೇರ-
ಬಯಸುವ ಬಸ್ಸಿನೊಡನೆ ಸೆಣಸಾಡಿ-ಸಂಚಾರ.
ಮೂಡಲ ಮನೆಯ ಬಾಗಿಲ ತೆರೆದು, ಸೂರ್ಯ ಹಣಕಿ-
ದರೆ, ನಳದಲ್ಲಿ ಮುತ್ತಿನ ಹನಿಗೆ ಕೊಡಗಳು ಬಾಕಿ.
ಗಡಬಡಿಸಿ ಶ್ರಾವಣದ ಮೋಡಗಳ ಸಮಾಚಾರ
ಕೇಳಿ, ನಡುನೆತ್ತಿಗೈತಂದು, ಕೊಳಚೆ ಕೊಂಪೆಗೆ
ಮುಖವ ಸಿಂಡರಿಸಿ, ಹಿಂದಿನ ಗಂಧರ್ವ ಸೀಮೆ
ನೆನೆದು, ಗಿಡಗಂಟೆಗಳ ಕೊರಳ ಹಾಡಿನ ಭ್ರಮೆ-
ಯಲ್ಲಿ ಸಂಜೆಗೆ ಬಳಿದ ರಾಗ ಮುಗಿಲ ಮಾರಿಗೆ.
ಕಾಂಕ್ರೀಟು ಕಾಡಿನಲಿ ಕಣ್ಣೆ ಬಡಿಯುವ ಬಣ್ಣ
ಅರಿಯದಳವಿಗೆ ಟೀವಿಯಲಿ ಮೈದೋರಿತಣ್ಣ.

●

ಹಂಗರಹಳ್ಳಿ

ಹಂಗರಹಳ್ಳಿ! ಹ್ಯಾಂಗ ತಡಕೊಂಡೆ ಕರುಳಿನಲಿ
ಉರಿಸಿದ ಕೊಳ್ಳಿ? ಕಲ್ಲೆದೆಗಳೇ ಜಲ್ಲಿ ತುಂಬಿ
ಉರುಳಿಸಿದ ಕುರುಡು ಚಕ್ರದ ಲಾರಿ ಮೈದುಂಬಿ
ಹಸಿರು ಬೆಟ್ಟದ ನಡುವೆ ಕೋರೆಹಲ್ಲಿನ ಕ್ವಾರಿ.
ಸುತ್ತ ಸುತ್ತಿಗೆ ಪೆಟ್ಟು, ಕುತ್ತುಸಿರು, ಕಬ್ಬಿಣದ
ಸರಪಳಿ ಬಿಗಿದ ಕಾಲು, ಹುರುಪಳಿಸಿಹೋದ ಕೈ
ತೆರಪಿರದೆ ಬೆವರಿಳಿದು ಹಿಪ್ಪೆಯಾಗಿರುವ ಮೈ
ನೆನಪು ಕುಟುಕಿದೆ ಸ್ವಾತಂತ್ರ್ಯ ಸುವರ್ಣೋತ್ಸವ-
ನೃತ್ಯ, ಸಂಗೀತ, ಬಾಣ-ಬಿರುಸು ಮೆರವಣಿಗೆ-
ಇಲ್ಲಿ ಕತ್ತಲೆ ಕೂಪ, ಸದ್ದಿರದ ಸಿಡಿಮದ್ದು
ಬತ್ತಲೆಯಾಗಿ ಬಾಳು ಒಳಗೊಳಗೆ ಬಿಕ್ಕಿದ್ದು
ಕೇಳಿಯೂ ಕೇಳಿಸದೆ, ಕಂಡರೂ ಕಾಣಿಸದೆ.
ದಾಟಿ ಹೋಗಿದೆ ನೂರು ಕೋಟಿಯಲಿ ಜನಸಂಖ್ಯೆ
ಉಳಿದದ್ದು: ಮನುಷ್ಯರೆಲ್ಲಿದ್ದಾರೆನ್ನುವ ಶಂಕೆ.

●

ತ್ರಿಳಿ

ಮಗ ಮಗಿಸುವ ಹೂವ ಸುತ್ತ ಧಗಧಗಿಸುವ ಉರಿ
ಶುಭ ನಡಿಯುವ ಹಕ್ಕಿಗಳಿಗೆ ಬಂದೂಕಿನ ಗುರಿ.
ಬಾಂಬಿಗಿಂತ ಬಲವತ್ತರ ದ್ವೇಷದೊಂದು ಕಿಡಿ
ಒಳಗೊಳಗೇ ಹೊತ್ತಿ ಹೊಗೆದು ಬತ್ತಿ ಬಾಳ ಕುಡಿ.

ಕೊರೆ ಕೊರೆದರು ಭೂಮಿತಳಕೆ ಸಿಗದು ನೀರ ನೆಲೆ
ಸುರಿದುದನ್ನು ಹಿಡಿದು ಬಳಸಿಕೊಂಬುದೊಂದು ಕಲೆ.
ಹಸಿರು ಕೂಡ ಉಸಿರಾಡಲು ಬೇಕು ಗಾಳಿ, ಮಳೆ
ಬಸಿರಿನಲ್ಲಿ ಬೆಳೆವುದಕ್ಕು ಇಹುದು ಜೀವಕಳೆ.

ದೇಶವೆಂದರೊಂದು ಮನಸು, ನೂರು ಕನಸು-ಗುರಿ
ಭಾಷೆಯಲ್ಲಿ ಹಾಸು-ಹೊಕ್ಕು, ಬೀಸು ನವಿಲ ಗರಿ.
ರಸಾಯನದಿ ಹತ್ತು ಬಗೆಯ ಹಣ್ಣು-ಬಣ್ಣ ರುಚಿ
ಉಳಿಸಿಕೊಂಡುದೆಂತು ಅಂತೆ ಸಹಬಾಳ್ವೆಯ ಶುಚಿ.

ಈ ಸುನೀತ ನವನೀತವ ಕಾಸಿ ತುಪ್ಪ ತೆಗೆ
ತಳಕಿಳಿಯಲಿ, ಗಷ್ಟು ಮೇಲೆ ತಿಳಿಯಾಗಲಿ ಬಗೆ.

ನೀವೇ ಪ್ರಮಾಣು

೧

ಜೀವನ-ಭಾವನೆಯ ಸ್ವಂತ ಅನುಭವಕ್ಕೆ ಇದು
ಪ್ರಮಾಣ. ಉದ್ದಿಷ್ಟವಸ್ತುನಿಷ್ಠತೆಯಲ್ಲ.
ಶಾಶ್ವತ ಸತ್ಯ ಸ್ಥಾಪಿಸುವ ಜಂಜಾಟವಿಲ್ಲ.
ತತ್ವಜಿಜ್ಞಾಸೆ: ಜ್ಞೇಯ ಪ್ರಾಧಾನ್ಯ ಕೂಡದು.
ದೃಷ್ಟಿಕೋನವೆ ಮುಖ್ಯ. ಅದನು ಹೀಗೆನಬಹುದು:
'ಭಾವಗೀತಾರ್ಥ ದರ್ಶನ', ತೀರ ವ್ಯಕ್ತಿಗತ
ನೋಟವೆಂಬರ್ಥದಲಿ; ಉಳಿದೆಲ್ಲ ರಕ್ತಗತ.
ಎತ್ತರದ ಗುರಿಗೆ ಹಿಂಜರಿಕೆ. ಓದುಗರ ಮಿದು-
ವೆದೆಗೆ ಮೀರಿದ ನಿರೀಕ್ಷೆ. ಯೋಚನೆ-ಸತ್ತ್ವ
ಇದ್ದಂತೆ ಹೇಳುವ ಗದ್ಯ. ಒಂದು ರೀತಿಯಲಿ
ಸಾಹಜಿಕ. ನೆಲದಡಿಯ ಮಣ್ಣಿಗಂಟಿಕೊಳ್ಳಲಿ
ಬದುಕು. ಆ ತೃಪ್ತಿ ಹುಲ್ಲು ಮೊಳೆಯಿಸುವ ತತ್ವ.
ಇಂಥ ಸಂಬಂಧದಲಿ ಆತ್ಮ ಮಿಲಿಗುಟ್ಟುವದು
ಕಾಣದ ಕೈಯ ಕೂಸು ಮುಗ್ಧನಗೆ ಸೂಸುವದು.

೨

ಯಾರೇ ಇರಲಿ, ಈ ನೆಲವ ಹೀರಿಕೊಂಡಿರಲು
ಚೇತನವೆಷ್ಟು ಹಗುರ, ಮೈತುಂಬ ಚಿಗುರು!
ಮಣ್ಣನು ಕೊಡವಿ ಮೇಲೇಳಬೇಕಲ್ಲ ಮೊದಲು.
ಅಕ್ಷರದೊಳಗೆ ಲಕ್ಷೋಪಲಕ್ಷ ನಕ್ಷತ್ರಗಳು-
ನನ್ನ ಅಸ್ತಿತ್ವದೊಳಗಿನ ಹೊಳಪು ತನ್ನತನ-
ಕಿದೆ ಸಾಕ್ಷಿ. ಮೂಲ ಪ್ರವೃತ್ತಿಗಳ ಸಂಘರ್ಷ
ಓದು-ಬರಹಕೆ ಕಾಲುದಾರಿ ಪಯಣದ ಹರ್ಷ.
ಅಪರಿಚಿತ ಪ್ರತಿಭೆಗಳ ಆಕಸ್ಮಿಕದ ಸಂಚಲನ.

ಪ್ರಾಚೀನದಗ್ಗದಾವೃತ್ತಿಗಳ ಪುಟವ ತೆರೆ-
ದಂತೆ 'ಅಘಟಿತ ಘಟನಾ ನೂತನಬ್ರಹ್ಮ'ರಿಗೆ
ಅಪರಿಮಿತ ಸಂತೋಷ. ತತ್ತ್ವಶಾಸ್ತ್ರದ ಒಳಗೆ
ಹೊಕ್ಕು ಹೊರಬರಲಾರೆ. ನೇರ ಬದುಕನ್ನರಿವೆ.
ಹೊರಗಣವ-ಒಳಗಣವನೆಂಬ ತರ್ಕದ ತೀಟೆ-
ಬಸವಳಿದು ಬೆಂಡಾಗಲೆ? ರಸದಾಳಿ ಕಬ್ಬಾಗಲೆ?

ಚೊಕ್ಕ ಚಿನ್ನವೆ ಬೇಕು

ಐವತ್ತು ದೀವಳಿಗೆ ಮುಡಿದ ಹೊಂಬೆಳಕಿನಲಿ
ಸಿಂಗಾರಗೊಂಡ ಸಿರಿಗನ್ನಡದ ತೇರು
ಯಾವತ್ತು ಮುಗ್ಗರಿಸದಂತೆ ಮುನ್ನಡೆದಿಹುದು
ಎಲ್ಲ ಹಿರಿಯರ ಪುಣ್ಯ: ನಾವೆಷ್ಟರವರು?

ದಾರಿಯಲಿ ನೂರೆಂಟು ತಗ್ಗು-ದಿನ್ನೆಗೆ ಹಾಯ್ದು
ಅಸಮತೋಲನದಲ್ಲು ತೂಕ ಹಿಡಿದು
ಸಾಗಿ ಬಂದುದೆ ಹೆಚ್ಚು, ಆಗೀಗ ಎಚ್ಚರಿಸಿ
ಕೈಹಿಡಿದು ನಡೆಸಿದರು ಇಂಥ ಪಾಡು!

ಹೂವು-ಹಣ್ಣೇ ಸಾಕು, ಮದ್ದು ಹಾರಿಸಬೇಕೆ?
ಸಾಧನೆಗೆ ತಕ್ಕಷ್ಟೆ ವಾದ್ಯವೃಂದ,
ಅಖಂಡ ಕರ್ನಾಟಕದ ಶಂಖದೋಂಕಾರವೇ
ಮೊಳಗಲೆಂದಿಗು ನಮ್ಮ ಕಿವಿಯ ತುಂಬ.

ನಮ್ಮ ನುಡಿ, ನಮ್ಮ ಜನ, ನಮ್ಮತನವನ್ನುಳಿಸಿ
ಹಬ್ಬಿ ಬೆಳೆಯಿರಿ ಜಗದ ಉದ್ದಗಲಕು
ಎಂಥ ಮಹಡಿಗು ಬೇರೆ ಬೇರೆ ಹಂತಗಳುಂಟು
ಪಂಥ ಕಟ್ಟಿದರಿಲ್ಲ; ಹೆಜ್ಜೆ ಹಾಕು.

ಎದುರು ವಿದ್ಯುನ್ಮಾನ ಮಾಧ್ಯಮ ಸವಾಲುಗಳೆ?
ಸಿದ್ಧಗೊಳಿಸಿರಿ ಭಾಷೆ ಬೆಸುಗೆ ಹಾಕಿ,
ಜಾಗತೀಕರಣಕ್ಕು ಏಕೀಕರಣ ದೀಕ್ಷೆ
ರೈತ, ಕಾರ್ಮಿಕ, ಕೂಲಿಗಗ್ರ ಪೂಜೆ.

ನಮ್ಮೊಲುಮೆ ಸಂಸ್ಕೃತಿಯ ಬೇರು ಆಳಕ್ಕಿಳಿಯೆ
ಹತ್ತು ದಿಕ್ಕಿಗು ಕೊಂಬೆ ಚಾಚಬಹುದು,
ಭೋಗಲಾಲಸೆಯ ನವನಾಗರಿಕತೆಯ ಬಲೆಗೆ
ಬಿದ್ದ ಮೀನುಗಳೆದ್ದು ಬರಲಾರವು.

●

ಕವಿತೆಗೆ

ಹೋಗಬೇಡ ಕವಿತೆ ನೀನು, ಬಾಗಬೇಡ ಯಾರಿಗೂ
ತೂಗಿ ನೋಡಿ ಬೆಲೆಯ ಕಟ್ಟು ಹೂವಿನಂತೆ ನಾರಿಗೂ.
ನಿನ್ನ ರೂಪ ಲಾವಣ್ಯಕೆ ಬೀಗಬೇಡ ಎಂದಿಗೂ
ಬತ್ತದಿಹುದು ಚೆಲುವಿನೂಟೆ ನೆಲದ ಒಡಲೊಳಿಂದಿಗೂ.
ಒಡೆದುಹೋದ ಮನಸುಗಳಲಿ ಹಗೆಯ ಕಿಡಿಯ ನಂದಿಸು
ಸಿಡಿದು ನಿಂತ ಹೃದಯಗಳನು ಪ್ರೀತಿಯಲ್ಲಿ ಬಂಧಿಸು.
ದುಡಿವ ಕೈಗೆ ಶಕ್ತಿ ಬರಲಿ; ಮಳೆಯ ಸುರಿಸು ಧರಣಿಗೆ
ಹಳೆಯ ಕೊಳೆಯ ಕೊಚ್ಚಿ ತೊಳೆಯೆ ಹಚ್ಚಹಸಿರು ಹಾಡಿಗೆ.
ಹಾಡಿಗೆದೆಯು ಮಿಡಿಯುವಾಗ ಬೇಡ ವಾದ್ಯದಬ್ಬರ
ಗಾಢ ಮೌನದಲ್ಲಿ ತಾನೆ ಮೂಡಿ ಬಹನು ಚಂದಿರ.
ಎಂದಾದರು ಕಂಡಿದ್ದೆವೆ ಇಂಥ ಹನಿಯ ತಂಪನು?
ನೇಗಿಲ ಗೆರೆ ಹೊಮ್ಮಿಸಿಹುದು ಕಸ್ತೂರಿಯ ಕಂಪನು.
ಇಡಿಯ ಬದುಕ ಹಿಡಿಯಲೆಂದು ತಡವರಿಸುವ ಪ್ರೀತಿಯೆ
ಹೊಡೆ ಹಾಯಲಿ ಹೊಲವು, ತೆನೆಯ ಕಾಳೆಲ್ಲವು ಕವಿತೆಯೆ.

[illegible] 9448517075



'ಜೀವ ಜೀವಾಳ' ಚೆನ್ನವೀರ ಕಣವಿಯವರ ಸಮಗ್ರಕಾವ್ಯದ ಸ್ವರೂಪವನ್ನು ಪ್ರತಿಫಲಿಸುವುದು ಮಾತ್ರವಲ್ಲ, ಅವರ ಕಾವ್ಯದ ಬೆಳವಣಿಗೆಯನ್ನೂ ಸೂಚಿಸುತ್ತದೆ. ಸಮಕಾಲೀನ ಪರಿಸರದೊಂದಿಗೆ ಅವರು ನಡೆಸಿದ ಸಂವಾದವನ್ನು ಇಲ್ಲಿನ ಕವಿತೆಗಳು ಪ್ರತಿನಿಧಿಸುತ್ತವೆ.

ಎಂತಹ ಸಂದರ್ಭದಲ್ಲೂ ಜೀವಚೈತನ್ಯದ ಸೆಲೆಯನ್ನು ಉಳಿಸಿಕೊಳ್ಳಬೇಕು; ಬದುಕಿನ ಬಗೆಗಿನ ಪ್ರೀತಿಯನ್ನು ಕಳೆದುಕೊಳ್ಳಬಾರದು; ಉದ್ವಿಗ್ನಗೊಳ್ಳದೆ ಸಮಾಧಾನವಾಗಿ ಈ ಬದುಕನ್ನು ಅನುಭವಿಸಬೇಕೆನ್ನುವುದು ಕಣವಿಯವರ ಅಭೀಪ್ಸೆ. ಈ ಸಮಚಿತ್ತದ ಹದದಿಂದಾಗಿ, ನಿರುದ್ವಿಗ್ನ ಸ್ಥಿತಿಯಿಂದಾಗಿ ಕಣವಿಯವರ ಕಾವ್ಯ ಮೆಲುದನಿಯ ಕಾವ್ಯವಾಗಿದೆ. ಹದಗೆಡದೆ ಮಾತನಾಡುವುದು, ನಿರಂತರವಾಗಿ ಕಾವ್ಯೋತ್ಸಾಹವನ್ನು ಕಾಪಾಡಿಕೊಳ್ಳುವುದು ಅವರಿಗೆ ಸಾಧ್ಯವಾಗಿದೆ. ಚೆನ್ನವೀರ ಕಣವಿಯವರ ಸಮಗ್ರಕಾವ್ಯವನ್ನು ಗಮನಿಸಿದಾಗ ಚೆಲುವಿನ ಆರಾಧನೆ ಹಾಗೂ ಆರೋಗ್ಯಕರ ಸಮಾಜವನ್ನು ಕಟ್ಟುವ ಹಂಬಲ ಇವೆರಡನ್ನೂ ಒಂದೇ ಬಿಂದುವಿನಲ್ಲಿ ಹಿಡಿಯುವ ರೀತಿಯಲ್ಲಿ ಅವರ ಕವಿತೆಗಳ ರಚನಾವಿನ್ಯಾಸ ರೂಪುಗೊಂಡಂತೆ ತೋರುತ್ತದೆ.

ನಮ್ಮ ಕಾಲದ ಶ್ರೇಷ್ಠ ಕವಿಯೊಬ್ಬರ ಪ್ರಾತಿನಿಧಿಕ ಕವಿತೆಗಳ ಸಂಕಲನ 'ಜೀವ ಜೀವಾಳ'.

SINCE 1967 Sapna

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 40114455

Shop online : www.sapnaonline.com

ISBN : 978-81-280-1629-5

ಬೆಲೆ : ₹ 90/-